Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–28 | ಜುಲೈ 8–14, 2024 | ಪುಟ 16 | ರೂ.10/–
Volume-18 | Issue-28 | July 8-14, 2024 | Pages:16 | Price: 10/-



ಹತ್ರಾಸ್: ಮೌಢ್ಯ ಕಾಲ್ತುಳಿತಕ್ಕೆ 121 ಬಲಿ!!



'ನೀಟ್' ರದ್ದತಿಗಾಗಿ ವಿದ್ಯಾರ್ಥಿಗಳ ಪ್ರತಿಭಟನೆ

ಈ 'ಕ್ರಿಮಿನಲ್ ಕಾನೂನು'ಗಳನ್ನು ಅಮಾನತಿನಲ್ಲಿಡಿ

ಜಿಯೋ, ಏರ್ಟೆಲ್ ದರ ಹೆಚ್ಚಳ: ಜನರಿಗೆ 20,000 ಕೋಟಿ ಹೆಚ್ಚಿನ ಹೊರೆ

ಹಳೆಯ ಜಾಡಿನಲ್ಲೇ ಮೋದಿ ಸರ್ಕಾರ

ಇಂಗ್ಲೆಂಡ್ - ಲೇಬರ್‌ಗೆ ಭಾರಿ ಬಹುಮತ, ಆದರೆ....??

ಆಂಧ್ರಪ್ರದೇಶದ ರಂಗನಾಯಕಮ್ಮ ನವರು ಒಬ್ಬ ತೆಲುಗು ಭಾಷೆಯ ಮಾರ್ಕ್ಸ್‌ವಾದಿ ಲೇಖಕಿ ಮತ್ತು ವಿಮರ್ಶಕಿ. ಅವರು ಕಮ್ಯುನಿಸಂ ಮತ್ತು ಸ್ತ್ರೀವಾದದ ಪ್ರಮುಖ ಪ್ರತಿಪಾದಕರಾಗಿದ್ದಾರೆ. ಆಡುಮಾತಿಗೆ ಹತ್ತಿರವಾದ ಭಾಷೆಯನ್ನು ಬಳಸಿ ಮಾರ್ಕ್ಸ್‌ವಾದ ಕುರಿತಂತೆ ಹಲವು ಲೇಖನಗಳನ್ನು ಬರೆದಿದ್ದಾರೆ. ಅವರು 1973 ರಲ್ಲಿ ಮಾರ್ಕ್ಸ್‌ವಾದದ ಸಂಪರ್ಕಕ್ಕೆ ಬಂದ ನಂತರ, ಅಂದಿನಿಂದ ಆ ದೃಷ್ಟಿಕೋನದಿಂದ ಬರೆಯಲು ಪ್ರಾರಂಭಿಸಿದರು. ನವ ತೆಲಂಗಾಣ ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ರಂಗನಾಯಕಮ್ಮ ಅವರ ಲೇಖನವು ಕಂತುಗಳಲ್ಲಿ ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಲಿದೆ. ಕನ್ನಡಕ್ಕೆ ಸಿ.ಚಿ. ಅನುವಾದಿಸಿದ್ದಾರೆ.

‘ನಾಳಿನ ಕಾಮ್ರೇಡ್’ಗಳು

ಭಾಗ 2

ರವಿ: ‘ಲಾಭ’ ಪದ್ದತಿ ಎಲ್ಲಾ ದೇಶಗಳಲ್ಲಿಯೂ ಇದೆ ಗೊತ್ತೇ?

ಗೋಪಾಲ: ಗೊತ್ತಿದೆ. ಆದರೆ, ನೂರಕ್ಕೆ ಒಬ್ಬಿಬ್ಬರಿಗೆ ಮಾತ್ರ ಇದು ಗೊತ್ತು. ಉಳಿದ 98 ಜನರು, ಇನ್ನೂ ತಿಳಿದುಕೊಳ್ಳಬೇಕಾಗಿದೆ!

ರವಿ: ಲಾಭಕ್ಕಾಗಿ ಮಾತ್ರವಲ್ಲದೆ, ಲಾಭವನ್ನು ಸೇರಿಸದೆ, ‘ದರ’ ಎನ್ನುವುದು ಯಾವಾಗಲೂ ಇರೋದಿಲ್ಲ ಅಂತೀಯಾ ಗೋಪಾಲ್? ಸಾವಿರಾರು ಕಂಪನಿಗಳಲ್ಲಿ ಅವರಲ್ಲಿ ಹಲವರು ನಿರಂತರವಾಗಿ ಸರಕುಗಳನ್ನು ಮಾರಾಟ ಮಾಡುತ್ತಲೇ ಇರುತ್ತಾರೆ. ಅವರು ‘ಲಾಭ’ ಎಂಬ ಅಂಶವಿಲ್ಲದೆ ‘ದರ’ವನ್ನು ನಿಗಧಿಪಡಿಸುವುದಿಲ್ಲ ಅಂತೀಯಾ?

ಗೋಪಾಲ: ಆ ರೀತಿ ಮಾಡಿದರೆ ಅದು, ‘ಬಂಡವಾಳಶಾಹಿಗಳು ಬಯಸುವ ಉತ್ಪಾದನಾ ವಿಧಾನ’ ಹೇಗಾಗುತ್ತದೆ ರವಿ? ಬಂಡವಾಳಗಾರರಿಗೆ ಬರಬೇಕಿರುವುದು, ‘ಬಾಡಿಗೆ–ಬಡ್ಡಿ–ಲಾಭ’ ಎನ್ನುವ ಮೂರು ಆದಾಯಗಳು. ಗೊತ್ತೆ? ನಾನು ಅಂದು ಹೇಳಿದ್ದು ನೆನಪಿದೆಯಾ?

ರವಿ: ಅಂದು ನೀನು ಏನೋ ಹೇಳಿದೆ. ನಾನು ಅಂದೂ ಕೂಡ ಕೇಳಿದೆ ತಾನೆ? ‘ಆದಾಯ’ ಬಂದರೆ ತಪ್ಪೇನಿದೆ? ನಾವು ಕೋಪದಿಂದ ಏನನ್ನಾದರೂ ಹೇಳುತ್ತಿದ್ದೇವೆಯೇ?

ಗೋಪಾಲ: ಸಾಕು ಬಿಡು. ಬಾಯಿ ಮುಚ್ಚು. ತಿಳಿಯದೇ ಇದ್ದರೆ ಇನ್ನಷ್ಟು ಕೇಳು. ‘ಆದಾಯ’ ಎನ್ನುವ ಒಂದು ಮಾತನ್ನು ಹಿಡಿದುಕೊಂಡರೆ ಸಾಕೆ? ಅವು ‘ಸುಲಿಗೆ’ ಮಾಡಿ ಗಳಿಸಿದ ಸುಲಿಗೆ ಆದಾಯವಾಗಿದ್ದರೆ? ಆದೂ ಆದಾಯವೇನು? ಒಬ್ಬರು, "ಬಡ್ಡಿ, ನನ್ನ ಆದಾಯ" ಎಂದರೆ ಸರಿಯೇ? ಈ ಸಮಾಜವೆಲ್ಲಾ, ಶೋಷಣೆಯ ಆದಾಯಕ್ಕಾಗಿಯೇ, ಸುಲಿಗೆಕೋರರು ಇಟ್ಟುಕೊಂಡ ಕಾನೂನುಗಳಂತೆ, ಅವರ ಆಶಯಗಳಂತೆ, ‘ಪ್ರಭುತ್ವದ’ ಹೆಸರಿನಲ್ಲಿ ನಡೆಯುತ್ತಿರುವುದು ಎಂಬುದು ಗೊತ್ತೇ?”

ರವಿ: ನಿಜವಾಗಿಯೂ ಕ್ಷಮಿಸು. ನನಗೆ ಕೆಲವು ವಿಷಯಗಳು ತಿಳಿದಿವೆಯಾದರೂ, ನಿಜವಾಗಿಯೂ ನಾನು ಶ್ರದ್ದೆಯಿಂದ ಕೇಳಿಸಿಕೊಳ್ಳಲಿಲ್ಲ. ಹಾಗಾಗಿ ಈ ರೀತಿ ಮಾತಾಡಿಬಿಟ್ಟೆ. ಇದೀಗ ಎಲ್ಲವನ್ನೂ ಕೇಳಿಸಿಕೊಂಡೆ. ಆದರೆ ಗೋಪಾಲ್, ಉದ್ಯೋಗಗಳು ಬರುತ್ತಿಲ್ಲ ಎನ್ನುತ್ತಾರೆ, ಉದ್ಯೋಗ ಕೊಡುತ್ತಿಲ್ಲ ಎನ್ನುತ್ತಾರೆ. ಉದ್ಯೋಗಗಳು ಎಷ್ಟು ಹೆಚ್ಚು ಜನರಿಗೆ ಕೊಟ್ಟರೆ, ಅಷ್ಟು ಹೆಚ್ಚು ಲಾಭ ಬರುತ್ತದೆ ಎಂದು ತಿಳಿಯದೇನು ಆ ಬಂಡವಾಳಗಾರರಿಗೆ?

ಗೋಪಾಲ: ಹೌದು ರವಿ. ಒಳ್ಳೆಯ ಪ್ರಶ್ನೆ. ಒಳ್ಳೆಯ ಪ್ರಶ್ನೆ. ನಾನೂ ಈ ರೀತಿ ಯಾವಾಗಲೂ ಅಂದುಕೊಳ್ಳಲಿಲ್ಲ. ಹೆಚ್ಚು ಉದ್ಯೋಗ ಕೊಟ್ಟರೆ, ಅದರಿಂದ ಅವರಿಗೆ ಹೆಚ್ಚು ಲಾಭವೇ ಅಲ್ಲವೇ! ಮತ್ತೆ, ಅವರೇಕೆ ಉದ್ಯೋಗಗಳನ್ನು ಕೊಡುವುದಿಲ್ಲ? ಏಕೆ ಉದ್ಯೋಗದಿಂದ ತೆಗೆದುಹಾಕುತ್ತಾರೆ? ನಾಲ್ಕೈದು ಜನರ ಕೆಲಸವನ್ನು ಒಬ್ಬರಿಂದಲೇ ಮಾಡಿಸಿಕೊಳ್ಳುತ್ತಾರಲ್ಲ ಯಾಕೆ? ಆದರೂ, ಈ ‘ನಿರುದ್ಯೋಗ’ ಸಮಸ್ಯೆ ಯಾಕೆ? ಹಲವು ಲಕ್ಷ ಜನರು ಉದ್ಯೋಗಳಿಲ್ಲದೆ ಯಾಕಾಗಿ ಇರುತ್ತಾರೆ? ನಾವು ನಿಜವಾಗಿಯೂ ಆಲೋಚಿಸಬೇಕಿದೆ. ಹೌದು, ಹೆಚ್ಚು ಜನರಿಗೆ ಉದ್ಯೋಗಗಳನ್ನು ಕೊಟ್ಟು ಹೆಚ್ಚು ಲಾಭವನ್ನು ಯಾಕಾಗಿ ಗಳಿಸುವುದಿಲ್ಲ?

ಗೋಪಾಲ್ ಹಾಗೆ ಹೇಳಿದ್ದು ರವಿಗೆ ವಿಚಿತ್ರ ಅನಿಸಿತು. ಗೋಪಾಲ್ ಗೆ ರವಿ ಹೇಳಿದನು. "ಹೂಡಿಕೆದಾರರು ಬಯಸುವುದೆಲ್ಲವೂ ಲಾಭಕ್ಕಾಗಿಯೇ ಅಲ್ಲವೇ ಗೋಪಾಲ್? ಅವರು ತಮಗೆ ಲಾಭ ಕಡಿಮೆಯಾಗುವಂತೆ ಮಾಡಿಕೊಳ್ಳುತ್ತಾರೆಯೇ? ಆ ರೀತಿ ಯಾಕೆ ಮಾಡಿಕೊಳ್ಳುತ್ತಾರೆ ಹೇಳು? ಮಾಡಿಕೊಳ್ಳುವುದಿಲ್ಲ ತಾನೇ? ನನಗೆ ಹೇಗೆನಿಸುತ್ತದೆ ಎಂದರೆ, ಹೆಚ್ಚು ಜನರು ಮಾಡುವ ಕೆಲಸದಿಂದ ಬರುವ ಲಾಭಕ್ಕಿಂತ, ಆ ಕೆಲಸವನ್ನು ಕಡಿಮೆ ಜನರಿಂದ ಮಾಡಿಸಿದರೆ ಹೆಚ್ಚು ಲಾಭ ಬರುತ್ತದೆ ಎಂದು ಭಾವಿಸಿದ್ದಾರೇನೋ ಅವರು! ಆ ರೀತಿ ನಾವೂ ಅಂದುಕೊಳ್ಳಬಾರದು ಅಂತ್ತಿಯಾ?“

ಗೋಪಾಲ್ ಈ ಬಾರಿ ಆಶ್ಚರ್ಯಪಟ್ಟು ಖುಷಿಯಿಂದ ರವಿಯ ಕೈಗಳನ್ನು ಹಿಡಿದುಕೊಂಡನು. "ರವಿ! ನಾನು ನಿನ್ನಲ್ಲಿ ಕ್ಷಮೆ ಕೇಳುತ್ತೇನೆ. ಕ್ಷಮಿಸು. ಇದುವರೆಗೆ ನಿನ್ನನ್ನು ಸಾಮಾನ್ಯ ಅಂದುಕೊಂಡಿದ್ದೆ. ನಿನ್ನ ಮೇಲೆ ಅಷ್ಟು ಕೋಪ ಬಂದಿತ್ತು. ನೀನು ಸುಲಿಗೆ ಆದಾಯವನ್ನು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಆ ಕ್ಷಣ ಅನಿಸಿತು. ಕೋಪ ಬಂತು. ತಪ್ಪು ನನ್ನದೇ.”

ರವಿ: ಅಯ್ಯೋ, ಯಾಕಿಷ್ಟು ಪಶ್ಚಾತ್ತಾಪ? ಯಾವುದಾದರೂ ವಿಷಯಗಳನ್ನು ಮಾತನಾಡುವಾಗ ಬಹಳಷ್ಟು ಬೇರೆ ಬೇರೆ ರೀತಿಯಲ್ಲಿ, ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಅಂದುಕೊಂಡಿರುತ್ತೇವೆ. ಅದಕ್ಕೆ ಇಷ್ಟೊಂದು ಚಿಂತೆನಾ? ಒಂದುವೇಳೆ ನೀನೇ ಆ ಮಾತು ಹೇಳಿದರೆ, ಅದು ತಪ್ಪು ಅಂದುಕೊಳ್ಳುವುದಿಲ್ಲ. ಸಂದರ್ಭ ಅಂಥದ್ದಾದರೆ ಹಾಗೆ ಹೇಳುತ್ತೇವೆ. ಅದು ಅಷ್ಟೊಂದು ತಪ್ಪೇ?



ಸರಿ, ಕ್ಷಮಿಸಬೇಕಾ! ತುಂಬಾ? ಸಲೀಸಾಗಿ ಮಾತನಾಡು! ನಾನು ಕೇಳಿದಕ್ಕೆ ಹೇಳು. ಹೂಡಿಕೆದಾರರಿಗೆ ಲಾಭವೇ ಬೆಕೆಂದರೆ, ಹೆಚ್ಚು ಜನರಿಗೆ ಉದ್ಯೋಗ ನೀಡಿ, ಹೆಚ್ಚು ಲಾಭ ಗಳಿಸಿಕೊಳ್ಳುವುದಿಲ್ಲವೇ? ಇದನ್ನು ನನಗೆ ತಿಳಿಯುವ ಹಾಗೆ ಹೇಳು.

ಗೋಪಾಲ: ಚೆನ್ನಾಗಿ ಆಲೋಚಿಸುತ್ತಿದ್ದೀಯ ರವಿ. ನೀನೇ ಆಲೋಚಿಸು! ನಿಜವಾಗಿ ಪ್ರತಿಯೊಂದು ಕೆಲಸಕ್ಕೂ, ಒಬ್ಬೊಬ್ಬರನ್ನು ಒಂದೊಂದು ಕೆಲಸಕ್ಕೆ ನಿಯೋಜಿಸುತ್ತಾರೆ. ದಿನನಿತ್ಯ, ‘ತಂತ್ರಜ್ಞಾನ, ತಂತ್ರಜ್ಞಾನ ಬೆಳೆಯಲಿ’ ಎನ್ನುತ್ತಾರೆ. ಎಷ್ಟು ಸಮಯ ಯಂತ್ರಗಳ ಕ್ರಾಂತಿ ಬೆಳೆಯಬೇಕು! ರೈಲುಗಳನ್ನು ನೋಡು, ಗಂಟೆಗೆ ಇಷ್ಟು ಮೈಲಿ ಹೋದರೇ, ಇಲ್ಲ, ಅವು ಎರಡರಷ್ಟು, ಮೂರರಷ್ಟು ವೇಗದಲ್ಲಿ ಸಂಚರಿಸಬೇಕು! ಒಂದಿಬ್ಬರು ಡ್ರೈವರ್‌ಗಳಿಂದ ನಾಲ್ಕು ಪಟ್ಟು ಕೆಲಸ ನಡೆಯಬೇಕು! ಕೆಲಸ ಹೆಚ್ಚಾಗಬೇಕು ಎಂದು ನೋಡುತ್ತಾರೆ ವಿನಃ, ಕೆಲಸ ಮಾಡುವವರ ಕುರಿತು ಕಾಳಜಿ ಇರುವುದಿಲ್ಲ. ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ಮೌಲ್ಯವನ್ನು ಲೆಕ್ಕಹಾಕಲಾಗುತ್ತದೆ.

ಕೆಲಸಗಳು ಹೆಚ್ಚಿದ ಸಂದರ್ಭದಲ್ಲಿ ಸಂಬಳ ಸ್ವಲ್ಪ ಹೆಚ್ಚಾದರೂ, ನಾಲ್ಕು ಜನರ ಉದ್ಯೋಗಗಳು ಹೋಗುತ್ತವೆ ಅಲ್ಲವೇ? ಇದರ ಫಲವಾಗಿ ಹಿಂದೆ ಬರುತ್ತಿದ್ದುದಕ್ಕಿಂತ ಲಾಭ ಹೆಚ್ಚಾಗುತ್ತದೆಯಲ್ಲವೇ? ನೀನು ಲೆಕ್ಕದಲ್ಲಿ ಬುದ್ದಿವಂತ. ನಿನ್ನ ಲೆಕ್ಕಾಚಾರದಿಂದ, ಬೂರ್ಜ್ವಾಗಳ ಬುದ್ಧಿವಂತಿಕೆಯನ್ನು ಚೆನ್ನಾಗಿ ಲೆಕ್ಕಾಚಾರ ಮಾಡಬಹುದು.

ರವಿ: ಹೌದು! ಇತ್ತೀಚೆಗೆ ಡ್ರೈವರ್ ಗಳೇ ಇಲ್ಲದ ಕಾರುಗಳ ಬಗ್ಗೆ ಹಲವಾರು ಜಾಹೀರಾತುಗಳು ಬರುತ್ತಿವೆ. ಮಾಡಬೇಕೆಂದರೆ, ಅನೇಕ ಬದಲಾವಣೆಗಳು ಸಾಧ್ಯ, ಒಂದೇ ಎರಡೇ! ಅಂತಹ ಕಾರುಗಳಿಗೆ ಇಂಜಿನ್ ತಯಾರಿಸುವ ಮಹಾನ್ ಇಂಜಿನಿಯರ್ಗಳಿಗೆ ನಾಲ್ಕು ಸಾವಿರ ಸಂಬಳವಲ್ಲ, ನಲವತ್ತು ಸಾವಿರ ಹೆಚ್ಚಿಸಿದರೂ ಚಾಲಕರಿಲ್ಲದ ಕಾರುಗಳೇ ಮಾರಾಟವಾಗುತ್ತವೆ. ಕೋಟಿ ಕೋಟಿ ಲೆಕ್ಕದಲ್ಲಿ ಮಾರಾಟ ಹೆಚ್ಚಾದರೆ, ಆ ಹೊಸ ಕಾರು ಕಂಪನಿಗಳಿಗೆ ಎಷ್ಟು ಹಣ ಬರುತ್ತದೆ!

ಗೋಪಾಲ: ಹಣವಲ್ಲ ರವಿ, ಅದು ಲಾಭ.

ರವಿ: ಹೌದು. ಲಾಭ ಎನ್ನಬೇಕು. ಒಂದು ತಂತ್ರಜ್ಞಾನವನ್ನು ಕನಿಷ್ಟ ಇದಕ್ಕಿಂತ ಹೆಚ್ಚಿಸಬಾರದು–ಎಂಬ ಮಿತಿ ಇಲ್ಲವೇ? ಮನುಷ್ಯರ ಯೋಗಕ್ಷೇಮವನ್ನು ಹೆಚ್ಚಿಸಲು, ತಂತ್ರಜ್ಞಾನವನ್ನು ಅತಿಯಾಗಿ ಹೆಚ್ಚಿಸಬಾರದು; ಬೆಳವಣಿಗೆಗೆ ಮಿತಿ ಎಂಬುದೇ ಇಲ್ಲವೇ?

ಗೋಪಾಲ: ರವಿ! ನೀನು ಅದ್ಭುತವಾಗಿ ಆಲೋಚಿಸುತ್ತಿದ್ದೀಯ. ಇನ್ನೂ ಹೆಚ್ಚು ಸಮಯ ಇಲ್ಲೇ ಕುಳಿತರೆ, ನಿನಗೆ ತರಗತಿ ಹೋಗುತ್ತದೆ.

ರವಿ: ತರಗತಿ ಹೋಗುತ್ತದೆ ನಿಜ, ಆದರೆ ಈ ಸಮಯದಲ್ಲಿ ಅದ್ಯಾವುದೋ ಸಿನಿಮಾ ರಿಲೀಸ್ ಆಗಿದೆ. ಇಂದಿನ ತರಗತಿಯಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳೂ ಇರೋದಿಲ್ಲ. ಶಿಕ್ಷಕರೂ ಬರದೇ ಹೋಗಬಹುದು. ಇನ್ನು ಅರ್ಧ ಗಂಟೆ ಗೋಪಾಲ್, ನಿನ್ನ ಕ್ಲಾಸಿನವರೂ ಹೋಗುತ್ತಾರೆ. ಸ್ವಲ್ಪ ಸಮಯ ಇರು.

ಗೋಪಾಲ: ತಡವಾಗಿ ಎದ್ದೇಳೋಣ. ಒಂದು ವಿಷಯ ಅನೇಕ ಬಾರಿ ಯೋಚಿಸಿದೆ. ಈಗ ‘ಮನೆ’ಗಳನ್ನು ನೋಡು. ಅವುಗಳನ್ನು ‘ಮನೆಗಳು’ ಎಂದು ಕರೆಯಬಹುದೇ? ಅಪಾರ್ಟ್‌ಮೆಂಟ್‌ಗಳು! ಮೇಲೆ! ಮೇಲೆ! ಆಕಾಶಕ್ಕೆ ಹೋಗುವುದು ಮನೆ ಎಂದರೆ? ಅಲ್ಲಿ ಒಂದೇ ಒಂದು ಮರವೂ ಕಾಣಿಸುವುದಿಲ್ಲ. ಮಕ್ಕಳು ಮನೆಯಲ್ಲಿಯೋ, ಪಡಸಾಲೆಯಲ್ಲಿಯೋ ಆಟವಾಡಿಕೊಳ್ಳಲು ಜಾಗವಿಲ್ಲ. ಆಟವಾಡಲು ಮಕ್ಕಳನ್ನು ಉದ್ಯಾನವನಗಳಿಗೆ ಕರೆದೊಯ್ಯಬೇಕಿದೆ. ನೆಲದ ಮೇಲೆ ಮನೆಗಳಿಗೆ ಸ್ಥಳವಿಲ್ಲ ಎನ್ನುತ್ತಾರೆ?.

ರವಿ: ಅದೇ ಕಾರಣವಾಗಿದ್ದರೆ, ನಾಲ್ಕೈದು ಅಂತಸ್ತುಗಳ ಎತ್ತರದವರೆಗೆ ಮಾತ್ರವೇ ತುಂಬಾ ವಿಶಾಲವಾಗಿ ಇರಬಹುದು ಅಲ್ಲವೆ?

ಗೋಪಾಲ: ನೀನು ಐದು ಅಂತಸ್ತಿನ ವರೆಗೆ ಅಂತೀಯ ರವಿ! ನನಾದರೆ ಎರಡನೇ ಮೂರನೇ ಮಹಡಿ ದಾಟಿದರೆ, ಅದು ಅಸಹ್ಯವೆ. ಯಾರೋ ಒಬ್ಬ ಡಾಕ್ಟರ್, ತೋಟದಲ್ಲಿ ಇರುವ ಮನೆ ಮಾರಿ, ಅಪಾರ್ಟ್‌ಮೆಂಟ್‌ನಲ್ಲಿ ಪ್ಲಾಟ್ ಖರೀದಿಸಿದರಂತೆ! ಅವರಿಗೆ ನೆಲದ ಮನೆ ಹೇಗೆ ಕೆಲಸಕ್ಕೆ ಬಂದಿದೆಯೊ!

ರವಿ: ಆ ತೋಟದ ಮನೆಯನ್ನು ಮಾರಿದಾಗ ಎಲ್ಲಿ ಮನೆ ಖರೀದಿಸಿದನು?

ಗೋಪಾಲ: ಇನ್ನೆಲ್ಲಿ, ಅಪಾರ್ಟ್ ಮೆಂಟ್ ನ 93 ನೇ ಮಹಡಿಯಲ್ಲಿ!

ರವಿ: ಛೇ! ಎಲ್ಲಾ ಮಹಡಿಗಳಲ್ಲಿರುವ ಅವುಗಳನ್ನು ಮನೆ ಅಂತಾರಾ?

ಗೋಪಾಲ: ಇದು ಬಂಡವಾಳಶಾಹಿ ನಾಗರಿಕತೆ! ಈ ವಿಧಾನದ ಅರ್ಥವೇನು ಎಂದರೆ, ಬೂರ್ಜ್ವಾ ಏನು ಹೇಳುತ್ತಿದೆ ಗೊತ್ತಾ? ಅಪಾರ್ಟ್‌ಮೆಂಟ್‌ಗಳಿದ್ದರೆ ಬಡವರಿಗೂ ಮನೆಗಳು ಇರುತ್ತವೆ ಎನ್ನುತ್ತದೆ. ಅದು ಇಷ್ಟ ಇಲ್ಲದಿದ್ದರೆ ನಮ್ಮಂತಹ ಜನರಿಗೆ, ಬಡವರಿಗೆ ಗುಡಿಸಲೇ ಇರಬೇಕು–ಅನ್ನುವುದಿಲ್ಲ.

ರವಿ: ಆ ಅಪಾರ್ಟ್ಮೆಂಟ್ಗಳಲ್ಲಿ ಇರುವವರು ಏನಂತಾರೆ?

“ಆಕಾಶದಲ್ಲಿ ಕೋಳಿ ಬುಟ್ಟಿಗಳಂತೆ ಅಪಾರ್ಟ್‌ಮೆಂಟ್‌ಗಳಲ್ಲಿ ಇದ್ದರೆ, ಅವರು ‘ನಾವು ಶ್ರೀಮಂತರಾದೆವು’ ಅಂದುಕೊಂಡಂತೆ ಇರುತ್ತಾರೆ!" ಎಂದು ಗೋಪಾಲ್ ನಿಟ್ಟುಸಿರುಬಿಟ್ಟ.

ರವಿ: ಬಡವರು ಅದಕ್ಕಿಂತ ಹೆಚ್ಚು ಎಂದು ಹೇಗೆ ಹೇಳಬಹುದು? ಅವರಿಗೆ ಸ್ವಲ್ಪ ಬದಲಾವಣೆಯಾಗಿ ಇರುತ್ತದೆ ಅಲ್ಲವೇ? ಈಗ, ಬೂರ್ಜ್ವಾ ವಿಜ್ಞಾನವು ಈ ರೀತಿ ಕಲಿಸುತ್ತದೆ! ಸಮಾಜಕ್ಕೆ ಇದು ಬೆಳವಣಿಗೆಯಾಗುತ್ತದೆಯೇ?

ಗೋಪಾಲ: ಇಲ್ಲ ರವಿ, ಇದು ಮತ್ತೊಂದು ರೀತಿಯ ಹೊಸ ಶ್ರಮ ಶೋಷಣೆ. ಲಾಭ ಗಳಿಸುವುದಕ್ಕಾಗಿ ಹೊಸ ಮಾರ್ಗ. ಕಡಿಮೆ ಜಾಗದಲ್ಲಿ ಹೆಚ್ಚು ಮನೆಗಳು.

ರವಿ: ಸಮಾಜದಲ್ಲಿ ಶ್ರಮ ಶೋಷಣೆ ನಡೆಯುತ್ತಿದ್ದರೆ, ಅದನ್ನು ಸಹಿಸಿಕೊಳ್ಳುತ್ತಿದ್ದಾರೆಂದರೆ, ಪುರಾತನ ಕಾಲದಿಂದಲೂ ಇದೆಯಾ ಈ ಘೋರ?

ಗೋಪಾಲ: ಅಷ್ಟೇ! ಮತ್ತೆ ಐದನೇ ತರಗತಿಯ ಮಗುವಿನಂತೆ ಏನೂ ತಿಳಿಯದಂತೆ ಹೊಸದಾಗಿ ಮಾತನಾಡುತ್ತಿದ್ದೀಯಾ ಯಾಕೆ? ಪದವಿಗಳನ್ನು ಪಡೆಯುತ್ತಿದ್ದೀಯ! ಅದರಿಂದ ತಿಳಿಯಲಿಲ್ಲವೇ? ಈ ಸಮಾಜ, ಸಾವಿರಾರು ವರ್ಷಗಳ ಹಿಂದೆ ಗುಲಾಮರ ಮಾಲೀಕರ ಕ್ರೂರತೆಯ ಅಡಿಯಲ್ಲಿ ಪ್ರಾರಂಭವಾಯಿತು. ಅದು ಊಳಿಗಮಾನ್ಯ ಪದ್ಧತಿಯೊಂದಿಗೆ ಸ್ವಲ್ಪಮಟ್ಟಿಗೆ ಬೆಳೆಯಿತು. ಅದೂ ಕೂಡಾ ಒಂದು ಬಂಡವಾಳಶಾಹಿ ವ್ಯವಸ್ಥೆಯಾಗಿ, ಇನ್ನೂ ಸ್ವಲ್ಪ ಹೆಚ್ಚು ಬೆಳೆಯುತ್ತದೆ. ಈಗ ಈ ಎಲ್ಲಾ ಶೋಷಣೆಗಳಿಂದ ವಿಮುಕ್ತಿ ಬೇಕು!

(ಮುಂದುವರಿದಿದೆ)

ಸಂಪಾದಕೀಯ

ಕಾಂಗ್ರೆಸ್ ಸರಕಾರದ ಜನವಿರೋಧಿ ಧಾಳಿಗಳು

ಲೋಕಸಭಾ ಚುನಾವಣೆ ಬಳಿಕ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನ ವಿರೋಧಿ ನೀತಿಗಳ ಧಾಳಿಗಳನ್ನು ಒಂದರ ಮೇಲೆ ಮತ್ತೊಂದರಂತೆ ಹರಿಯ ಬಿಡತೊಡಗಿದೆ. 2023 ರಲ್ಲಿನ ಜನಾದೇಶ ಮತ್ತು ಲೋಕಸಭಾ ಚುನಾವಣಾ ಲಾಭದ ನಿರೀಕ್ಷೆಯ ಒತ್ತಡದ ಹಿನ್ನೆಲೆಯಲ್ಲಿ ಒಂದು ಮಿತಿಯಲ್ಲಿ ಅದುಮಿ ಹಿಡಿದಿಟ್ಟ ನೀತಿಗಳನ್ನು ಜಾರಿಗೊಳಿಸುತ್ತಿದೆ.

ಕರ್ನಾಟಕದ ಸರ್ಕಾರ ತನ್ನ ಐದು ಗ್ಯಾರಂಟಿ ಯೋಜನೆಗಳ ಬಜೆಟ್ ಸರಿದೂಗಿಸಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ದಿಗೆ ಮೀಸಲಿರಿಸಿರುವ ಎಸ್.ಸಿ.ಸಿ.ಪಿ. ಮತ್ತು ಎಸ್.ಟಿ.ಎಸ್.ಪಿ ಯೋಜನೆಯ ಹಣವನ್ನು ಬಳಸಲು ಸಚಿವ ಸಂಪುಟ ನಿರ್ಧರಿಸಿರುವುದು ಇತ್ತೀಚಿನದು. ಇದು ಖಂಡನಾರ್ಹ ಕ್ರಮವಾಗಿದೆ.

ಸಾಮಾಜಿಕ ನ್ಯಾಯಕ್ಕೆ ಬದ್ದವಾದ ಸರ್ಕಾರ ಎನ್ನುವ ಅದರ ಘೋಷಣೆಯ ಪೊಳ್ಳುತನವನ್ನು ಈ ಕ್ರಮಗಳು ಬಯಲುಗೊಳಿಸಿದೆ. ನಿರ್ದಿಷ್ಟ ಗುರಿಗಳುಳ್ಳ ಈ ಯೋಜನೆಯ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದು ಎಂಬ ಉದ್ದೇಶದಿಂದ ತರಲಾಗಿರುವ ತನ್ನ ಕಾಯ್ದೆ ಮತ್ತು ಬದ್ಧತೆಯನ್ನು ಅದು ಉಲ್ಲಂಘಿಸಿದೆ. ಈ ಸಮುದಾಯಗಳು ಗ್ಯಾರಂಟಿ ಯೋಜನೆಗಳ ಫಲ ಪಡೆಯುತ್ತಾರೆ ಎಂಬ ಸಬೂಬು ಈ ಹಿಂದಿನ ಹಲವು ದಶಕಗಳಿಂದ ಬೇರೆ ವಿಭಾಗಗಳಿಗೆ ಈ ಹಣದ ದುರುಪಯೋಗ ಮಾಡುತ್ತಲೇ ಬಂದ ವಂಚನೆಗಿಂತ ಭಿನ್ನವೇನಲ್ಲ. ಆ ಹಿನ್ನೆಲೆಯಿಂದಾಗಿಯೇ ಕಾಯ್ದೆಯ 7 (ಡಿ) ಕಲಮನ್ನು ರದ್ದುಪಡಿಸುವಂತೆ ಆಗ್ರಹಿಸಲಾಗಿತ್ತು. ಮತ್ತು ಕಳೆದ ಬಜೆಟ್ ಭಾಷಣದಲ್ಲೂ ಹಣಕಾಸು ಇಲಾಖೆಯನ್ನು ಹೊಂದಿರುವ ಮುಖ್ಯಮಂತ್ರಿಗಳು ಒಪ್ಪಿರುವುದನ್ನು ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷಿಸಿದ್ದಾರೆ.

ಗ್ಯಾರೆಂಟಿ ಯೋಜನೆಗಳ ಫಲವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಸಹ ಪಡೆಯುತ್ತಾರೆ ಎಂಬುದು ಸರ್ಕಾರದ ಹೇಳಿಕೆ. ತನ್ನ ನಿರ್ಧಾರದ ಬಗ್ಗೆ ಸರಕಾರದ ಮಂಡಿಸುತ್ತಿರುವ ಈ ತರ್ಕವೇ ಅರ್ಥಹೀನ. ಮೊದಲನೆಯದಾಗಿ, ಬಡತನ ನಿವಾರಣೆಯ ಕಾರ್ಯಕ್ರಮಗಳಿಗೂ ಎಸ್.ಸಿ.ಎಸ್.ಪಿ ಮತ್ತು ಎಸ್.ಟಿ.ಎಸ್.ಪಿ ಯೋಜನೆಗಳಿಗೂ ಯಾವುದೇ ಸಂಬಂಧ ಇಲ್ಲ, ಮೇಲಾಗಿ ಅವುಗಳ ಉದ್ದೇಶವೂ ಬೇರೆಯವೇ ಆಗಿದೆ. ಗ್ಯಾರಂಟಿ ಯೋಜನೆಗಳಿಗೆ ವ್ಯಯಿಸಲಾಗುವ 52,000 ಕೋಟಿ ಮೊತ್ತದ ಹಣದಲ್ಲಿ 14,282 ಕೋಟಿ ರೂ.ಗಳನ್ನು ಈ ಯೋಜನೆಗಳಿಂದ ಪಡೆಯಲಾಗುತ್ತಿದೆ. ಈ ಹಣ ಶೇ 27 ನ್ನು ಮೀರಲಿದ್ದು ಅದು ಎರಡೂ ವಿಭಾಗಗಳ ಜನಸಂಖ್ಯೆ (2011 ರ ಜನಗಣತಿಯಂತೆ)ಗೆ ಹೋಲಿಸಿದರೆ ಶೇ. 24 ಕ್ಕಿಂತ ಹೆಚ್ಚಾಗಿದೆ. ಸರ್ಕಾರದ ನಿರ್ಧಾರಕ್ಕೆ ಯಾವುದೇ ನೀತಿ ನಿಯಮಗಳ ಮಾನದಂಡಗಳಿಲ್ಲ ಎನ್ನುವುದಕ್ಕೆ ಇದು ಸ್ಪಷ್ಟ ನಿದರ್ಶನ. 11,000 ಕೋಟಿ ಹಣ ವರ್ಗಾಯಿಸುವ ಇಂತಹುದೇ ನಿರ್ಧಾರವನ್ನು ಕಳೆದ ವರ್ಷವೂ ಈ ಸರ್ಕಾರ ಮಾಡಿತ್ತು. ಮತ್ತು ಭಂಡತನದಿಂದ ಸಮರ್ಥಿಸಿಕೊಂಡಿತ್ತು. ಭಾರತದ ಒಕ್ಕೂಟ ಸರ್ಕಾರವಾಗಲೀ, ಕರ್ನಾಟಕ ಸರ್ಕಾರವಾಗಲೀ ಜನಸಂಖ್ಯೆಗನುಗುಣವಾಗಿ ಬಜೆಟ್ ನಲ್ಲಿ ಹಣ ಮೀಸಲು ಇಡಬೇಕು ಎಂಬ ನಿರ್ದೇಶನವನ್ನು ಪಾಲಿಸುತ್ತಿಲ್ಲ ಎಂಬುದು ಬೇರೆ ಮಾತು. ಬಡತನ ನಿವಾರಣೆ, ಸಾಮಾನ್ಯ ಅಭಿವೃದ್ದಿ ಕಾರ್ಯ ಯೋಜನೆಗಳ ಹೊರತಾಗಿಯೂ ಈ ಸರ್ವ ರೀತಿಯಲ್ಲಿಯೂ ಶೋಷಿತವಾಗಿರುವ ದಲಿತ, ಆದಿವಾಸಿ ಸಮುದಾಯಗಳು ಐತಿಹಾಸಿಕ ಅನ್ಯಾಯಗಳ ಕಾರಣದಿಂದ ವಿಶೇಷ ಗಮನ ಇಲ್ಲವಾದರೆ ಎಳ್ಳಷ್ಟು ಮುನ್ನಡೆ, ಸಬಲೀಕರಣ ಅಸಾಧ್ಯ ಎಂಬ ವಾಸ್ತವವನ್ನು ಪರಿಗಣಿಸಿಯೇ ಈ ವಿಶೇಷ ಘಟಕ ಯೋಜನೆಗಳನ್ನು 70 ರ ದಶಕದಲ್ಲಿ ರಾಷ್ಟ್ರ ಮಟ್ಟದಲ್ಲಿ ಜಾರಿಗೆ ತರಲಾಯಿತು. ಇದರ ಪರಿಣಾಮ ಏನಾಯಿತು ಎಂಬ ಬಗ್ಗೆ ಒಂದು ವಿಮರ್ಶಾತ್ಮಕ ಅವಲೋಕನವನ್ನು ಎಲ್ಲಿಯೂ ಮಾಡದಿರುವುದು ದುರಂತ. ಈಗಲೂ ಕಾಂಗ್ರೆಸ್ ಸರ್ಕಾರ ಎಸ್.ಸಿ ಮತ್ತು ಎಸ್.ಟಿ. ಸಮುದಾಯಗಳ ಹಕ್ಕುಗಳನ್ನು ಮೊಟಕು ಮಾಡುತ್ತಿದೆ ಮತ್ತು ತನ್ನ ಸಂವಿಧಾನಾತ್ಮಕ ಕರ್ತವ್ಯವನ್ನು ಉಲ್ಲಂಘಿಸಿದೆ.

ಐದು ಗ್ಯಾರಂಟಿ ಯೋಜನೆಗಳು ಈಗಾಗಲೇ ಅನೇಕ ರೀತಿಯಲ್ಲಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಜನ ವಿಭಾಗಗಳಿಗೆ ಒಂದಿಷ್ಟು ಸಾಂತ್ವನ ಕೊಡುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ . ಆದರೆ ಸರ್ಕಾರ ಇಂತಹ ಮಹತ್ವದ ಯೋಜನೆಗಳನ್ನು ಜಾರಿಗೆ ತರುವ ಮೊದಲು ಕೂಲಂಕುಶವಾಗಿ ಅದರ ಸಾಧಕ ಬಾಧಕ ಮತ್ತು ಹಣದ ಹೊರೆಯನ್ನು ಸರಿದೂಗಿಸಬಹುದಾದ ಮಾರ್ಗೋಪಾಯಗಳನ್ನು ಸೂಕ್ತವಾಗಿ ಕಂಡುಕೊಳ್ಳಬೇಕಿತ್ತು. ಅದರ ಬದಲು ಮಹತ್ವದ ಯೋಜನೆಗಳನ್ನು ಯಾವುದೇ ಸೂಕ್ತ ಸಿದ್ಧತೆಯ ಅಡಿಪಾಯ,, ದೂರದೃಷ್ಟಿ ಇಲ್ಲದೆ ಜಾರಿಗೊಳಿಸಲು ಹೊರಟಿದ್ದು ಸರಿಯಲ್ಲ.

ಹೀಗಿರುವಾಗಲೂ ಅಂತಹ ಗೊಂದಲವನ್ನು ಸರಿಪಡಿಸಿಕೊಳ್ಳುವ ಮತ್ತು ಆರ್ಥಿಕವಾಗಿ ಸರಿದೂಗಿಸುವ ಸಾಧ್ಯತೆಗಳು ಇರುವುದನ್ನು ತಳ್ಳಿ ಹಾಕುವಂತವಲ್ಲ. ಒಂದೆಡೆ ಭಾರತ ಒಕ್ಕೂಟ ಸರ್ಕಾರದಿಂದ ರಾಜ್ಯಕ್ಕೆ ಸಿಗಬೇಕಾದ ಸುಮಾರು 27,000 ಕೋಟಿ ರೂ. ಗಳ ತೆರಿಗೆಯ ಪಾಲನ್ನು ಪಡೆಯಲು ನ್ಯಾಯ ಬದ್ಧವಾದ ಹಕ್ಕಿಗಾಗಿ ನಿರಂತರವಾದ ಹೋರಾಟವನ್ನು ನಡೆಸಬೇಕಿತ್ತು. ಇದು ಕೇವಲ ಅಧಿಕಾರದಲ್ಲಿರುವ ಒಂದು ಪಕ್ಷದ ಅಥವಾ ಸರಕಾರದ ಕೆಲಸ ಮಾತ್ರವಾಗದೇ ಜನ ಸಮುದಾಯದ ಹಕ್ಕೊತ್ತಾಯವಾಗಬೇಕಿತ್ತು. ಆದರೆ ಅದರತ್ತ ಕಾಂಗ್ರೆಸ್ ಪಕ್ಷಕ್ಕಾಗಲಿ ಅಥವಾ ರಾಜ್ಯ ಸರ್ಕಾರಕ್ಕಾಗಲಿ ಅಂತಹ ದೃಷ್ಟಿ ಇಲ್ಲವಾಗಿದೆ. ಅಲ್ಲದೆ ಜನಸಾಮಾನ್ಯರ ಮೇಲೆ ಬೆಲೆ ಏರಿಕೆಯಂತಹ ಮತ್ತು ತೆರಿಗೆಯ ಭಾರ ಹೊರಿಸುವುದರ ಬದಲಾಗಿ ಐಷಾರಾಮಿ ವಸ್ತುಗಳು ಮತ್ತು ಭೋಗ ವಲಯಕ್ಕೆ ಹೆಚ್ಚಿನ ತೆರಿಗೆಯನ್ನು ವಿಧಿಸುವುದರ ಮೂಲಕ ಆರ್ಥಿಕ ಸಂಪನ್ಮೂಲ ಸಂಗ್ರಹಣೆ ಸಾಧ್ಯವಿತ್ತು. ಹಾಗೆಯೇ ಸರಕಾರವೇ ಘೋಷಿಸಿದ ರೀತಿಯಲ್ಲಿಯೇ ಭ್ರಷ್ಟಾಚಾರವನ್ನು ತಡೆಯುವುದು, ಹಣ ಸೋರಿಕೆ ಕಡಿತಗೊಳಿಸುವುದು, ಆಸ್ತಿ ತೆರಿಗೆ ಸಂಗ್ರಹ ಹೆಚ್ಚಿಸುವುದು, ಸರಕಾರ ಮಾಡುವ ದುಂದು ವೆಚ್ಚಗಳಿಗೆ ಕಡಿವಾಣ ಹಾಕುವ ಯಾವ ಭರವಸೆಗಳನ್ನು ಸರ್ಕಾರ ತನ್ನ ಆದ್ಯತೆಯಾಗಿ ಪರಿಗಣಿಸಲಿಲ್ಲ. ಬದಲಾಗಿ, ಈಗಾಗಲೇ ಸಂಕಷ್ಟದಲ್ಲಿರುವ ಜನತೆಯ ಜೇಬಿನಿಂದಲೇ ಹಣದೋಚುವ ಜನದ್ರೋಹಿ ನೀತಿಯನ್ನೇ ಕಾಂಗ್ರೆಸ್ ತನ್ನ ಆದ್ಯತೆಯ ನೀತಿಯಾಗಿ ಪರಿಗಣಿಸಿದೆ. ಈಗಾಗಲೇ ಸರ್ಕಾರ ಲೋಕಸಭಾ ಚುನಾವಣೆ ಮುಗಿದ ಕೂಡಲೇ ಪೆಟ್ರೋಲ್ ಡೀಸೆಲ್ ತೈಲಗಳ ಬಳಕೆಯ ಮೇಲೆ ತೆರಿಗೆಗಳನ್ನು ಹೆಚ್ಚಿಸಿರುವುದು, ಸಾರಿಗೆ ಪ್ರಯಾಣದ ದರಗಳನ್ನು 12 ರಿಂದ 14 ಶೇಕಡದಷ್ಟು ಹೆಚ್ಚಿಸುವ ಪ್ರಸ್ತಾವಗಳು ಜಾರಿಗೆ ಸಿದ್ಧಗೊಂಡಿರುವುದು, ಜನ ಸಾಮಾನ್ಯರು ಬಳಸುವ ಹಾಲಿಗೆ ದರ ಹೆಚ್ಚಿಸಿ ಅಧಿಕ ಹಾಲು ಖರೀದಿಸಲೇಬೇಕೆಂಬ ಒತ್ತಡ ಹೇರಿರುವುದು ಏನನ್ನು ಸೂಚಿಸುತ್ತದೆ ? ಮತ್ತೊಂದು ದುರಂತವೆಂದರೆ, ಈ ಸರ್ಕಾರ ರಾಜ್ಯದ ಸಾರ್ವಜನಿಕ ಸ್ವತ್ತಾಗಿರುವ ಸುಮಾರು 25 ಸಾವಿರ ಎಕರೆ ಜಮೀನನ್ನು ಮಾರಿ ಹಣದ ಕೊರತೆ ತುಂಬಿಸಿಕೊಳ್ಳುವ ಅದರ ಕ್ರಮಗಳು ಖಂಡನಾರ್ಹವಾಗಿದೆ. ಈಗಲೂ ಬೆಂಗಳೂರು ಸುತ್ತಮುತ್ತಲಿನಲ್ಲಿ ಅನೇಕ ದಶಕಗಳಿಂದ ಸಾಗುವಳಿ ಮಾಡಿ ಭೂಮಿಯ ಹಕ್ಕು ದಾಖಲೆಗಳು ಸಿಗದೇ ಪರಿತಪಿಸುತ್ತಿರುವ ಬಗರ್ ಹುಕುಂ ಸಾಗುವಳಿದಾರರಿಗೆ ಪ್ರನಾಳಿಕೆಯಲ್ಲಿ ಕೊಟ್ಟ ಭರವಸೆಯಂತೆ ಭೂಮಿ ಹಕ್ಕಿನ ದಾಖಲೆಗಳನ್ನು ನೀಡಲಾಗಿಲ್ಲ ಎನ್ನುವುದು ಈ ಸರ್ಕಾರದ ಮೂಲ ಧೋರಣೆ ಯಾರ ಪರ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಜನತೆ ಕಾಂಗ್ರೆಸ್ ಸರ್ಕಾರದ ಬಗೆಗೆ ತೀವ್ರ ಭ್ರಮನಿರಸನಗೊಳ್ಳುತ್ತಿದ್ದಾರೆ ಎನ್ನುವುದನ್ನು ಅವರು ಗಮನಿಸಬೇಕು. ವಿರೋಧ ಪಕ್ಷಗಳಾಗಿರುವ ಬಿಜೆಪಿ ಮತ್ತು ಜೆ.ಡಿ.ಎಸ್‌ಗಳು ಸತತವಾಗಿ ಧಾಳಿ ನಡೆಸಿ ಅತೃಪ್ತಿಯನ್ನು ಹೆಚ್ಚಿಸುವ, ಬಳಸಿಕೊಳ್ಳುವ ಆಕ್ರಮಣಕಾರಿ ಧಾವಂತದಲ್ಲಿ ತೊಡಗಿವೆ. ತಿರಸ್ಕಾರಕ್ಕೆ ಒಳಗಾದ ಈ ಶಕ್ತಿಗಳು ಬಲಗೊಳ್ಳಲು ಕಾಂಗ್ರೆಸ್ ಅವಕಾಶ ನೀಡುವುದು ಜನದ್ರೋಹ ಎನ್ನುವುದನ್ನು ಕಾಂಗ್ರೆಸ್ ಪಕ್ಷ ಅರ್ಥ ಮಾಡಿಕೊಂಡು ಸರಿದಾರಿಯಲ್ಲಿ ನಡೆಯಬೇಕು.

ರಾಜ್ಯಸಭೆಯಲ್ಲಿ ಎ.ಎ. ರಹೀಮ್‌ರಿಂದ ಸಮಸ್ಯೆಗಳ ಪ್ರಸ್ತಾಪ

"ಬನ್ನಿ ಬೀದಿಗಳಲ್ಲಿ ರಕ್ತವನ್ನು ನೋಡಿ" ಪಾಬ್ಲೋ ನೆರುಡಾ ಅವರ ಕವಿತೆಯ ಸಾಲು

"ನೀವು ನನ್ನನ್ನು ಕೇಳುತ್ತೀರಿ:
ಅವನ ಕವಿತೆ ಏಕೆ ಮಾತನಾಡುತ್ತಿಲ್ಲ
ಕನಸುಗಳು ಬಗ್ಗೆ ಎಲೆಗಳ ಬಗ್ಗೆ?
ಅವನ ಸ್ವಂತ ನೆಲದ ಮಹಾನ್ ಜ್ವಾಲಾಮುಖಿ ಬಗ್ಗೆ?
ಬನ್ನಿ ಬೀದಿಗಳಲ್ಲಿ ರಕ್ತವನ್ನು ನೋಡಿ.
ಬಂದು ನೋಡಿ
ಬೀದಿಗಳಲ್ಲಿ ರಕ್ತ.
ಬಂದು ರಕ್ತ ನೋಡಿ
ಬೀದಿಗಳಲ್ಲಿ!

ಇದು ಚಿಲಿ ದೇಶದ ಕ್ರಾಂತಿಕಾರಿ ಕವಿ ಪಾಬ್ಲೋ ನೆರುಡಾ ಅವರ ಕವಿತೆಯಾಗಿದೆ.

ಅದೇ ರೀತಿಯಲ್ಲಿ, ನಾವು ಕೂಡ, ಬನ್ನಿ ಚರ್ಚೆ ಮಾಡೋಣ

"ಬನ್ನಿ, ಈ ದೇಶದ ಬೆಲೆ ಏರಿಕೆ ಕುರಿತು ಚರ್ಚೆ ಮಾಡೋಣ.

ಬನ್ನಿ, ಈ ದೇಶದ ನಿರುದ್ಯೋಗದ ಕುರಿತು ಚರ್ಚೆ ಮಾಡೋಣ.

ಬನ್ನಿ, ಈ ದೇಶದ ದಲಿತರು ಅಲ್ಪಸಂಖ್ಯಾತರು ಇತರರ ಮೇಲಿನ ದಾಳಿಯ ಕುರಿತು ಚರ್ಚೆ ಮಾಡೋಣ.

ಬನ್ನಿ, ಈ ದೇಶದ ಬುಲ್ಡೋಜರ್ ಆಡಳಿತದ ಕುರಿತು ಚರ್ಚೆ ಮಾಡೋಣ.

ಬನ್ನಿ, ಈ ದೇಶದ ರಾಜಕೀಯ ಮತ್ತು ಸಾಮಾಜಿಕ ವಾಸ್ತವದ ಕುರಿತು ಚರ್ಚೆ ಮಾಡೋಣ"

ಇದು, 18ನೇ ಲೋಕಸಭೆ ಚುನಾವಣೆ ಮುಗಿದು ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದ ಬಳಿಕ, ಮೊದಲ ಅಧಿವೇಶನದಲ್ಲಿ ರಾಷ್ಟ್ರಪತಿ ಭಾಷಣಕ್ಕೆ ರಾಜ್ಯಸಭೆಯಲ್ಲಿ ನಡೆದ ಧನ್ಯವಾದ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಭಾ ಸದಸ್ಯ ಎ.ಎ.ರಹೀಮ್ ಅವರ ಮಾತುಗಳಿವು.

ರೈಲು ಅಪಘಾತದ ಸಾವುಗಳು ಮತ್ತು ಖಾಲಿ ಹುದ್ದೆಗಳು

ನರೇಂದ್ರ ಮೋದಿ ಸರ್ಕಾರ 2014 ಮತ್ತು ನಂತರ ಅಧಿಕಾರಕ್ಕೆ ಬರಲು ಕೇವಲ ಒಂದು ಇಂಧನವನ್ನು ಬಳಸಿತು. ಅದು ವಿಭಜಕ ರಾಜಕಾರಣ ಎಂಬ ಇಂಧನ. ಕಳೆದ ದಶಕದಲ್ಲಿ ಜನ ಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಈಗಂತೂ ಅವುಗಳ ಕುರಿತು ಚರ್ಚೆಗೆ ಸಿದ್ಧರಿಲ್ಲ.



ಇತ್ತೀಚಿನ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ಅಂಕಿಅಂಶಗಳ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ನಡೆದ ರೈಲು ಅಪಘಾತಗಳಲ್ಲಿ ಒಂದು ಲಕ್ಷ ಜನರು ಸಾವನ್ನಪ್ಪಿದ್ದಾರೆ. ಈ ಸದನದಲ್ಲಿ ನಾನು ಇನ್ನೊಂದು ಅಂಶವನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಸರ್ಕಾರದ ಇತ್ತೀಚಿನ ಅಧಿಕೃತ ಅಂಕಿಅಂಶಗಳ ಪ್ರಕಾರ, ರೈಲ್ವೆಯಲ್ಲಿ 2.5 ಲಕ್ಷ ಹುದ್ದೆಗಳು ಖಾಲಿ ಇವೆ. ಅಲ್ಲದೆ, ಈಗಲೂ 18,999 ರೈಲುಗಳನ್ನು ಓಡಿಸುವ ಲೋಕೋ ಪೈಲಟ್‌ಗಳ ಹುದ್ದೆಗಳು ಖಾಲಿ ಇವೆ. ದೇಶದಲ್ಲಿ ಸಂಭವಿಸುವ ಎಲ್ಲಾ ರೈಲು ಅಪಘಾತಗಳು ಕೇಂದ್ರ ಸರ್ಕಾರದ ಯುವ ವಿರೋಧಿ ನೀತಿಗಳಿಂದ ಉಂಟಾಗುತ್ತವೆ, ಸಾಕಷ್ಟು ಹೊಸ ಉದ್ಯೋಗಗಳಿಲ್ಲ. ಅಧ್ಯಕ್ಷರ ಭಾಷಣದಲ್ಲಿ ಅಂತಹ ಯಾವುದೇ ವಿಷಯಗಳ ಪ್ರಸ್ತಾಪವಿಲ್ಲ. ಹೀಗೆ ಎ.ಎ.ರಹೀಮ್ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು.





ನೀಟ್ ರದ್ದುಪಡಿಸಲು ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ನೀಟ್ (NEET) ರದ್ದುಪಡಿಸಬೇಕು ಎಂಬುದೂ ಸೇರಿದಂತೆ ವಿದ್ಯಾರ್ಥಿಗಳ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ಜುಲೈ 4 ರಂದು ಭಾರತೀಯ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ನೇತೃತ್ವದಲ್ಲಿ ವಿದ್ಯಾರ್ಥಿಗಳು ರಾಜ್ಯದ ವಿವಿಧೆಡೆಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ ವಿದ್ಯಾರ್ಥಿಗಳ ಮುಷ್ಕರ ನಡೆದಿದೆ. ಈ ಸಂದರ್ಭದಲ್ಲಿ ಈ ಬೇಡಿಕೆಗಳ ಜೊತೆಗೆ, ವಿದ್ಯಾರ್ಥಿಗಳ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಜುಲೈ 4 ರಂದು ಧಾರವಾಡ, ಗಂಗಾವತಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಗಜೇಂದ್ರಗಡ ಇಲ್ಲೆಲ್ಲಾ ಪ್ರತಿಭಟನೆ ನಡೆದರೆ, ಇದಕ್ಕೂ ಮೊದಲು ಕಲಬುರಗಿ, ಹಾವೇರಿ, ಮೈಸೂರು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ದೇಶದಲ್ಲಿ ಕಳೆದ ಕೆಲವು ವಾರಗಳಿಂದ ನಡೆದ ಘಟನೆಗಳನ್ನು ಗಮನಿಸಿದಾಗ ಮತ್ತೊಮ್ಮೆ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ ರಾಷ್ಟ್ರ ಮಟ್ಟದ ಪರೀಕ್ಷೆಗಳನ್ನು ನಡೆಸಲು ತನ್ನ ಅಸಮರ್ಥತೆಯನ್ನು ಪ್ರದರ್ಶಿಸಿದೆ. ನೆಟ್ ಮರು ಪರೀಕ್ಷೆ, ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ರಾಷ್ಟ್ರಾದ್ಯಂತ ಸುದ್ದಿ ಮಾಡಿದೆ. ಜೂನ್ 4 ರಂದು ಘೋಷಿಸಲಾದ ನೀಟ್ ಪರೀಕ್ಷೆಯ ಫಲಿತಾಂಶಗಳು ಸರಿಯಾದ ಪಾರದರ್ಶಕತೆ ಇಲ್ಲದೆ ಮತ್ತು ಪೇಪರ್ ಸೋರಿಕೆಯಂತಹ ದೂರುಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಬಾಧಿತರಾಗಿದ್ದಾರೆ.

ಲಕ್ಷಗಟ್ಟಲೆ ವಿದ್ಯಾರ್ಥಿಗಳು ಹಾಜರಾಗಿದ್ದ ಯುಜಿಸಿ ನೆಟ್ ಪರೀಕ್ಷೆಯನ್ನು ಪೇಪರ್ ಸೋರಿಕೆ ವರದಿಗಳಿಂದ ರದ್ದುಗೊಳಿಸಲಾಯಿತು. ನೇರವಾಗಿ ಆರೋಗ್ಯ ಸಚಿವಾಲಯದ ಅಡಿಯಲ್ಲಿ ಬರುವ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ (NBE) ಸಹ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅಕ್ರಮಗಳ ಬಗ್ಗೆ ಉಲ್ಲೇಖಿಸಿ, NEET-PG ಮರು ಪ್ರವೇಶ ಪರೀಕ್ಷೆಗಳನ್ನು ಕೊನೆಯ ಕ್ಷಣದಲ್ಲಿ ಮುಂದೂಡಲು ನಿರ್ಧರಿಸಿದೆ.

ಕೋಚಿಂಗ್ ಸೆಂಟರ್‌ಗಳ ಪ್ರೋತ್ಸಾಹಿಸುವಿಕೆಯನ್ನು ಸಿಯುಇಟಿ, ನೀಟ್ ನಂತಹ ಕೇಂದ್ರೀಕೃತ ಪರೀಕ್ಷೆಗಳ ಪಾಲಿಸಿಗಳಿಂದ ಶಿಕ್ಷಣದ ಖಾಸಗೀಕರಣ ಹೆಚ್ಚುತ್ತಿದೆ. ಇದರಿಂದ ಕೋಟ್ಯಾಂತರ ತಳ ಸಮುದಾಯದ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ದುಬಾರಿಯಾಗಿದೆ.

'ಒಂದು ರಾಷ್ಟ್ರ, ಒಂದು ಪರೀಕ್ಷೆ' ಎಂಬ ಘೋಷಣೆಯ ಅಡಿಯಲ್ಲಿ, ಇಡೀ ಪರೀಕ್ಷಾ ವ್ಯವಸ್ಥೆಯು ಕುಸಿದಿದೆ ಮತ್ತು ಅನಿರ್ದಿಷ್ಟಾವಧಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸಿದೆ.

ಎನ್.ಟಿ.ಎ. ಪುನರಾವರ್ತಿತ ವೈಫಲ್ಯಗಳು ವಿದ್ಯಾರ್ಥಿಗಳಿಗೆ ಆತಂಕವನ್ನು ಸೃಷ್ಟಿಸಿವೆ. ಲಕ್ಷಾಂತರ ವಿದ್ಯಾರ್ಥಿಗಳ ಅಮೂಲ್ಯ ಸಮಯ, ಶ್ರಮ ಮತ್ತು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ವ್ಯರ್ಥ ಮಾಡುತ್ತಿದೆ. ವಿದ್ಯಾರ್ಥಿಗಳ ಬಗ್ಗೆ ತೋರುವ ನಿರ್ದಾಕ್ಷಿಣ್ಯ ನಿರ್ಲಕ್ಷ್ಯವು ಅಕ್ರಮಗಳ ಬಗ್ಗೆ ಪಾರದರ್ಶಕತೆ, ನಿಷ್ಪಕ್ಷಪಾತ ತನಿಖೆಗೆ ಒತ್ತಾಯಿಸುತ್ತದೆ. ಹಾಗೆಯೇ ಶಿಕ್ಷಣ ಸಚಿವಾಲಯದಲ್ಲಿನ ರಚನಾತ್ಮಕ ಬದಲಾವಣೆಯನ್ನು ಆಗ್ರಹಿಸುತ್ತದೆ ಎಂದು ವಿದ್ಯಾರ್ಥಿ ನಾಯಕರು ಹೇಳಿದ್ದಾರೆ.

ಶಿಕ್ಷಣಕ್ಕೆ ಹಣ ಕಡಿತ


ಉನ್ನತ ಶಿಕ್ಷಣದಲ್ಲಿನ ಸಮಸ್ಯೆಗಳಷ್ಟೇ ಅಲ್ಲದೆ, ಶಾಲಾ ಶಿಕ್ಷಣದ ಸಮಸ್ಯೆಗಳನ್ನು ಪ್ರತ್ಯೇಕಿಸುವಂತಿಲ್ಲ. ಬಿಜೆಪಿ ನೇತೃತ್ವದ ಎನ್.ಡಿ.ಎ. ಅವಧಿಯಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಇಲಾಖೆಗಳಿಗೆ ಬಜೆಟ್‌ನಲ್ಲಿ ಹಣ ಕಡಿತ ಮಾಡಿರುವುದು, ಸರ್ಕಾರಿ ಶಾಲೆಗಳನ್ನು ಮುಚ್ಚುವುದು, ಶಿಕ್ಷಕರ ಕೊರತೆ, ವಿದ್ಯಾರ್ಥಿಗಳ ಒಟ್ಟು ದಾಖಲಾತಿಯಲ್ಲಿ ಕುಸಿದಿರುವುದನ್ನು ಕಾಣಬಹುದಾಗಿದೆ. 2018-19 ಮತ್ತು 2021-22 ರ ನಡುವೆ ಭಾರತದಲ್ಲಿ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ 61,885 ರಷ್ಟು ಕಡಿಮೆಯಾಗಿವೆ.

ಒಟ್ಟು 15,51,000 ಶಾಲೆಗಳಿಂದ 14,89,115 ಶಾಲೆಗಳಿಗೆ ಕುಸಿದಿದೆ. ಒಟ್ಟು 61,361 ಶಾಲೆಗಳನ್ನು ಮುಚ್ಚಲಾಗಿದೆ. ಸರ್ಕಾರಿ ಶಾಲೆಗಳ ಸಂಖ್ಯೆಯಲ್ಲಿ ವಿಪರೀತ ಕುಸಿತ ಹಾಗೂ ಖಾಸಗಿ ಶಾಲೆಗಳ ಸಂಖ್ಯೆಯಲ್ಲಿ ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ಬಡ-ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣದಿಂದ ವಂಚಿಸುವ ಹುನ್ನಾರವಾಗಿದೆ. ಅತಿಯಾದ ಖಾಸಗೀಕರಣದಿಂದ ವಿದ್ಯಾರ್ಥಿಗಳು ಶುಲ್ಕವನ್ನು ಭರಿಸಲು ಸಾಧ್ಯವಾಗದೇ ಶಿಕ್ಷಣದಿಂದ ದೂರ ಉಳಿಯುತ್ತಾರೆ ಎಂದು ಎಸ್.ಎಫ್.ಐ. ಟೀಕಿಸಿದೆ.

ಮೂಲಭೂತ ಸೌಕರ್ಯಗಳಿಗೆ ಒತ್ತಾಯ

ರಾಜ್ಯದಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭಗೊಂಡಿದ್ದು, ಶಾಲಾ ಕಾಲೇಜುಗಳಲ್ಲಿ ಶೈಕ್ಷಣಿಕ ವಾತಾವರಣ ಇಲ್ಲದೆ ನರಳುತ್ತಿವೆ. ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು, ರಾಜ್ಯದ ಶಾಲಾ ಕಾಲೇಜುಗಳಲ್ಲಿ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡಲು ಮುಂದಾಗಬೇಕು ಮತ್ತು ಶೈಕ್ಷಣಿಕ ವಲಯದಲ್ಲಿ ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುಂದಾಗಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಗಜೇಂದ್ರಗಡದಲ್ಲಿ ಎಸ್.ಎಫ್.ಐ. ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ, ವಿದ್ಯಾರ್ಥಿಗಳು ಪುರಸಭೆಯಿಂದ ಮೆರವಣಿಗೆ ಪ್ರಾರಂಭಿಸಿ, ಮೈಸೂರು ಮಠ, ದುರ್ಗಾ ಸರ್ಕಲ್, ಮಾರ್ಗವಾಗಿ ಸಂಚರಿಸಿತು. ಕೆ.ಕೆ. ಸರ್ಕಲ್‌ನಲ್ಲಿ ಮಾನವ ಸರಪಳಿ ರಚಿಸಿದರು. ಕೇಂದ್ರ ಸರ್ಕಾರದ ಶಿಕ್ಷಣ ನೀತಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನೀಟ್ ರದ್ದುಪಡಿಸಿ, ಹಾಸ್ಟೆಲ್ ಪ್ರಾರಂಭಿಸಿ, ಬಸ್ ಸಮಸ್ಯೆ ಬಗೆಹರಿಸಿ ಎಂಬ ಘೋಷಣೆಗಳನ್ನು ಕೂಗಿದರು. ಗಜೇಂದ್ರಗಡ ನಗರವು ಶಿಕ್ಷಣ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ನಗರವಾಗಿದೆ ಹಾಗೂ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳಿಂದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ನಗರಕ್ಕೆ ಬರುತ್ತಿದ್ದಾರೆ, ಈ ಕಾರಣ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಪ್ರಾರಂಭಿಸಬೇಕು. ಗ್ರಾಮೀಣ ಪ್ರದೇಶಗಳಿಂದ ಶಿಕ್ಷಣಕ್ಕಾಗಿ ನಗರಕ್ಕೆ ಬರುವ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕು, ಸ್ನಾತಕೋತ್ತರ ಪದವಿ ಕೇಂದ್ರ ಪ್ರಾರಂಭಿಸಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.



ಪಂಚವಾದ್ಯ ಕಲಾವಿದ-ಸರಳ ಸಜ್ಜನ ವ್ಯಕ್ತಿ ಕ್ಷೇತ್ರಪಾಲ ಮಂಜುನಾಥ ಭಂಡಾರಿ ನಿಧನ

ಪಂಚವಾದ್ಯ ಕಲಾವಿದರೂ, ಸರಳ ಸಜ್ಜನ ವ್ಯಕ್ತಿ, ಶ್ರಮಜೀವಿಗಳೂ ಮತ್ತು ನಮ್ಮ ಕುಟುಂಬದ ಹಿರಿಯ ಬಂಧುವೂ ಆಗಿದ್ದ ಕ್ಷೇತ್ರಪಾಲ ಮಂಜುನಾಥ ಭಂಡಾರಿಯ ತಮ್ಮ 85 ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ. ಮಂಜುನಾಥ ಭಂಡಾರಿಯವರು ಹೊನ್ನಾವರದ ಮಾಳ್ಕೋಡಿನವರು. ಭಂಡಾರಿಯವರು ಕಠಿಣವಾದುದು ಎಂದು ಪರಿಗಣಿಸಲಾದ 'ತಾಸ್ಮೋರ್' ಎಂಬ ವಾದನವನ್ನು ಸೊಗಸಾಗಿ ನುಡಿಸುತ್ತಿದ್ದರು. ಬಡ ರೈತರೂ, ಕುಶಲ ಕೃಷಿ ಕಾರ್ಮಿಕರೂ ಆಗಿದ್ದ ಮಂಜುನಾಥ ಭಂಡಾರಿಯವರು ಉಪಜೀವನಕ್ಕೆ ಘಟ್ಟದ ಮೇಲಿನ ಸಿದ್ದಾಪುರ, ಶಿರಸಿ, ಸಾಗರಗಳಿಗೆ ಇತರ ಕೂಲಿಕಾರ್ಮಿಕರನ್ನು ಜೊತೆಗೆ ಹಾಕಿಕೊಂಡು "ಅಡಿಕೆ ಕೊನೆಗೆ ಕೊಟ್ಟೆ ಕಟ್ಟುವ ಕೆಲಸ" ಕ್ಕೆ ಹೋಗುತ್ತಿದ್ದರು. ತೆಂಗಿನ ಕಾಯಿ ಮತ್ತು ಅಡಿಕೆ ಕೊಯ್ಲು ಬಂತೆಂದರೆ ಭಂಡಾರಿಯವರು ಕೆಲಸದಲ್ಲಿ ಮೈಮರೆತೇ ದುಡಿದವರು. ಮರ ಹತ್ತಿ ಕೊಟ್ಟೆ ಹಾಕುವುದು, ಮದ್ದು ಹೊಡೆಯುವುದು ತುಂಬಾ ಜೀವಾಪಾಯದ ಕೆಲಸ. ಅದನ್ನು ಭಾರೀ ಕಾಳಜಿಯಿಂದ, ಸೂಕ್ಷ್ಮವಾಗಿ ಮತ್ತು ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಭಂಡಾರಿಯವರು ಸುಮಾರು ಐವತ್ತು ವರ್ಷಗಳ ಕಾಲ ಈ ಕೆಲಸ ಮಾಡಿದ್ದಾರೆ. ಈಗಿನವರಿಗೆ "ಕೊನೆ ಕೊಟ್ಟೆ ಹಾಕುವುದು" ಎಂದರೆ ಗೊತ್ತಿಲ್ಲ!! ಜೊತೆಗೆ ಭಂಡಾರಿಯವರು ಮಂಗಲಕಾರ್ಯಗಳಿಗೆ ಕಲಾವಿದರಾಗಿಯೂ ಹೋಗುತ್ತಿದ್ದರು. ಒಟ್ಟಿನಲ್ಲಿ ಸದಾ ಕೆಲಸದಲ್ಲೇ ತೊಡಗಿ ಬಡತನದಲ್ಲೇ ಆರಂಭದ ಜೀವನ ಸಾಗಿಸಿದರು. ಆದರೆ ಮಕ್ಕಳಿಗೆ ಶ್ರಮ ಸಂಸ್ಕೃತಿಯಿಂದಲೇ ವಿದ್ಯೆ ಕಲಿಸಿ ಒಳಿತು ಮಾಡಿದರು. ಈ ಭಾಗದಲ್ಲಿ ಯಕ್ಷಗಾನ ಎಲ್ಲೇ ಆದರೂ ತಮ್ಮ ಮಡದಿಯ ಸಮೇತ ಹೋಗಿ ಆಸ್ವಾದಿಸಿ ಬರುತ್ತಿದ್ದರು. ನಾನು ವಿಠ್ಠಲ ಭಂಡಾರಿ, ಇವರ ಮನೆಗೆ ಎರಡು ಮೂರು ಬಾರಿ ಹೋಗಿದ್ದೆವು. ತನ್ನ ಒಡನಾಟದಲ್ಲಿರುವ ಎಲ್ಲರನ್ನೂ ಪ್ರೀತಿಯಿಂದ ಕಾಣುವುದು ಅವರು ಬಿಟ್ಟುಹೋದ ಬಳುವಳಿ ಎನ್ನಬಹುದು. ಇವರು ತಮ್ಮ ಬಾಳಸಂಗಾತಿ ಸೀತೆ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

-ಗಣೇಶ ಭಂಡಾರಿ

“ಕನ್ನಡದ ಮಾಧ್ಯಮಗಳು ಇನ್ನು ಕೆಡಲಾರದಷ್ಟು ಕೆಳಮಟ್ಟಕ್ಕೆ ಹೋಗಿವೆ”–ಪತ್ರಕರ್ತ ಕೃಷ್ಣ ಪ್ರಸಾದ್

ಮಾಧ್ಯಮ ಮಂಥನ:
ಆರ್.ರಾಮಕೃಷ್ಣ

‘ದಿ ಹಿಂದು’ ಪತ್ರಿಕೆಯ ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್ ಅವರು ಜುಲೈ 1, 2024 ರಂದು ಬೆಂಗಳೂರಿನ ಪ್ರೆಸ್‌ಕ್ಲಬ್ ವತಿಯಿಂದ ನಡೆದ ಪತ್ರಿಕಾ ದಿನಾಚರಣೆ ವೇಳೆ ಮಾತನಾಡುತ್ತಾ ತೀರಾ ದುರವಸ್ಥೆಗೆ ತಲುಪಿದ ಕನ್ನಡ ಮಾಧ್ಯಮಗಳ ಕುರಿತು ಕಟುವಾದ ವಿಮರ್ಶೆ ಮಾಡಿದ್ದಾರೆಂದು ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ವಾರ್ತಾಭಾರತಿಯಂತಹ ಕೆಲವೇ ಕೆಲವು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಕೃಷ್ಣ ಪ್ರಸಾದ್‌ರವರು "ಕನ್ನಡದ ಮಾಧ್ಯಮಗಳು ಎಂತಹ ಕೆಳ ಮಟ್ಟಕ್ಕೆ ಇಳಿದಿವೆಯೆಂದರೆ, ಅವುಗಳಲ್ಲಿ ನಡೆಯುವ ಚರ್ಚೆ ನಡೆಸುವ ರೀತಿ ಒಂದು ಕೆಟ್ಟ ಬಾರ್‌ನಲ್ಲಿ, ಕೆಟ್ಟ ಕುಡುಕರು ಕಂಠ ಮಟ್ಟ ಕುಡಿದು ಕಿರುಚಾಡುವುದಕ್ಕಿಂತ ಕೆಟ್ಟ ಸ್ಥಿತಿಗೆ ಮುಟ್ಟಿದೆ. ಅವರಾದರೋ ಕುಡಿದವರು, ಹಾಗಾಡಲು ಅವರಿಗೆ ಕಾರಣವಿರುತ್ತದೆ. ಆದರೆ ಕನ್ನಡ ನ್ಯೂಸ್ ಚಾನಲ್‌ಗಳ ಸ್ಟುಡಿಯೋಗಳಲ್ಲಿ ನಡೆಯುವ ಚರ್ಚೆಗಳ ವೇಳೆ ಕುಡಿಯದೆಯೂ ಕುಡುಕರಿಗಿಂತ ಅಸಹ್ಯವಾಗಿ ಆಡುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ ಒಂದೇ ಒಂದು ಎತ್ತಿ ತೋರಿಸಬಲ್ಲ ರಾಜಕೀಯ ತನಿಖಾ ವರದಿ, ನಮ್ಮ ರೈತರ ಕೃಷಿ ಸಮಸ್ಯೆಗಳನ್ನು ಕುರಿತ ತನಿಖಾ ವರದಿ, ಸಾಮಾಜಿಕ ಸಮಸ್ಯೆಗಳ ಕುರಿತು ಸಮರ್ಥ ತನಿಖಾ ವರದಿ, ಭ್ರಷ್ಟಾಚಾರಗಳನ್ನು ಕುರಿತು ತನಿಖಾ ವರದಿಗಳನ್ನು ಮಾಡಿದ್ದರೆ ತೋರಿಸಲಿ.” ಎಂದು ಸವಾಲು ಹಾಕಿದ್ದಾರೆ. ಹಾಗೂ “ಕನ್ನಡದ ಮಾಧ್ಯಮಗಳು ಇನ್ನು ಕೆಡಲಾರದಷ್ಟು ಕೆಳಮಟ್ಟಕ್ಕೆ ಹೋಗಿವೆ" ಎಂದು ಆಘಾತ ವ್ಯಕ್ತಪಡಿಸಿದರು ಎಂದೂ ವರದಿಯಾಗಿದೆ.

ಸಮಾಜವನ್ನು ಕಾಡುತ್ತಿರುವ ಹತ್ತಾರು ತುರ್ತು ಸಮಸ್ಯೆಗಳನ್ನು ಮರೆಸಿ ಅತ್ಯಾಚಾರ, ಕೊಲೆ, ಹಲ್ಲೆಗಳ ಕುರಿತು ರೋಚಕ ವರದಿಗಳನ್ನು ಪ್ರಸಾರ ಮಾಡುತ್ತಾ ಅಪರಾಧವನ್ನೇ ವೈಭವೀಕರಿಸುತ್ತಿರುವ, ಕೊಲೆ ಹಲ್ಲೆಗಳನ್ನು ಪತ್ಯಕ್ಷವಾಗಿ ಪರೋಕ್ಷವಾಗಿ ಸಮರ್ಥಿಸುತ್ತಿರುವ ಕನ್ನಡದ ಹೊಣೆಗೇಡಿ ಸಮೂಹ ಮಾಧ್ಯಮಗಳಿಗೆ ಜನರೇ ಕಿವಿ ಹಿಂಡಿ ಬುದ್ದಿ ಹೇಳಬೇಕಾದ ಅಗತ್ಯವಿದೆ.

ಮಾಧ್ಯಮಗಳ ಅಧಃಪತನ

ಕನ್ನಡದ ಮಾಧ್ಯಮಗಳು, ಅದರಲ್ಲೂ ಖಾಸಗಿ ಟಿ.ವಿ. ವಾಹಿನಿಗಳು ಬಹುತೇಕವು ನಿಜಕ್ಕೂ ನೈತಿಕ ಅಧಃಪತನಕ್ಕೆ ಗುರಿಯಾಗಿವೆ. ರೈತರು–ಕಾರ್ಮಿಕರು, ದಲಿತರು, ಬಡವರು, ಮಹಿಳೆಯರು, ಕೃಷಿ–ಕೈಗಾರಿಕೆ, ಜನರ ಬದುಕಿನ ನಿಜವಾದ ಹತ್ತಾರು ಸಮಸ್ಯೆಗಳು, ಬದುಕಿನ ಪ್ರಶ್ನೆಗಳು, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ವಿಚಾರಗಳ ಬಗೆಗೆ ಎಷ್ಟೋ ಒಳ್ಳೆಯ ಸುದ್ದಿಗಳನ್ನು ವರದಿಗಳನ್ನು ಮಾಡಲು ಅವಕಾಶಗಳಿದ್ದರೂ ಸಹ ಈ ಮಾಧ್ಯಮಗಳು ಆ ಬಗೆಗೆ ಬಹುತೇಕ ಕಣ್ಣು ಮುಚ್ಚಿಕೊಂಡಿವೆ.

ಕ್ರೈಮ್ ಸುದ್ದಿಗಳ ‘ರಸಗವಳ’

ಕನ್ನಡದ ಹೆಚ್ಚಿನ ದೃಶ್ಯ ಮಾಧ್ಯಮಗಳು ಇತ್ತೀಚೆಗೆ ಕರ್ನಾಟಕದಲ್ಲಿ ಸ್ಫೋಟಗೊಂಡಿರುವ ಲೈಂಗಿಕ ಹಗರಣಗಳು, ಅಪರಾಧ ಸುದ್ದಿಗಳ ಬೆನ್ನು ಬಿದ್ದು, ಆ ಸಂಬಂಧದ ಸುದ್ದಿಗಳನ್ನು ಬಬ್ಬಲ್ ಗಮ್‌ನಂತೆ ಜಗಿದು ಜಗಿದು ಎಳೆದು ಪ್ರಸಾರ ಮಾಡುತ್ತಿವೆ.

ಪ್ರಜ್ವಲ್ ರೇವಣ್ಣನ ಲೈಂಗಿಕ ದೌರ್ಜನ್ಯದ ಹಗರಣ ಒಬ್ಬ ಸಂಸದ ನಡೆಸಿದ್ದಾನೆ ಎನ್ನಲಾಗಿರುವ ಭಾರಿ ದೊಡ್ಡ ಲೈಂಗಿಕ ದೌರ್ಜನ್ಯ ಪ್ರಕರಣ. ಆದ್ದರಿಂದ ಅದಕ್ಕೆ ಸಾಕಷ್ಟು ಪ್ರಾಮುಖ್ಯತೆ ಇರುತ್ತದೆ ಎಂಬುದು ನಿಜ. ಆದರೆ ಕ್ರಿಕೆಟ್ ಕಮೆಂಟರಿ ಕೊಡುವಂತೆ, ‘ನಮ್ಮಲ್ಲೇ ಎಲ್ಲ, ಇಂಚಿಂಚು ತೋರಿಸುತ್ತೇವೆ, ಎಲ್ಲ ಡೀಟೇಲ್ಸ್ ಕೊಡುತ್ತೇವೆ...’ ಎಂದು 24/ 7 ಅದೇ ಅದೇ ಸುದ್ದಿ ತೋರಿಸಿದರೆ ಕ್ರೈಮ್ ಲೋಕದ ವೈಭವೀಕರಣ ಆಗುತ್ತದೆಯೇ ಹೊರತು ಬೇರೆನೂ ಆಗುವುದಿಲ್ಲ.

ಪವಿತ್ರಗೌಡರ ತಮ್ಮ ತನ್ನ ಅಕ್ಕನಿಗೆ ಯಾಕೆ ಬುದ್ದಿ ಹೇಳಲಿಲ್ಲ ಎಂದು ಆಕ್ಷೇಪಿಸುವವರು, ರೇಣುಕಾ ಸ್ವಾಮಿ ತಾನು ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದ ವಿಶ್ವ ಹಿಂದೂ ಪರಿಷತ್–ಬಜರಂಗದಳದಲ್ಲಿ ಏನು ಸಂಸ್ಕಾರ ಕಲಿತ, ಯಾಕೆ ಸಂಘಪರಿವಾರ ಅವನನ್ನು ತಿದ್ದಲಿಲ್ಲ ಎಂದು ಕೇಳಬಹುದಿತ್ತಲ್ಲವೇ?

ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಆರೋಪದಲ್ಲಿ ಕನ್ನಡದ ನಟ ದರ್ಶನ್ ಮತ್ತು ಆತನ ಗೆಳತಿ ಪವಿತ್ರ ಗೌಡ ಮತ್ತಿತರರು ಜೈಲು ಸೇರಿದ ನಂತರ ಕನ್ನಡದ ಈ ಮಾಧ್ಯಮಗಳಿಗೆ ಹಬ್ಬದೂಟದ ಸಂಭ್ರಮ ಬಂದೊದಗಿತು.

ಪ್ರಕರಣದಲ್ಲಿ ಈಗಿನ್ನೂ ವಿಚಾರಣೆ ನಡೆಯತ್ತಿದೆ ಎಂಬುದನ್ನೂ, ಅಂತಿಮ ತೀರ್ಪು ನೀಡಲು ನ್ಯಾಯಾಲಯಗಳಿವೆ ಎಂಬುದನ್ನು ಮರೆತು, ಈ ಮಾಧ್ಯಮಗಳೇ ಪ್ರತಿ ಹಂತದಲ್ಲೂ ಕೊಲೆಯನ್ನು, ಅಪರಾಧಗಳನ್ನು ಚಿತ್ರೀಕರಿಸಿ ಕೊಂಡಿವೆಯೇನೋ ಎಂಬಂತೆ ವೀಕ್ಷಕರಿಗೆ ಗ್ರಾಫಿಕ್, ರೇಖಾಚಿತ್ರ ಆಧಾರಿತ ‘ರೋಚಕ’ ವರದಿಗಳನ್ನು ನೀಡುವುದು, ಆರೋಪಿಗಳ ಭವಿಷ್ಯದ ಬದುಕಿನ ಕುರಿತು ಆರೋಪಿಗಳ ಹತ್ತಿರದ ಸಂಬಂಧಿಕರು, ಸ್ನೇಹಿತರು ಸಹ ಮಾಡಲಾಗದ ಊಹಾಪೋಹಗಳನ್ನು ಮಾಡಿ ಸುದ್ದಿ ಹರಿಯ ಬಿಡುವುದು ಯಾವ ಎಗ್ಗಿಲ್ಲದೇ ನಡೆಯುತ್ತಿದೆ.

ತನ್ನ ಅನುಮತಿಯನ್ನು ನವೀಕರಣ ಮಾಡಿಕೊಳ್ಳದ ಕಾರಣಕ್ಕಾಗಿ ತನ್ನ ಪ್ರಸಾರವನ್ನು ಸ್ಥಗಿತಗೊಳಿಸಿರುವ ಪವರ್ ಟಿ.ವಿ. ಎಂಬ ಮಾಧ್ಯಮದಲ್ಲಿ ಈ ಪ್ರಕರಣದ ಪ್ರಮುಖ ಆರೋಪಿ ಮಹಿಳೆಗೆ ‘ಸೆಕೆಂಡ್ ಹ್ಯಾಂಡ್ ಸುಂದರಿ’ ಎಂಬ ತೀರಾ ಕೀಳು ಭಾಷೆಯನ್ನು ಬಳಕೆ ಮಾಡಲಾಯಿತು. ಪವಿತ್ರಗೌಡರನ್ನು ವಿಲನ್ ಮಾಡಿ, ದರ್ಶನ್ ಪರ ಸಹಾನುಭೂತಿ ಸೃಷ್ಟಿಸುವಂತಹ ವರದಿಗಳೂ ಕೆಲವು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿವೆ.

ಇದ್ಯಾವುದೂ ಕೊಲೆ, ಕೊಲೆ ಪ್ರಚೋದನೆಗಳ, ಅತ್ಯಾಚಾರಗಳ ಸಮರ್ಥನೆ ಅಲ್ಲ. ಅಪರಾಧ ಪ್ರಕರಣಗಳ ಸುದ್ದಿಯೇ ಆದರೂ ಮಾಧ್ಯಮಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ಮರೆತು ತಮ್ಮದೇ ಘನತೆಯನ್ನು ಗಾಳಿಗೆ ತೂರಬಾರದು. ಆಕೆ ಕೊಲೆ ಆರೋಪಿಯಾಗಿದ್ದರೆ ಆ ಸಂಬಂಧ ಸೂಕ್ತವಾದ ಪ್ರಶ್ನೆಗಳನ್ನು ಎತ್ತಬಹುದೇ ಹೊರತು, ಮಹಿಳಾ ನಿಂದನೆಯ ಭಾಷೆಯನ್ನು ಬಳಸುವುದು ಗಂಭೀರವಾದ ತಪ್ಪೇ ಆಗುತ್ತದೆ.

ಜರ್ಮನಿಯಿಂದ ಪ್ರಜ್ವಲ್ ರೇವಣ್ಣ ಬರುವಾಗ ಆತ ಬರುತ್ತಿರುವ ವಿಮಾನ, ಅದು ಸಮುದ್ರದ ಮೇಲೆ ಈಗ ಎಲ್ಲಿದೆ ಎಂಬುದನ್ನೆಲ್ಲಾ ಟ್ರ್ಯಾಕ್ ಮಾಡಿ ತೋರಿಸಿದರು ಎನ್ನುತ್ತವೆ ಸಾಮಾಜಿಕ ಮಾಧ್ಯಮದ ವರದಿಗಳು. ಇನ್ನು ರೇಣುಕಾ ಸ್ವಾಮಿ ಕೊಲೆ ಆರೋಪಿಗಳು ಬಂಧಿತರಾದ ಮೇಲೆ ಜೈಲಿನಲ್ಲಿ ಅವರು ಉಂಡಿದ್ದು, ತಿಂದಿದ್ದು, ನಿದ್ರೆ ಮಾಡಿದ್ದು, ಮಾಡದೇ ಇದ್ದದ್ದು, ಸೊಳ್ಳೆ ಕಚ್ಚಿದ್ದು, ಮುಖಕ್ಕೆ ಮೇಕಪ್ ಹಚ್ಚಿದ್ದು.. ದರ್ಶನ್ ತೂಕ ಕಡಿಮೆಯಾಗಿರುವುದು ಈ ಎಲ್ಲ ಸುದ್ದಿಗಳನ್ನು ರಸಗವಳದಂತೆ ಟಿ.ವಿ. ವಾಹಿನಿಗಳು ಜಗಿಯುತ್ತಿವೆ.

ಕನ್ನಡದ ಮಾಧ್ಯಮಗಳು, ಅದರಲ್ಲೂ ಖಾಸಗಿ ಟಿ.ವಿ. ವಾಹಿನಿಗಳು ಬಹುತೇಕವು ನಿಜಕ್ಕೂ ನೈತಿಕ ಅಧಃಪತನಕ್ಕೆ ಗುರಿಯಾಗಿವೆ. ಜನರ ಬದುಕಿನ ನಿಜವಾದ ಹತ್ತಾರು ಸಮಸ್ಯೆಗಳು, ಬದುಕಿನ ಪ್ರಶ್ನೆಗಳು, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ವಿಚಾರಗಳ ಬಗೆಗೆ ಎಷ್ಟೋ ಒಳ್ಳೆಯ ಸುದ್ದಿಗಳನ್ನು ವರದಿಗಳನ್ನು ಮಾಡಲು ಅವಕಾಶಗಳಿದ್ದರೂ ಸಹ ಈ ಮಾಧ್ಯಮಗಳು ಆ ಬಗೆಗೆ ಬಹುತೇಕ ಕಣ್ಣು ಮುಚ್ಚಿಕೊಂಡಿವೆ.

ಪವಿತ್ರ ಗೌಡ ಅವರ ಸಹೋದರ ತನ್ನ ಅಕ್ಕನನ್ನು ಭೇಟಿ ಮಾಡಲು ಜೈಲಿಗೆ ಹೋಗುವಾಗ ಮಾಧ್ಯಮಗಳವರು ಅವರ ಬೆನ್ನಟ್ಟಿದ್ದಾರೆ. ಅದಕ್ಕವರು ‘ನಿಮಗೆ ಬೇರೆ ಕೆಲಸ ಇಲ್ಲವೇ’ ಎಂದು ಆಕ್ಷೇಪಿಸಿದ್ದಷ್ಟಕ್ಕೆ, ಕನ್ನಡ ರಿಪಬ್ಲಿಕ್ ಟಿ.ವಿ.ಯ ಜಯಪ್ರಕಾಶ ಶೆಟ್ಟಿ ಉಪ್ಪಳ ‘ನಮಗೆ ಬೇರೆ ಕೆಲಸ ಇಲ್ಲ’, ‘ಶೆಡ್ಡಿಗೆ ಹೋಗೋಣ ಬಾ’, ‘ಕುಂಟಾ ಬಿಲ್ಲೆ ಆಡೋಣ ಬಾ’ ಮುಂತಾಗಿ ಅಗ್ಗದ ವ್ಯಂಗ್ಯಗಳನ್ನು ಮಾಡಿ ಈಗ ಜನರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿದ್ದಾರೆ. ನ್ಯೂಸ್–18 ಚಾನಲ್ ಅಂತೂ ದರ್ಶನ್ ಕಷ್ಟಕ್ಕೆ ಸಿಲುಕಿದ್ದು ಯಾಕೆ? ಶನಿ ಯಾವ ಸ್ಥಾನದಲ್ಲಿದ್ದಾನೆ, ಸಂಕಷ್ಟ ಪರಿಹಾರಕ್ಕೆ ಏನು ಮಾಡಬೇಕು ಎಂದೆಲ್ಲಾ ಜ್ಯೋತಿಷಿಗಳಿಂದ ಸಲಹೆ ಕೊಡಿಸುತ್ತಿದ್ದಾರೆ. ದರ್ಶನ್ ಪತ್ನಿಯ ಬೆನ್ನು ಹತ್ತಿ, ಆವರು ಬಂಡಿ ಮಹಾಕಾಳಿ ದೇವಸ್ಥಾನಕ್ಕೆ ಹೋಗಿದ್ದು, ಮಾಡಿಸುತ್ತಿರುವ ಪೂಜೆಗಳ ವಿವರಗಳನ್ನೆಲ್ಲವನ್ನೂ ಪ್ರಚಾರ ಮಾಡುತ್ತಿದೆ.

ಮಹಿಳೆಯರಿಗೆ ತನ್ನ ಲೈಂಗಿಕ ಅಂಗದ ಚಿತ್ರ ಕಳಿಸುವ ರೇಣುಕಾ ಸ್ವಾಮಿಯ ವಿಕೃತ ನಡವಳಿಕೆಗಳು ಸಹ ಒಪ್ಪತಕ್ಕದ್ದಲ್ಲ. ಈ ಕಾರಣವಾಗಿ ನಡೆದಿರುವ ಕಗ್ಗೊಲೆ ಖಂಡನಾರ್ಹ. ದರ್ಶನ್ ಅಭಿಮಾನಿಗಳ ಪುಂಡಾಟಿಕೆ, ಗೂಂಡಾಗಿರಿ, ದರ್ಶನ್ ವರ್ತನೆಯನ್ನು ಟೀಕಿಸುವವರನ್ನು, ಸಾಕ್ಷ್ಯ ಹೇಳಬಹುದಾದವರನ್ನು ಬೆದರಿಸುವ, ಭಂಡತನದ ವರ್ತನೆಗಳೂ ಖಂಡನೀಯ. ಜೊತೆಗೆ ಈ ಸಂಬಂಧದ ಸುದ್ದಿ ನಿರೂಪಣೆಗಳಲ್ಲಿ ಮಹಿಳಾ ನಿಂದನೆ, ಅಪರಾಧದ ವರದಿಗಳಲ್ಲಿ ರೋಚಕತೆ, ವೈಭವೀಕರಣ, ಮಾಧ್ಯಮಗಳೇ ಪ್ರಕರಣದ ಕುರಿತು ಅಂತಿಮ ತೀರ್ಪು ಘೋಷಿಸುವಂತಹ ಧೋರಣೆ, ಆರೋಪಿಗಳ ಹತ್ತಿರದ ಸಂಬಂಧಿಕರೆಲ್ಲರನ್ನೂ ಅಪರಾಧಿಗಳಂತೆ ಚಿತ್ರಿಸುವ ಪ್ರವೃತ್ತಿ, ಪರೋಕ್ಷವಾಗಿ ಕೊಲೆಯನ್ನು ಸಮರ್ಥಿಸುವುದನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡುವುದು ಎಲ್ಲವೂ ಖಂಡನೀಯವೇ. ಸಿನಿಮಾ ಕ್ಷೇತ್ರದ ಮಂದಿ ದರ್ಶನ್ ಪರ ವಹಿಸಿ ಆಡಿರುವ ಮಾತುಗಳನ್ನು ಪ್ರಸಾರ ಮಾಡುವ ಮಾಧ್ಯಮಗಳಿಗೆ ತಮ್ಮ ವರದಿ ವೀಕ್ಷಕರ ಮೇಲೆ ಬೀರುವ ಪರಿಣಾಮಗಳ ಬಗೆಗೆ ಕಾಳಜಿಯೇ ಹೋಗಿದೆ. ವರದಿಗಾರಿಕೆಯಲ್ಲಿ ಸಂಯಮ, ಸಮತೋಲನ, ಚಿಕಿತ್ಸಕ ದೃಷ್ಟಿ ಎಂಬುದು ಇಲ್ಲವೇ ಇಲ್ಲ ಎಂಬಂತಾಗಿದೆ.

ಪವಿತ್ರಗೌಡರ ತಮ್ಮ ತನ್ನ ಅಕ್ಕನಿಗೆ ಯಾಕೆ ಬುದ್ದಿ ಹೇಳಲಿಲ್ಲ ಎಂದು ಆಕ್ಷೇಪಿಸುವವರು, ರೇಣುಕಾ ಸ್ವಾಮಿ ತಾನು ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದ ವಿಶ್ವ ಹಿಂದೂ ಪರಿಷತ್–ಬಜರಂಗದಳದಲ್ಲಿ ಏನು ಸಂಸ್ಕಾರ ಕಲಿತ, ಯಾಕೆ ಸಂಘಪರಿವಾರ ಅವನನ್ನು ತಿದ್ದಲಿಲ್ಲ ಎಂದು ಕೇಳಬಹುದಿತ್ತಲ್ಲವೇ? ಈ ಪ್ರಶ್ನೆ ಕೇಳಲಾಗಿದೆಯೇ? ಇವೆಲ್ಲವೂ ಈ ಮಾಧ್ಯಮಗಳು ನೈತಿಕವಾಗಿ ಯಾವ ಮಟ್ಟಕ್ಕೆ ಕುಸಿದಿವೆ ಎಂಬುದಕ್ಕೆ ಸಾಕ್ಷಿಯಾಗಿವೆ.

ಇತ್ತೀಚಿನ ಭೀಕರ ರೈಲ್ವೆ ಅಫಘಾತಗಳಿಗೆ ಕೇಂದ್ರ ಸರಕಾರ ನೇರ ಜವಾಬ್ದಾರ: ಜನತಾ ಆಯೋಗ

ಸಾರ್ವಜನಿಕ ವಲಯ ಮತ್ತು ಸೇವೆಗಳ ಮೇಲಿನ ಜನತಾ ಆಯೋಗ (ಪೀಪಲ್ಸ್ ಕಮಿಶನ್– ಪ್ರಮುಖ ವಿಷಯ ತಜ್ಞರು, ನ್ಯಾಯಾಧೀಶರು, ಮಾಜಿ ಆಡಳಿತಗಾರರು, ಟ್ರೇಡ್ ಯೂನಿಯನ್ ಮತ್ತು ಸಾಮಾಜಿಕ ಕಾರ್ಯಕರ್ತರ ಸಂಸ್ಥೆ) ಇತ್ತೀಚಿನ ರೈಲು ಅಫಘಾತಗಳು ವ್ಯವಸ್ಥೆಯ ವೈಫಲ್ಯಗಳ ಮೇಲಿನ ಗಮನದ ಕೊರತೆಯಿಂದಾಗಿ ಆದವು ಎಂದು ಹೇಳಿ, ಕೇಂದ್ರ ಸರ್ಕಾರವನ್ನು ಇದಕ್ಕೆ ನೇರ ಜವಾಬುದಾರ ಎಂದು ಹೇಳಿದೆ!

ವಸಂತರಾಜ್ ಎನ್.ಕೆ.

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಅಂದರೆ, ಜೂನ್ 17 ರಂದು ನಡೆದ ಒಂದು ಪ್ರಯಾಣಿಕ ರೈಲು ಮತ್ತು ಸರಕು ರೈಲುಗಳ ನಡುವಿನ ಅಪಘಾತ ರೈಲು ಸುರಕ್ಷತೆಯ ಬಗ್ಗೆ ಸರ್ಕಾರದ ಗಮನದ ಕೊರತೆಯ ಪರಿಣಾಮ ಎಂದು ಹೇಳಿದೆ. ಈ ಅಪಘಾತ ಮತ್ತು ಕಳೆದ ಒಂದು ವರ್ಷದ ರೈಲು ಅಪಘಾತಗಳನ್ನು ನೋಡಿದರೆ ಐದು ಮುಖ್ಯ ಅಂಶಗಳು ಎದ್ದು ಕಾಣುತ್ತವೆ ಮತ್ತು ಅವು ರೈಲು ಸುರಕ್ಷೆಯ ವ್ಯವಸ್ಥಾತ್ಮಕ ಅಂಶಗಳತ್ತ ಬೊಟ್ಟು ಮಾಡಿ ತೋರಿಸುತ್ತಿವೆ. ಅವುಗಳೆಂದರೆ:

i. ಹೆಚ್ಚು ಸಂಖ್ಯೆಯ ಸಿಗ್ನಲ್ ವೈಫಲ್ಯಗಳು ಮತ್ತು ಇಂತಹ ಪರಿಸ್ಥಿತಿಗಳಲ್ಲಿ ಎಂತಹ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗೆಗೆ ರೈಲು ಸಿಬ್ಬಂದಿಗೆ ಸ್ಪಷ್ಟತೆ ಇಲ್ಲದೆ ಇರುವುದು

ii. ಲೋಕೋ ಪೈಲಟ್ ಗಳ ಅಮಾನವೀಯ ಕಾರ್ಯ ಪರಿಸ್ಥಿತಿಗಳಲ್ಲಿ ಸುಧಾರಣೆ ತಂದು ಪರಿಹರಿಸುವ ಸಕ್ಷಮತೆ ಸರ್ಕಾರದಲ್ಲಿ ಇಲ್ಲದೆ ಇರುವುದು

iii. ರೈಲು ಸುರಕ್ಷತಾ ವಿಭಾಗದಲ್ಲಿ ದೊಡ್ಡ ಸಂಖ್ಯೆಯ ಖಾಲಿ ಹುದ್ದೆಗಳು

iv. ಯಾವುದೇ ರೈಲು ಅಫಘಾತವಾದರೂ ಅದನ್ನು ಸುರಕ್ಷತಾ ನೌಕರರಾದ ಲೋಕೋ ಪೈಲಟ್ ಗಳು, ಸ್ಟೇಷನ್ ಮಾಸ್ಟರ್ ಗಳು ಸಿಗ್ನಲ್ ಮತ್ತು ಟೆಲಿ ಸಂಪರ್ಕ ವ್ಯವಸ್ಥೆ, ಇತ್ಯಾದಿಗಳ ಮೇಲೆ ಹೊರಿಸಿ, ತಮ್ಮ ಜವಾಬುದಾರಿಯಿಂದ ನುಣುಚಿಕೊಳ್ಳುವ ಉನ್ನತ ರೈಲು ಅಧಿಕಾರಿಗಳ ಕುತಂತ್ರ ಮತ್ತು

v. ಡಿಕ್ಕಿ ವಿರೋಧಿ ತಾಂತ್ರಿಕ ವ್ಯವಸ್ಥೆಯಾದ 'ಕವಚ' ವನ್ನು ಸ್ಥಾಪಿಸುವಲ್ಲಿನ ಅಸಾಮಾನ್ಯ ವಿಳಂಬ

ಸಿಗ್ನಲ್ ವೈಫಲ್ಯಗಳು:

ಇತ್ತೀಚಿನ ಡಿಕ್ಕಿಗಳು ಮತ್ತು ಅಪಘಾತಗಳು ಯಾಕೆಂದರೆ, ಸಿಗ್ನಲ್ ವಿಫಲವಾದಾಗ ಅಥವಾ ದೋಷಪೂರ್ಣವಾಗಿದ್ದಾಗ Signal Passing at Danger (SPAD) ಎಂದು ಕರೆಯಲಾಗುವ ಸಿಗ್ನಲ್ ದಾಟುವಾಗಿನ ಅಪಾಯದಿಂದ ಆದವು. ಈ ಅಪಘಾತಗಳು ಬಹಳ ಮಟ್ಟಿಗೆ ಚಾಲಕ ಸಿಬ್ಬಂದಿ ಮತ್ತು ಇತರೆ ರೈಲು ಕೆಲಸಗಾರರಿಗೆ ಇಂತಹ ಸಂದರ್ಭದಲ್ಲಿ ಏನು ಮಾಡಬೇಕೆಂಬುದರ ಬಗೆಗೆ ಏನೂ ಗೊತ್ತಿರದೆ ತೀವ್ರ ಗೊಂದಲ ಇರುವುದರಿಂದ ಆದವುಗಳು. ರೈಲು ಚಾಲಕರು ಮತ್ತು ಸ್ಟೇಷನ್ ಮಾಸ್ತರುಗಳಿಗೆ ಸಿಗ್ನಲ್ ಗಳು ವಿಫಲವಾದಗ ಏನು ಮಾಡಬೇಕೆಂಬುದರ ಬಗೆಗೆ ಸ್ಪಷ್ಟ ವಿಧಾನಗಳ ನಿರ್ದೇಶನಗಳು ಇರಲೇ ಇಲ್ಲವಾದರಿಂದ ಈ ಅಪಘಾತಗಳು ಸಂಭವಿಸಿದವು. ಸಿಗ್ನಲ್ ಉಪಕರಣಗಳ ವೈಫಲ್ಯಗಳು ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗಿಲ್ಲ ಎಂಬುದು ಬಹಳ ಆತಂಕಕಾರಿ ವಿಷಯ. 2020–21 ರಲ್ಲಿ 54,444, 2021–22 ರಲ್ಲಿ 65,149 ಮತ್ತು 2022–23 ರಲ್ಲಿ 51,888 ಅಪಘಾತಗಳು ಈ ಕಾರಣಗಳಿಂದ ಆಗಿವೆ. ಭಾರತೀಯ ರೈಲ್ವೇ ಯ ಮಾಸಿಕ ಅಂಕೆ ಸಂಖ್ಯೆ ಪ್ರಕಟಣೆಯಲ್ಲಿ ಈ ಅಂಕೆ ಸಂಖ್ಯೆಗಳು ಈಗ ಲಭ್ಯವೇ ಇಲ್ಲವೆಂಬುದನ್ನು ಆಯೋಗ ಬಹಳ ಖೇದದಿಂದ ಗಮನಿಸಿದೆ. ಆಳುವವರಿಗೆ ಅನಾನುಕೂಲವಾದ ದತ್ತಾಂಶವನ್ನು ಸಾರ್ವಜನಿಕರಿಂದ ಮುಚ್ಚಿಡುವ ಇನ್ನೊಂದು ಪ್ರಕರಣವಿದು.



ರೈಲ್ವೆಯಲ್ಲಿ 1,70,000ಕ್ಕೂ ಹೆಚ್ಚು ಸುರಕ್ಷಿತತೆ ಪ್ರವರ್ಗದ ಹುದ್ದೆಗಳು ಖಾಲಿ ಇವೆ.

"ಉದ್ಘಾಟನೆಗೆ ಕಾಯಲಾಗದ ಒಂದು ರೈಲಿದ್ದರೆ ಅದು ಈ ಉದ್ಯೋಗಗಳ ರೈಲು!"

ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ರೈಲು ಚಾಲಕರ ದೀರ್ಘ ದುಡಿಮೆಯ ಸಮಯ ಮತ್ತು ಅಲ್ಪ ವಿರಾಮ ಸುರಕ್ಷತೆಗೆ ಕುತ್ತು

ರೈಲ್ವೇಯ ವಿಶೇಷ ಕಾರ್ಯಪಡೆಯ 2017 ರ ವರದಿಯ ಪ್ರಕಾರ, ರೈಲು ಚಾಲಕರು ಮನೆ ವಿರಾಮದಿಂದ ಕರ್ತವ್ಯಕ್ಕೆ ಹಾಜರಾದ ನಂತರ ಈ ಅಪಾಯಗಳು ಆಗುತ್ತವೆ. ಈ ಪಡೆಯ ಪ್ರಕಾರ ಈ ರೈಲು ಚಾಲಕರಿಗೆ ವಿರಾಮದಿಂದ ಕರ್ತವ್ಯಕ್ಕೆ ಹಾಜರಾಗುವ ವೇಳೆಗೆ ಅಗತ್ಯವಿರುವಷ್ಟು ವಿರಾಮ ದೊರೆತಿರುವುದಿಲ್ಲ. ರೈಲು ಚಾಲಕರ ಅಪಾರ ಸಂಖ್ಯೆಯ ಹುದ್ದೆಗಳು ಖಾಲಿ ಇರುವುದರಿಂದ ಅವರಿಗೆ ಅವಶ್ಯವಿರುವಷ್ಟು ವಿರಾಮ ನೀಡುವುದು ಸಾಧ್ಯವಾಗುವುದಿಲ್ಲ. ಸುಸಂಘಟಿತ ಉದ್ದಿಮೆಗಳಲ್ಲಿ ಈ ದಿನಗಳಲ್ಲಿ ಕೆಲಸಗಾರರಿಗೆ ದೊರೆವ ಪ್ರಮಾಣದ ವಿರಾಮ ರೈಲು ಚಾಲಕರಿಗೆ ದೊರೆಯುವುದಿಲ್ಲ ಎಂಬುದು ಆಶ್ಚರ್ಯಕರ! ಅವರಿಗೆ 10 ದಿನಗಳಲ್ಲಿ 30 ತಾಸುಗಳ ರೈಲ್ವೆ ವಲಯದಲ್ಲಿ ಹೇಳುವಂತಹ "ಅವಧಿ ವಿರಾಮ"ವಷ್ಟೇ ದೊರೆಯುತ್ತದೆ. ಜನತಾ ಆಯೋಗ ಇವರಿಗೆ ತಿಂಗಳಲ್ಲಿ ನಾಲ್ಕು ಬಾರಿ 16 ತಾಸುಗಳ ಕೆಲಸದ ನಂತರ 30 ತಾಸುಗಳ ಸತತ ವಿರಾಮ ಬೇಕೆಂಬುದನ್ನು ಪುಷ್ಟಿ ಕೊಟ್ಟು ಬೆಂಬಲಿಸುತ್ತದೆ. ಜೂನ್ 17 ರ ಅಪಘಾತದ ವರದಿ ಪ್ರಕಾರ ಸರಕು ರೈಲಿನ ಚಾಲಕನಿಗೆ ಸತತ ನಾಲ್ಕು ರಾತ್ರಿಗಳ ಕರ್ತವ್ಯದ ನಂತರ 30 ತಾಸುಗಳ ವಿರಾಮ ದೊರೆತಿತ್ತು. ಅಂದರೆ ಅಪಘಾತದ ಮೊದಲು ಈ ಚಾಲಕನಿಗೆ ಸಿಗಬೇಕಾದ ವಿಶ್ರಾಂತಿ ದೊರೆತಿರಲಿಲ್ಲ. ರೈಲು ಸುರಕ್ಷತೆಯ ಆಯುಕ್ತರು ಅಕ್ಟೋಬರ್ 2023 ರ ವಿಜಯನಗರಮ್ ಅಪಘಾತದ ನಂತರ ಮಾಡಿದ ಶಿಫಾರಸ್ಸಿನ ಪ್ರಕಾರ ರೈಲು ಚಾಲಕರಿಂದ ಎರಡು ಸತತ ರಾತ್ರಿಗಿಂತ ಹೆಚ್ಚಿಗೆ ಕರ್ತವ್ಯವನ್ನು ವಿಶ್ರಾಂತಿಯಿಲ್ಲದೆ ಮಾಡಿಸಬಾರದು.

ಈ ಚಾಲಕರ ಇನ್ನೊಂದು ಬಹುದಿನದ ಬೇಡಿಕೆ ಅವರ ಕೆಲಸದ ದಿನವನ್ನು ಕಡಿಮೆ ಮಾಡುವುದು. ಸರ್ಕಾರ 1973 ರಷ್ಟು ಹಿಂದೆಯೇ ಅವರ ಕೆಲಸದ ದಿನ 10 ತಾಸುಗಳಿಗೆ ಸೀಮಿತ ವಾಗಿರಬೇಕೆಂಬ ಬೇಡಿಕೆಯನ್ನು ಒಪ್ಪಿತ್ತು. ಆದರೆ ನಂತರದ ಅರ್ಧ ಶತಮಾನಕ್ಕೂ ಹೆಚ್ಚಿನ ಅವಧಿಯಲ್ಲಿ ಸರ್ಕಾರಗಳು ಈ ವಿಷಯದಲ್ಲಿ ಮೀನ ಮೇಷ ಎಣಿಸಿವೆ. ಸರಕು ಸಾಗಣೆ ರೈಲುಗಳ ಚಾಲಕರಿಗೆ ಇದು ಗಂಭೀರ ಸಮಸ್ಯೆ ಯಾಕೆಂದರೆ ಈ ರೈಲುಗಳಿಗೆ ನಿರ್ದಿಷ್ಟ ವೇಳಾಪಟ್ಟಿಗಳಿಲ್ಲ. ಆದ್ದರಿಂದ ಉದ್ದುದ್ದ ಮತ್ತು ಅನಿಶ್ಚಿತ ಕರ್ತವ್ಯ ಅವಧಿಗಳು ಉಂಟಾಗುತ್ತವೆ!

ಮೂರು ಸಾವಿರ (3000) ಸಂಖ್ಯೆಯಲ್ಲಿರುವ ಮಹಿಳಾ ಚಾಲಕರು ಇನ್ನೂ ಹೆಚ್ಚಿನ ಸಮಸ್ಯೆ ಎದುರಿಸುತ್ತಾರೆ. ಯಾಕೆಂದರೆ ಅವರಿಗೆ ಮುಟ್ಟಿನ ರಜೆಗಳಿಲ್ಲ; ಹೆರಿಗೆಯ ನಂತರ ಆರು ತಿಂಗಳಿಗೆ ಅವರು ಕರ್ತವ್ಯಕ್ಕೆ ಹಾಜರಾಗಲೇಬೇಕು. ಮಕ್ಕಳನ್ನು ಸಾಕಲು ಅವರಿಗೆ ಅವಕಾಶ ಕಡಿಮೆಯಾಗುತ್ತದೆ. ವಿಚಿತ್ರವೆಂದರೆ ಸ್ವಚ್ಛ ಭಾರತದ ಘೋಷಣೆ ಮಾಡುವ ಸರ್ಕಾರ ಈ ರೈಲುಗಳಲ್ಲಿ ಶೌಚಾಲಯದ ವ್ಯವಸ್ಥೆ ಮಾಡಿಲ್ಲ!

ಭಾರತೀಯ ರೈಲ್ವೆ ರೈಲು ಚಾಲಕರನ್ನು "ನಿರಂತರ ಕೆಲಸಗಾರರು"ಎಂದು ಪರಿಗಣಿಸಿ ವಾರದಲ್ಲಿ ಅವರು 104 ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ಬಯಸುತ್ತದೆ. ನಿಜದಲ್ಲಿ ಆಂತರಿಕ ಸುತ್ತೋಲೆಗಳನ್ನು ಹೊರಡಿಸಿ ಇವರನ್ನು ವಾರದಲ್ಲಿ 125 ತಾಸುಗಳ ಕಾಲ ದುಡಿಸಲಾಗುತ್ತದೆ. ಇಂತಹ ಅತಿಯಾದ ಕೆಲಸ ರೈಲು ಸುರಕ್ಷೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಖಾಲಿ ಹುದ್ದೆಗಳು ಮತ್ತು ಹೆಚ್ಚುತ್ತಿರುವ ಕೆಲಸದ ಹೊರೆ

ಧೀರ್ಘ ಕರ್ತವ್ಯ–ಸಮಯ ಮತ್ತು ಕಡಿಮೆ ವಿಶ್ರಾಂತಿ, ರೈಲ್ವೆ ಖಾಲಿ ಹುದ್ದೆಗಳನ್ನು ತುಂಬದಿರುವುದರಿಂದ ಉಂಟಾದದ್ದು. ಈಗ ಖಾಲಿ ಹುದ್ದೆಗಳ ಸಂಖ್ಯೆ 3.12 ಲಕ್ಷದಷ್ಟು ದೊಡ್ಡದು. ರೈಲು ಚಾಲಕರ ಖಾಲಿ ಹುದ್ದೆಗಳ ಸಂಖ್ಯೆ 18 ಸಾವಿರದಷ್ಟು. ರೈಲ್ವೆ ಮಂಡಳಿ ಬರೀ 5,696 ಚಾಲಕ ಹುದ್ದೆಗಳನ್ನು ತುಂಬಲು ಘೋಷಣೆ ಮಾಡಿತ್ತು. ದಕ್ಷಿಣ ರೈಲ್ವೆಯ ಚಾಲಕರ ಮುಷ್ಕರ ಮತ್ತು ಇತ್ತೀಚಿನ ದಿನಗಳ ಅಪಘಾತಗಳ ಸಂಖ್ಯೆ ನೋಡಿ 18,799 ಹುದ್ದೆಗಳನ್ನು ತುಂಬುವ ಯೋಜನೆಯನ್ನು ಅದು ಹಾಕಿಕೊಂಡಿದೆ. ಹಿಂದಿನ ಅನುಭವದಿಂದ ಹೇಳುವುದಾದರೆ, ಈ ಹುದ್ದೆಗಳನ್ನು ತುಂಬುವ ಹೊತ್ತಿಗೆ ಇನ್ನಷ್ಟು ಹುದ್ದೆಗಳು ಖಾಲಿ ಬೀಳುತ್ತವೆ!

ಆರ್.ಟಿ.ಐ ಅರ್ಜಿಗೆ ಸಿಕ್ಕ ಮಾಹಿತಿಯ ಪ್ರಕಾರ ಸುರಕ್ಷಾ ವರ್ಗದ ಮಂಜೂರಾತಿ ಹೊಂದಿದ 10 ಲಕ್ಷ ಹುದ್ದೆಗಳ ಸಂಖ್ಯೆಯಲ್ಲಿ ಸುಮಾರು 1.5 ಲಕ್ಷ ಹುದ್ದೆಗಳು ಖಾಲಿ ಇವೆ. ಕೆಲಸಗಾರರ ಸಂಖ್ಯೆಯನ್ನು ನಿರಂತರ ಕಡಿತಗೊಳಿಸುವ ಈ ಹುನ್ನಾರದಲ್ಲಿ ಮೇಲೆ ಹೇಳಿರುವ ಸಂಖ್ಯೆಗಳೂ ರೈಲ್ವೆಯನ್ನು ಸುರಕ್ಷಿತವಾಗಿ ನಡೆಸಲು ಸಾಕಾಗುತ್ತದೋ ಇಲ್ಲವೋ ಹೇಳುವುದು ಕಷ್ಟ. ಎಲ್ಲ ತರಹದ ಕೆಲಸಗಾರರ ಸಂಖ್ಯೆಯಲ್ಲೂ ಕೊರತೆಯಿದೆ– ರೈಲು ಚಾಲಕರು, ಇನಸ್ಪೆಕ್ಟರ್ ಗಳು, ಸಿಬ್ಬಂದಿ ಕಂಟ್ರೋಲ್ಲರ್ ಗಳು, ಸಿಗ್ನಲ್ ಸುಪರ್ವೈಸರುಗಳು, ಹಾಲಿ ನಿರ್ವಹಣೆಗಾರರು, ಇತ್ಯಾದಿ. ಈ ಕೆಲಸಗಾರರು ಸುರಕ್ಷತೆಯಲ್ಲಿ ಬಹಳ ಮುಖ್ಯವಾದವರು. ಈ ಕೊರತೆ ಹಾಲಿ ನೌಕರರ ಮೇಲೆ ಹೆಚ್ಚಿನ ಒತ್ತಡ ತರುತ್ತದೆ. ಯಾವುದೇ ಸಮಯದಲ್ಲಿ ನೌಕರಿಯಿಂದ ತೆಗೆಯುವ ಬೆದರಿಕೆ ಇನ್ನೂ ಹೆಚ್ಚಿನ ಒತ್ತಡ ತರಬಹುದು ಎಂಬುದು ಈ ಕೊರತೆಯ ಇನ್ನೊಂದು ಆಯಾಮ.

ಜನತಾ ಆಯೋಗ ರೈಲ್ವೆ ಮಂಡಳಿ ಮತ್ತು ಮಂತ್ರಾಲಯವನ್ನು ಈ ಪರಿಸ್ಥಿತಿಯನ್ನು ತುರ್ತಾಗಿ ಸುಧಾರಿಸಬೇಕಂದು ಒತ್ತಾಯಿಸುತ್ತದೆ. ಯಾಕೆಂದರೆ ಇದು ಪ್ರಯಾಣಿಕರ ಮತ್ತು ಕೆಲಸಗಾರರ ಸುರಕ್ಷೆಯನ್ನು ಒಳಗೊಂಡಿದೆ ಎಂಬುದನ್ನು ಗಮನಿಸಬೇಕು.

ಜವಾಬುದಾರಿಯಿಂದ ನುಣುಚಿಕೊಳ್ಳುವ ಮತ್ತು ಕೆಲಸಗಾರರನ್ನು ದೂಷಿಸುವ ಉನ್ನತ ಅಧಿಕಾರಿಗಳ ಪ್ರವೃತ್ತಿ

ಈ ಅಪಘಾತಗಳ ಒಂದು ಚಿಂತಾದಾಯಕ ವಿಷಯವೆಂದರೆ ರೈಲು ಮಂತ್ರಿ ಮತ್ತು ಉನ್ನತ ಅಧಿಕಾರಿಗಳ, ರೈಲು ಮಂಡಳಿಯ ಅತ್ಯಂತ ಕೆಳಸ್ತರದ ಕೆಲಸಗಾರರನ್ನು ಅದರಲ್ಲೂ ಚಾಲಕರು, ಸ್ಟೇಷನ್ ಮಾಸ್ಟರುಗಳು, ಸಿಗ್ನಲ್ ಸಿಬ್ಬಂದಿ ಮತ್ತು ಇತರ ಸಿಬ್ಬಂದಿಗಳನ್ನು ದೂಷಿಸುವ ನಡವಳಿಕೆ ಮತ್ತು ಪ್ರವೃತ್ತಿ. ಇತ್ತೀಚಿನ ಅಪಘಾತದ ನಂತರವೂ ಇದನ್ನೇ ಮಾಡಲಾಯಿತು.

ಆಘಾತಕಾರಿ ವಿಷಯವೆಂದರೆ, 14 ಸಾವುಗಳು ಉಂಟಾದ ವಿಜಯನಗರಮ್ ಅಪಘಾತದ ನಂತರ ರೈಲು ಮಂತ್ರಿಗಳು ಚಾಲಕ ಮತ್ತು ಸಹಾಯಕ ಚಾಲಕ ಇಬ್ಬರೂ ಮೊಬೈಲ್ ನಲ್ಲಿ ಕ್ರಿಕೆಟ್ ಮ್ಯಾಚ್ ನೋಡುತ್ತಿದ್ದರು ಎಂಬ ಸುಳ್ಳು ಆರೋಪ ಮಾಡಿದ್ದು. ಇದನ್ನು ರೈಲು ಸುರಕ್ಷತಾ ಆಯುಕ್ತರು ಸಂಪೂರ್ಣ ಸುಳ್ಳು ಎಂದು ಸಿದ್ಧ ಮಾಡಿದರು. ಆದರೂ ರೈಲು ಮಂತ್ರಿ ತಮ್ಮ ಬೇಜವಾಬ್ದಾರಿ ಹೇಳಿಕೆಗೆ ಕ್ಷಮೆ ಕೇಳಲಿಲ್ಲ. ಕೆಲಸಗಾರರ ನೈತಿಕತೆಯ ಮೇಲೆ ಇದು ಹಾನಿಕಾರಕ ಪರಿಣಾಮ ಬೀರುತ್ತದೆ. ರೈಲ್ವೇಯ ಹಿರಿಯ ಅಧಿಕಾರಿಗಳು ರೈಲು ಓಡಾಟದ ವ್ಯತ್ಯಯವನ್ನು ಅವರ ಮನಸ್ಸಿಗೆ ಬಂದಂತೆ ರೈಲು ಸುರಕ್ಷೆಯನ್ನು ನಿರ್ಲಕ್ಷಿಸಿ ಮಾಡಲು ಒತ್ತಡ ಹೇರುತ್ತಾರೆ. ಅವರ ಇಂತಹ ಬೇಜವಾಬ್ದಾರಿ ಆಜ್ಞೆಗಳನ್ನು ನಿರಾಕರಿಸುವ ಕೆಲಸಗಾರರನ್ನು ಸೇವೆಯಿಂದ ತೆಗೆದು ಹಾಕಲಾಗುತ್ತದೆ. ಇಂತಹ ಅಪಾಯಕಾರಿ ತೀರ್ಮಾನಗಳು ರೈಲು ಮಂಡಳಿಯ ಶಾಮಿಲಿನೊಂದಿಗೆ ನಡೆಯುತ್ತದೆ!

'ಕವಚ್'

ರೈಲುಗಳು ಡಿಕ್ಕಿ ಆಗದಂತೆ ತಡೆಯಲು ರೈಲ್ವೆ ಆಡಳಿತ 'ಕವಚ್' ಎಂಬ ಡಿಕ್ಕಿ ವಿರೋಧಿ ತಂತ್ರಜ್ಞಾನವನ್ನು ಅದು ಜಾದೂದಂಡವೋ ಎಂಬಂತೆ ಝಳಪಿಸುತ್ತಿದೆ. ಇದು ಕೆಲಸ ಮಾಡಲು ನಿಲ್ದಾಣಗಳಲ್ಲಿ, ಹಳಿಗಳ ಮೇಲೆ, ಸಿಗ್ನಲ್ ಗಳಲ್ಲಿ ಮತ್ತು ರೈಲುಗಳಲ್ಲಿ ಎಲ್ಲ ಕಡೆಗಳಲ್ಲೂ ಅತಿ ಉತ್ತಮ ಸಂವಹನ ವ್ಯವಸ್ಥೆಯನ್ನು ಬಯಸುತ್ತದೆ. ಇದರ ಅನುಷ್ಠಾನದಲ್ಲಿ ಅತಿಯಾದ ಆಲಸ್ಯ ಕಂಡು ಬರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಬರೀ 1500 ಕಿ ಮೀ ದೂರ 65 ರೈಲು ಗಾಡಿಗಳಲ್ಲಿ ಇದನ್ನು ಅಳವಡಿಸಲಾಗಿದೆ. ಭಾರತೀಯ ರೈಲ್ವೆ 68 ಸಾವಿರ ಕಿ ಮೀ ಗಳ ಉದ್ದ ಹೊಂದಿದೆ ಮತ್ತು 14,500 ರೈಲು ಗಾಡಿಗಳನ್ನು ಹೊಂದಿದೆ. ಮಾಧ್ಯಮ ವರದಿಗಳ ಪ್ರಕಾರ ಮೂರೇ ಮೂರು ಪೂರೈಕೆದಾರರು ಈ ಕೆಲಸ ಮಾಡುತ್ತಿದ್ದಾರೆ ಮತ್ತು ಅವರ ಸಾಮರ್ಥ್ಯ ಬಹಳ ಸೀಮಿತವಾದದ್ದು ಎಂಬುದು ಸ್ಪಷ್ಟ. ಕಳೆದೆರಡು ಬಜೆಟ ಗಳಲ್ಲಿ ಬರೀ 1200 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಸರ್ಕಾರ ಇದರ ಅನುಷ್ಠಾನದಲ್ಲಿ ಗಂಭೀರವಾಗಿದೆಯೇ ಎಂಬ ಪ್ರಶ್ನೆ ಸಹಜವಾಗಿಯೇ ಹುಟ್ಟುತ್ತದೆ.

ಇತ್ತೀಚಿನ ಅಪಘಾತ ತೋರಿಸುವಂತೆ, ಆಧುನೀಕರಣ ಒಂದು ಆಯಾಮ ಮಾತ್ರ. ಇದರಲ್ಲಿ ಎಂತಹ ಉತ್ಸಾಹಶೂನ್ಯತೆ ಇದೆ ಎಂಬುದು ಮಾನವ ಸಂಪನ್ಮೂಲಗಳನ್ನು ಈ ಯೋಜನೆಯ ಅನುಷ್ಠಾನದಲ್ಲಿ ಬಳಸುತ್ತಿರುವ ಮತ್ತು ಅಭಿವೃದ್ಧಿ ಪಡಿಸುತ್ತಿರುವ ರೀತಿಯಿಂದ ಗೊತ್ತಾಗುತ್ತದೆ. ಜನತೆಯ ಆಯೋಗ ಕವಚ್ ನ ವಿಷಯದಲ್ಲಿ ಎಚ್ಚರಿಕೆ ನೀಡಬಯಸುತ್ತದೆ. ಹಳಿ ತಪ್ಪಿದರೆ, ರೈಲು ಡಿಕ್ಕಿಯಾದರೆ ಕವಚ್ ವ್ಯವಸ್ಥೆ ಸಹ ನಾಶವಾಗುತ್ತವೆ. ಆಗ ಇಡೀ ತಂತ್ರಜ್ಞಾನವೇ ನಿರುಪಯುಕ್ತವಾಗುತ್ತದೆ. ರೈಲು ಕೆಲಸಗಾರರಿಗೆ ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕು ಎಂಬುದರ ಬಗೆಗೆ ತರಬೇತಿ ನೀಡಬೇಕು. ➚

ಈ ಮೂರು ಕ್ರಿಮಿನಲ್ ಕಾನೂನುಗಳನ್ನು ಅಮಾನತಿನಲ್ಲಿಡಿ

ಪ್ರಕಾಶ್ ಕಾರತ್

ಕಳೆದ ಲೋಕಸಭೆಯ ಅವಧಿಯ ಅಂತಿಮ ಕಾಲಘಟ್ಟದಲ್ಲಿ ತರಾತುರಿಯಿಂದ ಹಾಗೂ ಅಪ್ರಜಾಸತ್ತಾತ್ಮಕ ರೀತಿಯಲ್ಲಿ ಸರ್ಕಾರ ಅಂಗೀಕರಿಸಿದ ಮೂರು ಹೊಸ ಕಾನೂನುಗಳನ್ನು ದೇಶದಾದ್ಯಂತ ಜುಲೈ 1 ರಿಂದ ಜಾರಿಗೊಳಿಸುವುದನ್ನು ಬಿಜೆಪಿ ಖಾತರಿಪಡಿಸಿದೆ. ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ–ಇವೇ ಆ ಮೂರು ಹೊಸ ಕಾಯ್ದೆಗಳಾಗಿವೆ. ಅನುಕ್ರಮವಾಗಿ ಇಂಡಿಯನ್ ಪೀನಲ್ ಕೋಡ್ (ಐಪಿಸಿ), ಕ್ರಿಮಿನಲ್ ಪ್ರೊಸೀಜರ್ ಕೋಡ್ (ಸಿಆರ್‌ಪಿಸಿ) ಮತ್ತು ಇಂಡಿಯನ್ ಎವಿಡೆನ್ಸ್ ಆ್ಯಕ್ಟ್ ಬದಲಿಗೆ ಅವುಗಳನ್ನು ರೂಪಿಸಲಾಗಿದೆ.

ತಯಾರಿ, ಚರ್ಚೆ ಮತ್ತು ಸಮಾಲೋಚನೆಗಳಿಲ್ಲದೆ ಇಡೀ ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನು ಪ್ರಮುಖ ಬದಲಾವಣೆಗಳಿಗೆ ಒಳಪಡಿಸಲಾಗಿರುವುದು ಕಂಗೆಡಿಸುವ ವಿಚಾರ ಮಾತ್ರವಲ್ಲದೆ ತನ್ನ ಕಾರ್ಯನಿರ್ವಹಣೆ ಮತ್ತು ನೀತಿಗಳ ಬಗ್ಗೆ ಮತದಾರರು ತೀರ್ಪು ನೀಡಿ ಸಂಸತ್ತಿನಲ್ಲಿ ಬಹುಮತವನ್ನು ವಂಚಿಸಿದ ಮೇಲೆಯೂ ಬಿಜೆಪಿಗೆ ಯಾವ ಬದಲಾವಣೆಯೂ ಆಗಿಲ್ಲ ಎನ್ನುವುದನ್ನು ಇದು ತೋರಿಸುತ್ತದೆ.

ಹಿಂದಿ ಹೆಸರುಗಳನ್ನು ಮಾತ್ರ ನೀಡಲಾಗಿರುವ ಮತ್ತು ಹಿಂದಿಯಲ್ಲಿ ಮಾತ್ರವೇ ಪ್ರಕಟಿಸಲಾಗಿರುವ ಮೂರು ಕಾನೂನುಗಳನ್ನು ಲೋಕಸಭೆಯಲ್ಲಿ ಚರ್ಚಿಸಿಲ್ಲ. ಕೇವಲ ಕಾಟಾಚಾರದ ಅಧ್ಯಯನಕ್ಕಾಗಿ ಅವುಗಳನ್ನು ಆಯ್ಕೆ ಸಮಿತಿಗೆ ಕಳಿಸಲಾಗಿತ್ತು. ಹಾಗೂ ಸದನದಲ್ಲಿ ಮಂಡಿಸಿದ ನಿಮಿಷದೊಳಗೆ ಅಂಗೀಕರಿಸಲಾಗಿತ್ತು. ಆಗ, ಪ್ರತಿಪಕ್ಷಗಳ ಒಟ್ಟು 148 ಸದಸ್ಯರ ಪೈಕಿ ಬಹುತೇಕರನ್ನು ಅಮಾನತುಗೊಳಿಸಿದ್ದರಿಂದ ಅವರ ಹಾಜರಾತಿಯಿಂದಲೂ ಸದನ ವಂಚಿತವಾಗಿತ್ತು. ಹಾಗಾಗಿ ಅವರು ಕಲಾಪಗಳಲ್ಲಿ ಭಾಗವಹಿಸಲು ಆಗಿರಲಿಲ್ಲ.

ಕಾನೂನು ಕ್ಷೇತ್ರದವರು, ನ್ಯಾಯಾಂಗದ ಎಲ್ಲಾ ಮಟ್ಟದ ಸದಸ್ಯರು ಮತ್ತು ಪೊಲೀಸರಿಗೆ ಕೂಡ ಹೊಸ ಕಾನೂನುಗಳನ್ನು ಪರಿಚಯಿಸದಿರುವುದರಿಂದ ಅವುಗಳ ವ್ಯಾಖ್ಯಾನ ಮತ್ತು ಅನುಷ್ಠಾನದ ಬಗ್ಗೆ ಸಹಜವಾಗಿಯೇ ಭಾರಿ ಸಮಸ್ಯೆಗಳಾಗಲಿವೆ. ಈ ಕಾನೂನುಗಳ ಅನುಷ್ಠಾನದ ಜೊತೆಯಲ್ಲಿ ಕ್ರಿಮಿನಲ್ ನ್ಯಾಯದ ಪರ್ಯಾಯ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು ಈ ಸಮಸ್ಯೆ ಇನ್ನಷ್ಟು ಬಿಗಡಾಯಿಸುವುದು ಖಚಿತ. ಜುಲೈ 1ಕ್ಕೂ ಮುನ್ನ ಅಪರಾಧ ಎಸಗಿದ ವ್ಯಕ್ತಿಯನ್ನು ಆಗ ಜಾರಿಯಲ್ಲಿದ್ದ ಕ್ರಿಮಿನಲ್ ಕಾನೂನಿನ ಪ್ರಕಾರ ವಿಚಾರಣೆ ನಡೆಸಲಾಗುತ್ತದೆ. ಅದೇ ಅಪರಾಧವನ್ನು ಜುಲೈ 1ರ ನಂತರ ಎಸಗಿದರೆ ಹೊಸ ಕಾನೂನುಗಳನ್ವಯ ವಿಚಾರಣೆ ನಡೆಸಲಾಗುತ್ತದೆ.

ಒಂದು ಪರ್ಯಾಯ ನ್ಯಾಯ ವ್ಯವಸ್ಥೆ ರೂಪುಗೊಳ್ಳುತ್ತದೆ ಎನ್ನುವುದು ಇದರ ಅರ್ಥವಾಗಿದೆ. ಯಾವ ವ್ಯವಸ್ಥೆಯನ್ನು ಅನುಸರಿಸಬೇಕು ಎನ್ನುವ ಕುರಿತು ವಿವಾದ ಉಂಟಾಗುತ್ತದೆ. ಉದಾಹರಣೆಗೆ, ಜುಲೈ 1ರ ಮುನ್ನ ಎಫ್‌ಐಆರ್ ದಾಖಲಾದ ವ್ಯಕ್ತಿ ತನ್ನನ್ನು ಹಳೆಯ ಕಾನೂನಿನ ಪ್ರಕಾರವೇ ವಿಚಾರಣೆಗೆ ಒಳಪಡಿಸಬೇಕು ಎಂದು ಆಗ್ರಹಿಸುತ್ತಾನೆ/ಳೆ. ಅತ್ತ ಪ್ರಾಸಿಕ್ಯೂಷನ್‌ನವರು ಆತ/ಆಕೆಯನ್ನು ಹೊಸ ಕಾಯ್ದೆಗಳ ಪ್ರಕಾರ ವಿಚಾರಿಸಲು ಪ್ರಯತ್ನಿಸಬಹುದು. ಮೇಲ್ಮನವಿಗಳು (ಅಪೀಲು) ಕೂಡ ತುಂಬಾ ಸಂಕೀರ್ಣಗೊಳ್ಳುತ್ತವೆ.

ಕಾನೂನುಗಳನ್ನು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸುತ್ತವೆ. ಸಿಆರ್‌ಪಿಸಿಗೆ 1973ರಲ್ಲಿ ಮಾಡಲಾದ ತಿದ್ದುಪಡಿಗಳು ಈಗಷ್ಟೇ ಸ್ವಲ್ಪ ಖಚಿತತೆಯನ್ನು ಪಡೆದಿವೆ. ಈಗಿನ ಹೊಸ ಕಾನೂನುಗಳಿಗೆ ಆ ರೀತಿಯ ಖಚಿತತೆ ದೊರೆಯಬೇಕಾದರೆ ಇನ್ನೂ 50 ವರ್ಷ ಬೇಕಾಗುತ್ತದೆ. ದೇಶದ ಸಾವಿರಾರು ಮ್ಯಾಜಿಸ್ಟ್ರೇಟ್‌ಗಳು ಹೊಸ ಕಾನೂನುಗಳನ್ನು ವಿಭಿನ್ನ ರೀತಿಗಳಲ್ಲಿ ವ್ಯಾಖ್ಯಾನಿಸಿದರೆ ಏನಾಗಬಹುದು ಎನ್ನುವುದನ್ನು ಕಲ್ಪಿಸಿಕೊಳ್ಳ ಬಹುದು. ಖಂಡಿತವಾಗಿಯೂ ಅದು ಆರೋಪಿಗಳಿಗೆ ಅಪಾರ ಸಮಸ್ಯೆಗಳನ್ನು ಒಡ್ಡಬಹುದಾಗಿದೆ. ಯಾಕೆಂದರೆ ಆರೋಪಿಗಳು ಅನೇಕ ವ್ಯಾಖ್ಯಾನಗಳನ್ನು ಮತ್ತು ವಿಳಂಬಗಳನ್ನು ಎದುರಿಸಬೇಕಾಗುತ್ತದೆ. ಒಂದು ವೇಳೆ ಆರೋಪಿಯು ಕಸ್ಟಡಿಯಲ್ಲಿದ್ದರೆ ಆತನ/ಆಕೆಯ ಸಮಸ್ಯೆ ಮತ್ತು ಯಾತನೆ ಇನ್ನಷ್ಟು ಬಿಗಡಾಯಿಸಲಿದೆ.



ಸಾಂವಿಧಾನಿಕ ಖಾತರಿ

ಕಾನೂನಿನಿಂದ ಪ್ರತಿಷ್ಠಾಪಿತ ಪ್ರಕ್ರಿಯೆಗಳನ್ನು ಹೊರತುಪಡಿಸಿ ಯಾವುದೇ ಪ್ರಜೆಯು ಜೀವನ ಮತ್ತು ಸ್ವಾತಂತ್ರ್ಯದಿಂದ ವಂಚಿತರಾಗಬಾರದು ಎಂದು ಸಂವಿಧಾನದ 21ನೇ ಆರ್ಟಿಕಲ್ ಹೇಳುತ್ತದೆ. ಅಂಥದ್ದರಲ್ಲಿ ಕಾನೂನೇ ವಿವಾದಕ್ಕೆ ಒಳಪಟ್ಟಾಗ ಅದನ್ನು ಜಾರಿಗೆ ತರುವುದು ಕಷ್ಟವಾಗುತ್ತದೆ. ಈ ಹೊಸ ಕಾನೂನುಗಳು ಕಾನೂನು ಏನು ಹೇಳುತ್ತದೆ ಎನ್ನುವ ಬಗ್ಗೆ ಅನಿಶ್ಚಯತೆ ಮತ್ತು ಅಸ್ಪಷ್ಟತೆ ಎರಡನ್ನೂ ಉಂಟು ಮಾಡುತ್ತವೆ.

ಬಾಕಿ ಪ್ರಕರಣಗಳ ಏರಿಕೆ

ಹೊಸ ಕಾನೂನುಗಳ ಜಾರಿಯ ನಂತರ, ಬಾಕಿಯಿರುವ ಮೊಕದ್ದಮೆಗಳ ಪ್ರಮಾಣದಲ್ಲಿ ಶೇಕಡ 30ರಷ್ಟು ಏರಿಕೆಯಾಗಲಿದೆ ಎಂದು ಹಿರಿಯ ವಕೀಲರುಗಳು ಅಂದಾಜು ಮಾಡಿದ್ದಾರೆ. ಅದರಿಂದಾಗಿ ಸಾವಿರಾರು ಮಂದಿಗೆ ನ್ಯಾಯದ ನಿರಾಕರಣೆಯಾಗುತ್ತದೆ, ಅದರಲ್ಲೂ ವಿಶೇಷವಾಗಿ ಬಡವರಿಗೆ ಹೆಚ್ಚು ತೊಂದರೆಯಾಗುತ್ತದೆ. ಬಾಕಿಯಿರುವ ಕೇಸ್‌ಗಳ ಮೇಲೆ ಹೊಸ ಕಾನೂನಿನ ಪರಿಣಾಮ ಏನಾಗಬಹುದೆಂದು ಅಂದಾಜಿಸಲು ಸರ್ಕಾರ ಯಾವುದೇ ಪ್ರಯತ್ನ ಮಾಡಿಲ್ಲವೆಂದು ಕಾಣಿಸುತ್ತದೆ. ಬಹುಶಃ ಆ ಬಗ್ಗೆ ಸರ್ಕಾರ ತಲೆ ಕೆಡಿಸಿಕೊಳ್ಳುವುದಿಲ್ಲವೇನ್ನೊ.

ಅನುವಾದ ಮತ್ತು ಅನುಷ್ಠಾನದ ಈ ಸಮಸ್ಯೆಗಳನ್ನು ಅನಿವಾರ್ಯವಾದ ಅಡ್ಡಿಗಳು ಎಂದು ಹೇಳಬಹುದಾದರೂ ಹೊಸ ಕಾಯ್ದೆಗಳ ಕೆಲವು ಸೆಕ್ಷನ್‌ಗಳು ತುಂಬಾ ಕರಾಳವಾಗಿವೆ. ಇನ್ನು ಕೆಲವು ಸೆಕ್ಷನ್‌ಗಳು ನ್ಯಾಯವನ್ನು ಪಡೆಯುವ ಹಾದಿಯಲ್ಲಿ ಅಡ್ಡಿಯಾಗಲಿವೆ.

ಎಫ್‌ಐಆರ್ ನೊಂದಣಿ ಮೊದಲ ಹೆಜ್ಜೆ

ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸುವುದು ನ್ಯಾಯ ಪಡೆಯುವ ಪ್ರಕ್ರಿಯೆಯಲ್ಲಿ ಮೊದಲ ಹೆಜ್ಜೆಯಾಗಿರುತ್ತದೆ. ಹೊಸ ಕಾನೂನುಗಳ ಅಡಿಯಲ್ಲಿ, ಮೂರರಿಂದ ಏಳು ವರ್ಷದ ವರೆಗೆ ಜೈಲು ಶಿಕ್ಷೆಯಾಗಬಹುದಾದ ಅಪರಾಧಕ್ಕೆ ಸಂಬಂಧಿಸಿದ ಎಫ್‌ಐಆರ್ ನೊಂದಾಯಿಸುವುದನ್ನು 14 ದಿನದವರೆಗೆ ವಿಳಂಬಿಸಬಹುದು. ಈ ಅವಧಿಯಲ್ಲಿ ಸ್ಟೇಶನ್ ಹೌಸ್ ಆಫೀಸರ್ (ಎಸ್‌ಎಚ್‌ಒ) ಪ್ರಕರಣದ ಕುರಿತ ನಾನಾ ಆಯಾಮಗಳನ್ನು ಅಧ್ಯಯನ ನಡೆಸಿ ತೀರ್ಮಾನಕ್ಕೆ ಬರುತ್ತಾರೆ. ಇದು, ಪೊಲೀಸರು ತಕ್ಷಣವೇ ಎಫ್‌ಐಆರ್ ದಾಖಲಿಸಿಕೊಳ್ಳಬೇಕೆಂಬ ಸುಪ್ರೀಂ ಕೋರ್ಟ್ ನಿರ್ದೇಶನದ ಸ್ಪಷ್ಟ ಉಲ್ಲಂಘನೆಯಾಗಿದೆ. ವಿಳಂಬ ದಾಖಲಾತಿಗೆ ಎಸ್‌ಎಚ್‌ಒಗೆ ಅಧಿಕಾರ ನೀಡಿರುವುದರಿಂದ ಸಂತ್ರಸ್ತರಿಗೆ ಕಿರುಕುಳ ನೀಡಲು ಅಥವಾ ಆತ/ಆಕೆ ದೂರನ್ನು ವಾಪಸ್ ಪಡೆಯುವಂತೆ ಒತ್ತಡ ಹೇರಲು ಅವಕಾಶ ಮಾಡಿದಂತಾಗುತ್ತದೆ. ಅದು ಪೊಲೀಸರ ಭ್ರಷ್ಟಾಚಾರಕ್ಕೆ ದಾರಿಯಾಗುತ್ತದೆ ಮತ್ತು ಆರೋಪಿಯು ತನ್ನನ್ನು ರಕ್ಷಿಸಿಕೊಳ್ಳಲು ನಾನಾ ಮಾರ್ಗಗಳನ್ನು ಬಳಸಲು ಅದು ಅವಕಾಶ ಕಲ್ಪಿಸುತ್ತದೆ. ಹೊಸ ಕಾನೂನಿನಲ್ಲಿ ಪರಿಚಯಿಸಲಾದ ಈ ಅಂಶವು ಬಡವರು ಮತ್ತು ದುರ್ಬಲ ವರ್ಗದವರು ನ್ಯಾಯವನ್ನು ಪಡೆಯುವ ಹಕ್ಕಿಗೆ ಅಡ್ಡಿಯಾಗುತ್ತದೆ. ವಾಸ್ತವವಾಗಿ ಅವರು ಈ ಹಕ್ಕನ್ನು ಪಡೆಯುವಲ್ಲಿ ಈಗಾಗಲೇ ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾಗಿದ್ದಾರೆ. ಹಿಂದಿನ ಕಾಯ್ದೆಯಲ್ಲಿದ್ದ 15 ದಿನಗಳ ಮಿತಿಯ ಆಚೆಗೂ ರಿಮಾಂಡ್ ಕೋರಲು, 'ಪುನರಾವರ್ತಿತ ಅಪರಾಧಿಗಳಿಗೆ' (ಇದೊಂದು ಹೊಸ ವಿಭಾಗ) ಕೈಕೋಳ ತೊಡಿಸಲು ಪೊಲೀಸರಿಗೆ ಹೊಸ ಕಾನೂನುಗಳು ಅವಕಾಶ ನೀಡುತ್ತವೆ. ಆದ್ದರಿಂದ ದುರ್ಬಲ, ಬಡ ಮತ್ತು ಶೋಷಿತ ವಿಭಾಗಗಳಿಗೆ ನ್ಯಾಯವನ್ನು ನಿರಾಕರಿಸಲು ಅವರ ಅಧಿಕಾರವನ್ನು ಹೆಚ್ಚಿಸುತ್ತದೆ. ಸರಕಾರದ ಹಿತಗಳಿಗೆ ವಿರುದ್ಧವಾಗಿದ್ದಾರೆ ಎಂದು ಭಾವಿಸಲಾದ ವ್ಯಕ್ತಿಗಳ ವಿಚಾರದಲ್ಲೂ ಹೀಗೆ ಆಗುವ ಅಪಾಯವಿದೆ.

ದೇಶದ್ರೋಹದ ನಿಯಮ

ದೇಶದ್ರೋಹವನ್ನು ವ್ಯಾಖ್ಯಾನಿಸಿದ ಹಿಂದಿನ ಐಪಿಸಿಯ 124ಎ ಸೆಕ್ಷನ್ ಅನ್ನು ಸುಪ್ರೀಂ ಕೋರ್ಟ್ ಈ ಹಿಂದೆ ರದ್ದುಪಡಿಸಿದೆಯಾದರೂ ಭಾರತೀಯ ನ್ಯಾಯ ಸಂಹಿತೆಯ 152ನೇ ಸೆಕ್ಷನ್‌ನಲ್ಲಿ ಅದು ಮರು–ಪ್ರತ್ಯಕ್ಷವಾಗಿರುವುದು ಹೊಸ ಕಾನೂನುಗಳ ಇನ್ನೊಂದು ಅಪಾಯಕಾರಿ ಅಂಶವಾಗಿದೆ. ಮೂಲ 124ಎ ಸೆಕ್ಷನ್‌ನಲ್ಲಿ ಇರದೇ ಇದ್ದ ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಸಂಬಂಧಿಸಿದ ಉಲ್ಲೇಖಗಳನ್ನು ಕೂಡ ಅದರ ಜತೆಯಲ್ಲಿ ಸೇರಿಸಲಾಗಿದೆ. ಹಿಂದಿನ ಕಾನೂನಿನಲ್ಲಿ ಇರದಿದ್ದ 'ರಾಷ್ಟ್ರ–ವಿರೋಧಿ' ಅಪರಾಧವನ್ನು ಕೂಡ ಅದು ಪರಿಚಯಿಸುತ್ತದೆ ಎಂದು ಹಿರಿಯ ವಕೀಲರು ಹೇಳಿದ್ದಾರೆ. ಇದು ಸಹಜವಾಗಿಯೇ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಭಿನ್ನಮತದ ಹಕ್ಕಿನ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಈ ಹೊಸ ಕಾನೂನುಗಳನ್ನು ಅಂಗೀಕರಿಸುವುದಕ್ಕೂ ಮುಂಚಿನ ಈ ಸರಕಾರದ ದಾಖಲೆಗಳನ್ನು ನೋಡಿದರೆ ಭಿನ್ನಮತೀಯರನ್ನು ನಡೆಸಿಕೊಳ್ಳುವಲ್ಲಿ ಅದು ಎಷ್ಟು ಕಾಠಿಣ್ಯ ಹಾಗೂ ಅನ್ಯಾಯದಿಂದ ಕೂಡಿದೆ ಎನ್ನುವುದು ಗೊತ್ತಾಗುತ್ತದೆ. ಹೊಸ ಕಾನೂನುಗಳು ಆ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲಿದೆ.

ಯುಎಪಿಎ ಕಾನೂನಿನಡಿ ಬರುವ ಅನೇಕ ಅಪರಾಧಗಳನ್ನು ಕೂಡ ಹೊಸ ಕ್ರಿಮಿನಲ್ ಕಾನೂನಿನ ವ್ಯಾಪ್ತಿಗೆ ತರಲಾಗಿದೆ. ಆರೋಪಿಯೊಬ್ಬರು ಎರಡು ಚಾರ್ಜ್‌ಶೀಟ್‌ಗಳನ್ನು ಮತ್ತು ಇಬ್ಬರು ತನಿಖಾ ಅಧಿಕಾರಿಗಳನ್ನು ಎದುರಿಸಬೇಕಾಗಬಹುದು; ಅಂದರೆ ಯುಎಪಿಎ ಅಡಿಯಲ್ಲಿ ಎನ್‌ಐಎ ಮತ್ತು ಹೊಸ ಕ್ರಿಮಿನಲ್ ಕಾನೂನಿನಡಿಯಲ್ಲಿ ಪೊಲೀಸರು. ಒಂದೇ ಶಿಕ್ಷೆಯನ್ನು ಕೊಡಬಹುದಾದರೂ ಆ ಪ್ರಕ್ರಿಯೆಯು ತುಂಬಾ ವೇದನಾಮಯವಾಗಿರಲಿದೆ. ಯುಎಪಿಎ ಅಡಿಯಲ್ಲಿ ತನಿಖಾಧಿಕಾರಿಯು (LM) ಪೊಲೀಸ್ ಠಾಣೆಯ ಸ್ಥಳೀಯ ಐಜಿಗಿಂತ ಮೇಲಿನ ದರ್ಜೆಯವರಾಗಿರುತ್ತಾರೆ. ಆದರೆ ಹೊಸ ಕಾನೂನಿನನ್ವಯ ಯಾವುದೇ ಸಾಮಾನ್ಯ ಪೊಲೀಸ್ ಸ್ಟೇಶನ್ ಕೂಡ ಭಯೋತ್ಪಾದನೆ ಪ್ರಕರಣದ ತನಿಖೆ ನಡೆಸುವ ಹಕ್ಕು ಹೊಂದಿರುತ್ತದೆ.

ಯುಎಪಿಎ ಅಡಿಯಲ್ಲಿ ಶಿಕ್ಷಿಸಲು ಸರಕಾರವು ಅನುಮೋದನೆ ನೀಡಬೇಕಾಗುತ್ತದೆ. ಆದರೆ ಹೊಸ ಕಾಯ್ದೆ ಪ್ರಕಾರ ಯಾವುದೇ ಸಾಮಾನ್ಯ ಪೊಲೀಸ್ ಅಧಿಕಾರಿ ಕೂಡ ಯಾರನ್ನೇ ಆದರೂ ಭಯೋತ್ಪಾದನೆಗಾಗಿ ಪ್ರಾಸಿಕ್ಯೂಟ್ ಮಾಡಬಹುದಾಗಿದೆ.

ಈ ಹೊಸ ಕಾನೂನುಗಳನ್ನು ದೃಢವಾಗಿ ವಿರೋಧಿಸಬೇಕಿದೆ. ದೇಶದಾದ್ಯಂತದ ವಕೀಲರ ಸಂಘಗಳು ಪ್ರತಿಭಟನೆ ಮತ್ತು ಕೋರ್ಟ್ ಬಹಿಷ್ಕಾರವನ್ನು ಯೋಜಿಸುತ್ತಿವೆ. ಸುಪ್ರೀಂ ಕೋರ್ಟ್‌ಗೆ ಮಾಡಿದ ಮನವಿಗೆ ಸಾವಿರಾರು ಜನರು ಸಹಿ ಹಾಕಿದ್ದಾರೆ. ಈ ಕಾನೂನುಗಳ ಕುರಿತ ಮಾಹಿತಿ ಹೆಚ್ಚಾಗಿ ಪ್ರಚಾರಕ್ಕೆ ಬರುತ್ತಿದ್ದಂತೆ ಪ್ರತಿಭಟನೆ ಮತ್ತು ಹೋರಾಟಗಳೂ ಹೆಚ್ಚಲಿವೆ.

ಹೊಸದಾಗಿ ಪರಿಶೀಲನೆ ನಡೆಸುವ ವರೆಗೆ ಈ ಮೂರು ಕಾನೂನುಗಳನ್ನು ಅಮಾನತಿನಲ್ಲಿಡುವಂತೆ ಎನ್‌ಡಿಎ ಸರಕಾರದ ಮೇಲೆ ಸಾರ್ವಜನಿಕ ಅಭಿಪ್ರಾಯ ಮೂಡಿಸಬೇಕು. ಈ ಕಾನೂನುಗಳು ಭಾರತದ ಎಲ್ಲ ನಾಗರಿಕರ ಜೀವನ ಮತ್ತು ಸ್ವಾತಂತ್ರ್ಯಕ್ಕೆ ಅಪಾಯವೊಡ್ಡುತ್ತವೆ; ಹೀಗಾಗಿ ಅವುಗಳನ್ನು ಈಗಿನ ಸ್ವರೂಪದಲ್ಲಿ ಯಾವ ಕಾರಣಕ್ಕೂ ಒಪ್ಪಲಾಗದು.

ಅನು: ವಿಶ್ವ

ಹಿರಿಯ ಅಧಿಕಾರಿಗಳೂ ಇಂತಹ ಸಂದರ್ಭಗಳಲ್ಲಿ ಕೆಲಸ ಮಾಡುವಂತಿರಬೇಕು. ಈ ದಿನಗಳ ಅಪಘಾತಗಳು ಈ ಪಾಠವನ್ನು ಕಲಿಸಿವೆ.

ಅಪಘಾತಗಳ ಸರಣಿ ಎಲ್ಲೋ ವ್ಯವಸ್ಥೆಯ ವೈಫಲ್ಯದತ್ತ ಬೊಟ್ಟು ಮಾಡಿ ತೋರಿಸುತ್ತದೆ. ಮೋದಿ ಸರ್ಕಾರದ ಅಲಂಕಾರಿಕ ಕ್ರಮಗಳಾದ ವಂದೇ ಭಾರತ್ ರೈಲು, ಹಳಿಗಳ ಮೇಲಿನ ಒತ್ತಡವನ್ನು ಗಮನಿಸುವ/ ಪರಿಹರಿಸುವ ಬದಲು ಸಾರ್ವಜನಿಕ ಅಭಿಪ್ರಾಯಗಳನ್ನು ತಪ್ಪಾಗಿ ರೂಪಿಸುವ ಪ್ರಯತ್ನಗಳಾಗಿವೆ. ಇಂತಹ ಧೋರಣೆಯ ಪರಿಣಾಮವಾಗಿ ರೈಲು ಸುರಕ್ಷೆ ಅಪಾಯದಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.

ಅಂತಿಮವಾಗಿ ಹೇಳುವುದಾದರೆ ಈ ಜನತೆಯ ಆಯೋಗ ಕೇಂದ್ರ ಸರ್ಕಾರಕ್ಕೆ ಈ ಕೆಳಗಿನ ಕರೆ ನೀಡುತ್ತದೆ:

❖ ಸಿಗ್ನಲ್ ವ್ಯವಸ್ಥೆಯನ್ನು ಆಧುನಿಕೀಕರಣಗೊಳಿಸಿ ಅದಕ್ಕೆ ಅವಶ್ಯವಿರುವ ಹಣಕಾಸನ್ನು ಒದಗಿಸಿ.
❖ ಹೊಸ ಉಪಕರಣ ಬಳಕೆಯಲ್ಲಿ ನೌಕರರು ತರಬೇತಿ ಪಡೆಯುವುದು ಅನಿವಾರ್ಯ ಮಾಡಿ.
❖ ರೈಲು ಚಾಲಕರಿಗೆ ವಾರದ ವಿಶ್ರಾಂತಿ ದೊರೆಯುವಂತೆ ನೋಡಿಕೊಳ್ಳಿ.
❖ ಚಾಲಕರು ವಾರಕ್ಕೆ 48 ಗಂಟೆಗಳ ಕರ್ತವ್ಯ ಮಾಡುವಂತೆ ನೋಡಿಕೊಳ್ಳಿ–ದಿನಕ್ಕೆ 8 ಗಂಟೆಗಳ ಕರ್ತವ್ಯ.
❖ ಚಾಲಕರಿಗೆ ವಾರದ ವಿಶ್ರಾಂತಿ ದೊರೆಯುವಂತೆ ನೋಡಿಕೊಳ್ಳಿ,
❖ ಚಾಲಕರು ಎರಡು ಸತತ ರಾತ್ರಿಗಳಿಗಿಂತ ಹೆಚ್ಚಿಗೆ ಕೆಲಸ ಮಾಡದಂತೆ ನೋಡಿಕೊಳ್ಳಿ.
❖ ಕವಚ್ ಯೋಜನೆ ಅನುಷ್ಠಾನಗೊಳಿಸಲು ಮುಂದಿನ ಮೂರು ವರ್ಷಗಳಲ್ಲಿ ಅವಶ್ಯ ಹಣಕಾಸು ಸಿಗುವಂತೆ ನೋಡಿಕೊಳ್ಳಿ.

ನೀಟ್ (NEET) ಮತ್ತು ನೆಟ್ (NET) ಪರೀಕ್ಷೆಗಳ ಕುರಿತು ಕುರಿತಂತೆ ಸಿಪಿಎಂ(ಎಂ) ಸಂಸದರು ಶಿಕ್ಷಣ ಸಚಿವರಿಗೆ ಬರೆದ ಪತ್ರ

**ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸಂಸದರಾದ ಜಾನ್ ಬ್ರಿಟ್ಟಾಸ್ ಅವರು ಭಾರತ ಸರ್ಕಾರದ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರಿಗೆ ಜೂನ್ 21, 2024 ರಂದು ಪತ್ರ ಬರೆದಿದ್ದಾರೆ. ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ಮತ್ತು ವಿಶ್ವವಿದ್ಯಾಲಯದ ಅನುದಾನಗಳ ಸುತ್ತ ಎದ್ದಿರುವ ಸಂಭಾವ್ಯ ಸಂಶಯಾಸ್ಪದ ಬೆಳವಣಿಗೆಗಳ ಕುರಿತಂತೆ ತಮ್ಮ ಮತ್ತು ಪಕ್ಷದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಪತ್ರದಲ್ಲಿ ವಿಶ್ವವಿದ್ಯಾಲಯದ ಹಣಕಾಸು ಅನುದಾನ ಆಯೋಗದ ರಾಷ್ಟ್ರೀಯ ಅರ್ಹತಾ ಪರೀಕ್ಷೆ (UGC, NET). ಎರಡೂ ಪರೀಕ್ಷೆಗಳು ಒಕ್ಕೂಟ ರಚನೆ ಮತ್ತು ರಾಜ್ಯ ಶಿಕ್ಷಣ ಸಂಸ್ಥೆಗಳ ಸ್ವಾಯತ್ತತೆಯ ಮೇಲೆ, ಅವುಗಳ ಪ್ರಭಾವದಿಂದಾಗಿ ಗಮನಾರ್ಹ ಟೀಕೆಗಳನ್ನು ಹುಟ್ಟುಹಾಕಿವೆ ಎಂದು ತಿಳಿಸಿದ್ದಾರೆ.
ಆ ಪತ್ರದ ಪೂರ್ಣ ಟಿಪ್ಪಣಿಯನ್ನು ನಮ್ಮ ಜನಶಕ್ತಿಯ ಓದುಗರಿಗಾಗಿ ಕನ್ನಡದಲ್ಲಿ ಪ್ರಕಟಿಸಿದ್ದೇವೆ.**

ಕಳೆದ ದಶಕದಲ್ಲಿ NEET ನ ಪರಿಚಯವಾಯಿತು. ಇದು ಮೇಲ್ನೋಟಕ್ಕೆ ರಾಷ್ಟ್ರವ್ಯಾಪಿ ವೈದ್ಯಕೀಯ ಪ್ರವೇಶ ಪರೀಕ್ಷೆಗಳನ್ನು ಪ್ರಮಾಣೀಕರಿಸುವ ಗುರಿಯನ್ನು ಹೊಂದಿದೆ. ಆದರೆ, ಇದು ಒಕ್ಕೂಟ ರಚನೆಯ ಸವೆತ ಮತ್ತು ರಾಜ್ಯಗಳ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ದುರ್ಬಲಗೊಳಿಸುವ ಒಂದು ಉತ್ತಮ ಉದಾಹರಣೆಯಾಗಿದೆ. ಇದರೊಂದಿಗೆ ಶಿಕ್ಷಣವು ಈಗ ಸಮವರ್ತಿ(ಜಂಟಿ) ಪಟ್ಟಿಯಲ್ಲಿ ಇರುವುದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸ್ವಾಯತ್ತತೆ ಮತ್ತು ಅಧಿಕಾರಗಳ ನಡುವೆ ಸಾಮರಸ್ಯದ ಸಮತೋಲನವು ಕಡ್ಡಾಯವಾಗಿ ಇರಬೇಕಾಗಿದೆ. ಆದರೆ ನೀಟ್ ಈ ಸಮತೋಲನವನ್ನು ಅಡ್ಡಿಪಡಿಸುತ್ತದೆ. ನಿರ್ದಿಷ್ಟ ಸಾಮಾಜಿಕ-ಶೈಕ್ಷಣಿಕ ಸಂದರ್ಭಗಳಿಗೆ ಅನುಗುಣವಾಗಿ ಪ್ರವೇಶ ಪರೀಕ್ಷೆಗಳನ್ನು ನಡೆಸಲು ರಾಜ್ಯಗಳ ಹಕ್ಕು ಅಧಿಕಾರವನ್ನು ಕಸಿದುಕೊಳ್ಳುತ್ತದೆ. ವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವ ರಾಜ್ಯಗಳ ಹಕ್ಕುಗಳ ಉಲ್ಲಂಘನೆ, CBSE ಪಠ್ಯಕ್ರಮದೊಂದಿಗೆ ಅದರ ಹೊಂದಾಣಿಕೆ, ದುಬಾರಿ ಹೆಚ್ಚುವರಿ ತರಬೇತಿಯ ಅವಶ್ಯಕತೆ ಇತ್ಯಾದಿಗಳಿಂದ ನೀಟ್ ವಿರುದ್ಧ ದೇಶದಾದ್ಯಂತ ವ್ಯಾಪಕವಾದ ವಿರೋಧ ಭಾವನೆ ವ್ಯಕ್ತವಾಗಿದೆ. ಇದನ್ನು ಮೊದಲು ಸರಿಪಡಿಸಬೇಕು.

ಏಕೆಂದರೆ, ವಿವಿಧ ರಾಜ್ಯಗಳ ವಿದ್ಯಾರ್ಥಿಗಳ ವೈವಿಧ್ಯಮಯ ಶೈಕ್ಷಣಿಕ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ ಎಂಬುದು ನೀಟ್ ನ ಪರೀಕ್ಷೆಗಳು ಗಮನಾರ್ಹ ಟೀಕೆಗೆ ಗುರಿಯಾಗಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಇದು ಏಕರೂಪದ ಪಠ್ಯಕ್ರಮವಾದ CBSE ಪಠ್ಯಕ್ರಮದೊಂದಿಗೆ ಹೆಚ್ಚು ಹೊಂದಿಕೆ ಮಾಡಿಕೊಂಡು, ಅಧಿಕ ಶುಲ್ಕದ ರಚನೆಯನ್ನು ನೀಟ್ ಅಳವಡಿಸಿಕೊಂಡಿದೆ.

ಇದರಿಂದಾಗಿ, ರಾಜ್ಯ ಶಿಕ್ಷಣ ಮಂಡಳಿಯ ವಿದ್ಯಾರ್ಥಿಗಳು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಅನಾನುಕೂಲಕರವಾಗಿದೆ. ಇದು ಸಮಾನ ಅವಕಾಶದ ತತ್ವವನ್ನು ದುರ್ಬಲಗೊಳಿಸುತ್ತದೆ.

NEET ಶ್ರೀಮಂತ ಮತ್ತು ನಗರ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕೋಚಿಂಗ್ ಸಂಸ್ಕೃತಿಯನ್ನು ಪೋಷಿಸುತ್ತದೆ ಎಂಬ ಟೀಕೆಗೆ ಒಳಗಾಗಿದೆ. ಇದು ಬಹು ದೊಡ್ಡ ಸಂಖ್ಯೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಬಡವರು ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲಗಳನ್ನು ಉಂಟುಮಾಡಿದೆ.

ಇದರಿಂದಾಗಿ ಸಂವಿಧಾನ ಬದ್ಧತೆಯ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಬಗ್ಗೆ ಹೆಚ್ಚು ಕಳವಳವನ್ನು ಉಂಟುಮಾಡುತ್ತದೆ. ಮೇಲಿನ ಸ್ಥಾನಗಳಿಸಿದ ನೀಟ್ ವಿದ್ಯಾರ್ಥಿಗಳು ಸಾಮಾನ್ಯವಾಗಿ ದುಬಾರಿ ತರಬೇತಿಯ ಮೂಲಕ ವಿಶೇಷ ನಗರ ಹಿನ್ನೆಲೆಯಿಂದ ಬರುತ್ತಾರೆ. ಇಂತಹ ವಿದ್ಯಾರ್ಥಿಗಳು ಅಸಮಾನತೆಯನ್ನು ಶಾಶ್ವತಗೊಳಿಸುತ್ತಾರೆ ಎಂದು ವರದಿಗಳು ಸೂಚಿಸುತ್ತವೆ.

ಇದಲ್ಲದೆ, NTA ಯಿಂದ ನಡೆಯುವ ಈ ಕೇಂದ್ರೀಕೃತ ಪರೀಕ್ಷಾ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ಭದ್ರತೆಯನ್ನು ಪದೇ ಪದೇ ಪ್ರಶ್ನಿಸಲಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅನಿಯಂತ್ರಿತ ಕೃಪಾಂಕ-(ಗ್ರೇಸ್ ಮಾರ್ಕ್)ಗಳನ್ನು ಒಳಗೊಂಡ ಹಗರಣಗಳಿಂದಾಗಿ ನೀಟ್ ನ ಸಮಗ್ರತೆಯನ್ನು ರಾಜಿ ಮಾಡಿಕೊಂಡಂತೆ ಈ ವಿವಾದದಲ್ಲಿ ಕಂಡು ಬಂದಿದೆ.

NEET UG – 2024 ರಲ್ಲಿನ ಅಕ್ರಮಗಳನ್ನು ನಿಮ್ಮದೇ ಸ್ವಂತ ವ್ಯಕ್ತಿಯಾದ ಶಿಕ್ಷಣ ಸಚಿವರು ಕೂಡ ಇತ್ತೀಚೆಗೆ ಒಪ್ಪಿಕೊಂಡಿದ್ದಾರೆ ಹಾಗೂ ಸುಧಾರಣೆಗಳ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಈ ಸಮಸ್ಯೆಗಳು ಕೇಂದ್ರೀಕೃತ ಪರೀಕ್ಷಾ ಪ್ರಕ್ರಿಯೆಯ ಬಗ್ಗೆ ಕಳವಳವನ್ನು ಉಂಟು ಮಾಡುತ್ತವೆ. ಸುಪ್ರೀಂ ಕೋರ್ಟ್ ಪದೇ ಪದೇ ಪರೀಕ್ಷೆಗಳ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಒತ್ತಿ ಹೇಳುತ್ತಾ ಬಂದಿದೆ.

ನೀಟ್ ನಂತೆಯೇ, UGC NET ಪರೀಕ್ಷೆಯು ಗಮನಾರ್ಹ ಸವಾಲುಗಳು ಮತ್ತು ಟೀಕೆಗಳನ್ನು ಎದುರಿಸುತ್ತಿರುವುದನ್ನು ಕಂಡಿದ್ದೇವೆ. ನೀಟ್ ಬಗ್ಗೆ ಎತ್ತಿರುವ ಹೆಚ್ಚಿನ ಕಳವಳಗಳನ್ನು NET ಕೂಡ ಪ್ರತಿಧ್ವನಿಸುತ್ತದೆ.

ಇದರ ಜೊತೆಗೆ, ಹೆಚ್ಚುವರಿಯಾಗಿ ತಿಳಿದುಕೊಳ್ಳಬೇಕಾಗಿರುವುದು ಏನೆಂದರೆ, 2024-25 ರಿಂದ ಪಿಎಚ್‌ಡಿ ಪ್ರವೇಶಕ್ಕಾಗಿ ನೆಟ್ ಅಂಕಗಳ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ. ಯುಜಿಸಿ (ವಿಶ್ವವಿದ್ಯಾಲಯ ಅನುದಾನಿತ ಆಯೋಗ) ಯಿಂದ ಇತ್ತೀಚಿನ ನಿರ್ದೇಶನದ (ಸಾರ್ವಜನಿಕ ಸೂಚನೆ ಸಂಖ್ಯೆ. ಎಫ್. 4-1 (UGC-NET ಪರಿಶೀಲನಾ ಸಮಿತಿ)/2024(NET)/140648 ದಿನಾಂಕ 27.03.2024) ಈ ವಾರ್ಷಿಕ ಶೈಕ್ಷಣಿಕ ಸಾಲಿನ ನಂತರ, ವಿವಿಧ ಕೇಂದ್ರ/ರಾಜ್ಯ/ಖಾಸಗಿ/ಡೀಮ್ಡ್ ವಿಶ್ವವಿದ್ಯಾನಿಲಯಗಳು/ಉನ್ನತ ಶಿಕ್ಷಣ ಸಂಸ್ಥೆಗಳು ನಡೆಸುವ ಪ್ರವೇಶ ಪರೀಕ್ಷೆಗಳನ್ನು ಬದಲಾಯಿಸಲಾಗಿದೆ. ಇದರಿಂದಾಗಿ ರಾಜ್ಯ ವಿಶ್ವವಿದ್ಯಾಲಯಗಳು ಸೇರಿದಂತೆ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ಉಲ್ಲಂಘನೆಯನ್ನು ಮಾಡಲಾಗಿದೆ. ಈ ಕ್ರಮವು ಸ್ವತಃ ಯುಜಿಸಿಯ 2022 ರ ನಿಯಮಾವಳಿಗಳಿಗೆ ವಿರುದ್ಧವಾಗಿದೆ ಮತ್ತು ಪ್ರವೇಶ ಪ್ರಕ್ರಿಯೆಯನ್ನು ರೂಪಿಸುವಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಶೈಕ್ಷಣಿಕ ಮಂಡಳಿಗಳ ಪಾತ್ರವನ್ನು ಕಡೆಗಣಿಸುತ್ತದೆ. ಈ ಬೆಳವಣಿಗೆ ವಿದ್ಯಾರ್ಥಿಗಳಲ್ಲೂ ಆತಂಕ ಮೂಡಿಸಿದೆ. NET ನ ಅಂಕಗಳಿಂದ ಸಿಂಧುತ್ವವು ಕೇವಲ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿತ್ತು. ವಿದ್ಯಾರ್ಥಿಗಳು ಪಿಎಚ್‌ಡಿ ಪ್ರವೇಶಕ್ಕಾಗಿ ವಾರ್ಷಿಕವಾಗಿ ಪುನಃ, ಅವರ ಮೇಲೆ ಆರ್ಥಿಕ ಹೊರೆ ಹೇರಲಾಗುತ್ತದೆ. ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್) ವಿದ್ಯಾರ್ಥಿಗಳು ತಮ್ಮ ಅಂಕಗಳ ಆಧಾರದ ಮೇಲೆ ಪಿಎಚ್‌ಡಿ ಪ್ರವೇಶಕ್ಕೆ ಜೀವಮಾನದ ಅರ್ಹತೆಯನ್ನು ಹೊಂದಿದ್ದರೂ, ಜೆಆರ್‌ಎಫ್ ವರ್ಗದ ವಿದ್ಯಾರ್ಥಿಗಳು ಸಂದರ್ಶನದಲ್ಲಿ ಶೇಕಡಾ 100 ರಷ್ಟು ಗಳಿಸಬೇಕು. ಆದರೆ ಎನ್‌ಇಟಿ ಅರ್ಹ ವಿದ್ಯಾರ್ಥಿಗಳು ಕೇವಲ ಶೇ.30 ರಷ್ಟು ಸಂದರ್ಶನದಲ್ಲಿ ಶೇಕಡಾ ವೇಟೇಜ್ ಪರಿಗಣಿಸಲಾಗುವುದು. ಉಳಿದ 70 ಶೇಕಡಾ NET ಅಂಕಗಳ ಆಧಾರದ ಮೇಲೆ ಅವಲಂಬಿಸಿರುತ್ತದೆ.

ಇದಲ್ಲದೆ, ಪ್ರಾಥಮಿಕವಾಗಿ ವಾಸ್ತವಿಕ ಮತ್ತು ನೆನಪು ಅಥವಾ ಸ್ಮೃತಿ-ಆಧಾರಿತವಾದ NET ನಲ್ಲಿನ MCQ ಗಳ ಮೇಲಿನ ಅವಲಂಬನೆಯು ಪಿಎಚ್‌ಡಿ ಕಾರ್ಯಕ್ರಮಗಳಿಗೆ ಅಗತ್ಯವಾದ ಸಂಶೋಧನಾ ಯೋಗ್ಯತೆ ಅಥವಾ ವಿಶ್ಲೇಷಣಾತ್ಮಕ ಚಿಂತನೆಯನ್ನು ಮೌಲ್ಯಮಾಪನ ಮಾಡುವುದಿಲ್ಲ ಮತ್ತು ನೀಟ್ ನಂತೆ ಇದು ಕೋಚಿಂಗ್ ಕೇಂದ್ರಗಳಿಗೆ ಹೆಚ್ಚು ಉತ್ತೇಜಿಸಲಾಗುತ್ತದೆ.

NET ಯ ಕೇಂದ್ರೀಕೃತ ಆಡಳಿತವು ಪ್ರಶ್ನೆ ಪತ್ರಿಕೆ ಸೋರಿಕೆಯ ಆರೋಪಗಳಿಂದ ಹಾನಿಗೊಳಗಾಗಿದೆ.

ರಾಷ್ಟ್ರೀಯ ಸೈಬರ್ ಕ್ರೈಮ್ ಥ್ರೆಟ್ ಅನಾಲಿಟಿಕ್ಸ್ ಯೂನಿಟ್ ನ ಇನ್ಪುಟ್ ಗಳಿಂದಾಗಿ UGC/NET ಜೂನ್ 2024 ಪರೀಕ್ಷೆಯನ್ನು ರದ್ದುಗೊಳಿಸುವ ಸರ್ಕಾರದ ಇತ್ತೀಚಿನ ನಿರ್ಧಾರದಿಂದ ಇದು ಸ್ಪಷ್ಟಗೊಂಡಿದೆ. ಇದು ಸಾಂಸ್ಥಿಕ ಸಮಗ್ರತೆಯ ಬಗ್ಗೆ ಅನುಮಾನಗಳನ್ನು ಹೆಚ್ಚಿಸುತ್ತದೆ. NTA ನ ಹೆಚ್ಚುವರಿಯಾಗಿ, ಈ ಪರೀಕ್ಷೆಗಳ ಕೇಸರಿಕರಣದ ಪ್ರಶ್ನೆಗಳು ಒಳಗೊಂಡಿವೆ. ಒಂದು ನಿರ್ದಿಷ್ಟ ಸಾಂಸ್ಕೃತಿಕ ಮತ್ತು ಐತಿಹಾಸಿಕ ನಿರೂಪಣೆಗಳ ಕಡೆಗೆ ಪಕ್ಷಪಾತವನ್ನು ಪ್ರಶ್ನೆಗಳು ಪ್ರತಿಬಿಂಬಿಸುತ್ತವೆ. ಉದಾಹರಣೆಗೆ, ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಇತ್ತೀಚಿನ NET ಪ್ರಶ್ನೆಗಳು ಅಯೋಧ್ಯೆಯ ರಾಮಮಂದಿರದ ಪ್ರಾಣ-ಪ್ರತಿಷ್ಠೆಯ ದಿನಾಂಕ, ಹಿಂದೂ ತತ್ವಶಾಸ್ತ್ರದ "ಪ್ರಸ್ಥಾನ ತ್ರಾಯಿ" ಸಂಯೋಜನೆ, ರಾಮ ಚರಿತ್ರೆ, ಮಾನಸ್ ನಲ್ಲಿ ಹನುಮಂತನ ನೋಟ, ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿರುವುದು, ಶಿರಚ್ಛೇದನಕ್ಕೆ ಒಳಗಾದರೂ ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧವನ್ನು ವೀಕ್ಷಿಸಲು ಜೀವಂತವಾಗಿ ಉಳಿದಿರುವ ಯೋಧ, ಇತ್ಯಾದಿ ಪ್ರಶ್ನೆಗಳನ್ನು ಸೇರಿಸಿ ಉನ್ನತ ಶಿಕ್ಷಣದಲ್ಲಿ ಕೇಸರೀಕರಣದ ಛಾಯೆ ತರಲಾಗಿದೆ. ಈ ಸಮಯದಲ್ಲಿ, ನಮ್ಮ ಸಂವಿಧಾನದ 51A (h) ಪರಿಚ್ಛೇದವನ್ನು ಉಲ್ಲೇಖಿಸುವುದು ಸೂಕ್ತವಾಗಿದೆ: "ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ, ಮಾನವತಾವಾದ ಮತ್ತು ವಿಚಾರಣೆ ಮತ್ತು ಸುಧಾರಣೆಯ ಮನೋಭಾವ." ಶಿಕ್ಷಣದಲ್ಲಿ ಪ್ರತಿನಿಧಿಸಬೇಕು ಎಂದಿದೆ ನಮ್ಮ ಸಂವಿಧಾನ. ಅಂತೆಯೇ, ನೀಟ್ ಮತ್ತು ನೆಟ್‌ಗೆ ಸಂಬಂಧಿಸಿದ ಹೆಚ್ಚಿನ ಪಾಲನ್ನು ಸಹ ಆಕಾಂಕ್ಷಿಗಳಲ್ಲಿ ಹೆಚ್ಚಿದ ಒತ್ತಡ, ಆತಂಕ ಮತ್ತು ಆತ್ಮಹತ್ಯೆಗಳ ದುರಂತ ನಿದರ್ಶನಗಳಿಗೆ ಕಾರಣವಾಗಿದೆ.

ಈ ಉದ್ಭವವಾಗಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರೀಕೃತ ನೀಟ್ ಅನ್ನು ಸ್ಥಗಿತಗೊಳಿಸುವುದು ಸಮಯದ ಅಗತ್ಯವಾಗಿದೆ ಎಂದು ಒತ್ತಾಯಿಸುತ್ತಾ, ಅದರ ವ್ಯಾಪ್ತಿಯನ್ನು AIIMS, PGIMER, JIPMER ಇತ್ಯಾದಿಗಳಿಗೆ ಸೀಮಿತಗೊಳಿಸುವುದು ಉತ್ತಮ. ಹಾಗೆಯೇ, NET ಅನ್ನು ಮರುಸ್ಥಾಪಿಸಲು ಸಮಗ್ರ ವಿಮರ್ಶೆಯನ್ನು ಹೊಂದಬೇಕಾಗಿರುವುದು ಸಹ ಅತ್ಯಗತ್ಯವಾಗಿದೆ. ರಾಜ್ಯ ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆ ಮತ್ತು ಶೈಕ್ಷಣಿಕ ಗುಣಮಟ್ಟ ಮತ್ತು ಪಾರದರ್ಶಕತೆಯನ್ನು ಎತ್ತಿಹಿಡಿಯಬೇಕಾದ ಅವಶ್ಯಕತೆ ಇದೆ. ರಾಜ್ಯಗಳು ಮತ್ತು ವಿಶ್ವವಿದ್ಯಾನಿಲಯಗಳು ತಮ್ಮ ವಿದ್ಯಾರ್ಥಿಗಳ ವೈವಿಧ್ಯಮಯ ಶೈಕ್ಷಣಿಕ ಅಗತ್ಯಗಳು ಮತ್ತು ಸವಾಲುಗಳನ್ನು ಪರಿಹರಿಸಿಕೊಳ್ಳಲು ಶೈಕ್ಷಣಿಕವಾಗಿ ಪರಿಣಿತವಾಗಿವೆ. ತಮ್ಮದೇ ಆದ ಪರೀಕ್ಷೆಗಳನ್ನು ನಿರ್ವಹಿಸಲು ಅವರಿಗೆ ಅವಕಾಶ ನೀಡುವುದು ಹೆಚ್ಚು ಸಮಾನವಾದ, ಸಂದರ್ಭೋಚಿತ ಮತ್ತು ಪರಿಣಾಮಕಾರಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಖಚಿತಪಡಿಸುತ್ತದೆ.





ಈ ಪ್ರಮುಖ ಅಂಶಗಳ ಮೇಲೆ ತ್ವರಿತವಾಗಿ ಕಾರ್ಯ ನಿರ್ವಹಿಸಲು ನಾನು ನಿಮ್ಮನ್ನು ಮನಃಪೂರ್ವಕವಾಗಿ ಒತ್ತಾಯಿಸುತ್ತೇನೆ. ಆ ಮೂಲಕ ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲಾದ ಒಕ್ಕೂಟ ತತ್ವಗಳನ್ನು ಬಲಪಡಿಸುತ್ತದೆ ಮತ್ತು ಹೆಚ್ಚು ಅಂತರ್ಗತ ಮತ್ತು ಇದು ಉನ್ನತ ಶೈಕ್ಷಣಿಕ ವ್ಯವಸ್ಥೆಯನ್ನು ಮತ್ತಷ್ಟು ಉತ್ತೇಜಿಸುತ್ತದೆ ಎಂದು ನಾನು ಅಪರಿಮಿತವಾಗಿ ನಂಬಿದ್ದೇನೆ.

ಅನು:ನಾಗರಾಜ ನಂಜುಂಡಯ್ಯ

ಯಾವುದೇ ವ್ಯವಹಾರದಲ್ಲಿ ಸ್ಪರ್ಧಾತ್ಮಕತೆ ಇದ್ದರೆ, ಕಂಪನಿಗಳು ಗ್ರಾಹಕರನ್ನು ಸೆಳೆಯಲು ಪೈಪೋಟಿಗಿಳಿದು ತಮ್ಮ ಉತ್ಪನ್ನಗಳ/ಸೇವೆಗಳ ದರ ಕಡಿಮೆ ಮಾಡುತ್ತವೆ, ಇದರಿಂದ ಗ್ರಾಹಕರಿಗೆ ಅಗ್ಗದ ದರದಲ್ಲಿ ಸರಕು/ಸೇವೆಗಳು ದೊರೆಯುತ್ತವೆ ಎಂದು ಹೇಳುವವರಿದ್ದಾರೆ. ಮುಕ್ತ ಆರ್ಥಿಕ ನೀತಿಗಳ ಪರವಾಗಿ ಇರುವವರೂ ಇದನ್ನೇ ಹೇಳುತ್ತಾರೆ. ಕಂಪನಿಗಳು/ವ್ಯಾಪಾರಸ್ಥರು ಒಬ್ಬರಿಗೊಬ್ಬರು ಪ್ರತಿಸ್ಪರ್ಧಿಗಳಂತೆ ಬಿಂಬಿಸುತ್ತಾ, ಸ್ಪರ್ಧಾತ್ಮಕವಾಗಿ ವರ್ತಿಸುತ್ತಾರಾದರೂ, ಬೆಲೆ ನಿರ್ಧರಿಸುವಲ್ಲಿ ಇವರೆಲ್ಲಾ ಒಂದಾಗುತ್ತಾರೆ. ಇದಕ್ಕೊಂದು ಉದಾಹರಣೆ ಖಾಸಗಿ ಟೆಲಿಕಾಂ ಕಂಪನಿಗಳು ಇತ್ತೀಚೆಗೆ ಹೆಚ್ಚಿಸಿದ ರೀಚಾರ್ಜ್ ದರ ಹೆಚ್ಚಳ. ವರ್ಷಕ್ಕೆ 20,607 ಕೋಟಿ ಲಾಭ ಗಳಿಸಿರುವ ರಿಲಯನ್ಸ್ ಜಿಯೋ ಮತ್ತಷ್ಟು ಲಾಭಕ್ಕಾಗಿ ರೀಚಾರ್ಜ್ ದರ ಹೆಚ್ಚಿಸಿ ಜನರನ್ನು ಮತ್ತಷ್ಟು ಹಿಂಡತೊಡಗಿದೆ. ಖಾಸಗಿ ಟೆಲಿಕಾಂ ಕಂಪನಿಗಳ 'ದರ' ಅಕ್ರಮವನ್ನು ತಡೆಯಲು ಬಿಎಸ್‌ಎನ್‌ಎಲ್ ಬಲವರ್ಧನೆಯಿಂದ ಮಾತ್ರ ಸಾಧ್ಯ.

ಜಿಯೋ, ಏರ್ಟೆಲ್ ರೀಚಾರ್ಜ್ ದರ ಹೆಚ್ಚಳ: ಜನರ ಮೇಲೆ 20,000 ಕೋಟಿ ಹೆಚ್ಚಿನ ಹೊರೆ

ಸಿ.ಸಿದ್ದಯ್ಯ



ಜನತೆ ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಇಂತಹ ಸಮಯದಲ್ಲೇ ಖಾಸಗಿ ಟೆಲಿಕಾಂ ಕಂಪನಿಗಳು ಮೊಬೈಲ್ ರೀಚಾರ್ಜ್ ದರವನ್ನು ಹೆಚ್ಚಳ ಮಾಡುವ ಮೂಲಕ ಜನರನ್ನು ಮತ್ತಷ್ಟು ಹಿಂಡಲು ಮುಂದಾಗಿವೆ. ಹೆಚ್ಚಿನ ಜನರಿಗೆ ಮೊಬೈಲ್ ಬಳಕೆಯೂ ಇಂದು ಅನಿವಾರ್ಯವಾಗಿದೆ. ಪಡಿತರ, ನರೇಗಾ ಯೋಜನೆಯಲ್ಲಿ ಕೆಲಸ, ಸರ್ಕಾರದ ಕಲ್ಯಾಣ ಯೋಜನೆಗಳೂ ಸೇರಿದಂತೆ ಇತರೆ ಸೌಲಭ್ಯಗಳನ್ನು ಪಡೆಯಲು ಬಡವರೂ ಕೂಡಾ ಅನಿವಾರ್ಯವಾಗಿ ಮೊಬೈಲ್ ಬಳಕೆ ಮಾಡಬೇಕಾಗಿದೆ. ಜೊತೆಗೆ, ಡಿಜಿಟಲ್ ಪಾವತಿಗಳ ವ್ಯವಹಾರಕ್ಕೂ ಬಹಳಷ್ಟು ಜನರಿಗೆ ಮೊಬೈಲ್ ಬಳಕೆ ಅನಿವಾರ್ಯ. ಇದನ್ನೇ ಖಾಸಗೀ ಬಂಡವಾಳಗಾರರು ತಮ್ಮ ಲಾಭ ಹೆಚ್ಚಳಕ್ಕೆ ದುರುಪಯೋಗ ಪಡಿಸಿಕೊಳ್ಳುತ್ತಾರೆ. ಈ ದರ ಹೆಚ್ಚಳವು ಕಡಿಮೆ ಆದಾಯದ ಗುಂಪಿನ ಜನರಿಗೆ, ವಿಶೇಷವಾಗಿ ದುಡಿಯುವ ಜನಸಾಮಾನ್ಯರಿಗೆ ತೀವ್ರವಾಗಿ ಹಾನಿಯನ್ನು ಉಂಟುಮಾಡುತ್ತದೆ.

20,000 ಕೋಟಿ ಹೊರೆ

ಕೇಂದ್ರದಲ್ಲಿ ಮೂರನೇ ಬಾರಿಗೆ ಮೋದಿ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಇಂತಹ ಏರಿಕೆ ಮಾಡಿವೆ. ದರ ಹೆಚ್ಚಳದ ಮೂಲಕ ಈ ಕಂಪನಿಗಳು ವರ್ಷವೊಂದಕ್ಕೆ ಜನರ ಮೇಲೆ 20,000 ಕೋಟಿ ರೂಪಾಯಿ ಹೊರೆ ಹಾಕಿವೆ. ಇಷ್ಟರ ಮಟ್ಟಿಗೆ ಜನರನ್ನು ಸುಲಿಗೆ ಮಾಡಲು ಇವು ಮುಂದಾಗಿವೆ. ಜಿಯೋ ಈ ಹೊರೆಗಳನ್ನು ಹೇರುವುದರಲ್ಲಿ ಮೊದಲ ಸ್ಥಾನದಲ್ಲಿದೆ, ನಂತರ ಏರ್ಟೆಲ್ ಮತ್ತು ವೋಡಾ. ರಿಲಯನ್ಸ್ ಜಿಯೋ ತನ್ನ ಸುಂಕವನ್ನು ಶೇಕಡಾ 12–25 ರಷ್ಟು ಹೆಚ್ಚಿಸಿದರೆ, ಏರ್ಟೆಲ್ ಶೇಕಡಾ 11–21 ರಷ್ಟು ಹೆಚ್ಚಿಸಿದೆ.

ಯಾವುದಾದರೂ ಸರಕುಗಳು ಅಥವಾ ಸೇವೆಗಳ ಬೆಲೆ ಏರಿಕೆಗೆ ಕಚ್ಚಾ ಪದಾರ್ಥಗಳ ಬೆಲೆ ಏರಿಕೆ, ಸಾಗಾಣಿಕೆ ದರ ಏರಿಕೆ, ಸರ್ಕಾರದಿಂದ ತೆರಿಗೆ ಹೆಚ್ಚಳ... ಇಂತಹ ಹಲವು ಕಾರಣಗಳನ್ನು ಕೊಡಲಾಗುತ್ತದೆ. ಟೆಲಿಕಾಂ ಕಂಪನಿಗಳಿಗೆ ಇದ್ಯಾವುದೂ ಅನ್ವಯಿಸುವುದಿಲ್ಲ. ಮೊಬೈಲ್ ತರಂಗಾಂತರ ನೈಸರ್ಗಿಕ ಸಂಪನ್ಮೂಲ. ಇದರ ಹಂಚಿಕೆ ಪಡೆಯುವಲ್ಲಿ ಸರ್ಕಾರವೇನಾದರೂ ಟೆಲಿಕಾಂ ಕಂಪನಿಗಳಿಗೆ ಹೆಚ್ಚು ದರ ನಿಗದಿ ಮಾಡಿದೆಯೇ ಎಂದರೆ ಅದೂ ಇಲ್ಲ. ಹಾಗಾದರೆ, ಈ ಮೊಬೈಲ್ ರೀಚಾರ್ಜ್ ದರ ಏರಿಕೆಗೆ ಕಾರಣವೇನು? ನಿರ್ವಹಣಾ ವೆಚ್ಚವನ್ನು ನಿಭಾಯಿಸಲು ಬೆಲೆ ಏರಿಕೆ ಅನಿವಾರ್ಯ ಎಂದು ಈ ಕಂಪನಿಗಳು ಸಮರ್ಥಿಸಿಕೊಳ್ಳುತ್ತಿವೆ. ಆದರೆ ಇದು ಸಂಪೂರ್ಣವಾಗಿ ತಪ್ಪುದಾರಿಗೆಳೆಯುವ ಹೇಳಿಕೆಯಾಗಿದೆ. ಖಾಸಗಿ ಕಂಪನಿಗಳು ಈ ದರವನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು ಯಾವುದೇ ಕಾರಣವಿಲ್ಲ. ಅಂದರೆ, ಬೆಲೆ ಹೆಚ್ಚಳ ಮಾಡದಿದ್ದರೆ, ಈ ಕಂಪನಿಗಳಿಗೆ ನಷ್ಟವಾಗುತ್ತಿತ್ತೇ? ಖಂಡಿತಾ ಇಲ್ಲ. ಇವು ಸಾಕಷ್ಟು ಲಾಭ ಗಳಿಸುತ್ತಿವೆ. 2023–24ನೇ ಹಣಕಾಸು ವರ್ಷ ಒಂದರಲ್ಲೇ ರಿಲಯನ್ಸ್ ಜಿಯೋ 20,607 ಕೋಟಿ ರೂಪಾಯಿ ನಿವ್ವಳ ಲಾಭ ಗಳಿಸಿದ್ದರೆ, ಏರ್ಟೆಲ್ 7,467 ಕೋಟಿ ರೂಪಾಯಿ ಲಾಭ ಗಳಿಸಿದೆ. ಆದರೂ, ಈ ಕಂಪನಿಗಳ ಹಣದ ದಾಹ ತಣಿದಿಲ್ಲ.

TRAI ಏನು ಮಾಡುತ್ತಿದೆ?

ಟೆಲಿಕಾಂ ವಲಯದಲ್ಲಿ TRAI (ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ) ಎಂಬ ನಿಯಂತ್ರಕವಿದೆ. ಅದರ ಕರ್ತವ್ಯವೆಂದರೆ, ಲಾಭದ ದುರಾಸೆಯ ಖಾಸಗಿ ಟೆಲಿಕಾಂ ಕಂಪನಿಗಳಿಂದ ಗ್ರಾಹಕರನ್ನು ಶೋಷಣೆ ಆಗದಂತೆ ನೋಡಿಕೊಳ್ಳಬೇಕು. ಆದರೆ, ವಾಸ್ತವವಾಗಿ, TRAI ಖಾಸಗಿ ಟೆಲಿಕಾಂ ಕಂಪನಿಗಳ ಹಿತಾಸಕ್ತಿಗಳನ್ನು ಮಾತ್ರ ಪೂರೈಸುತ್ತದೆ. ಜಿಯೋ 2016 ರಲ್ಲಿ ತನ್ನ ಸೇವೆಯನ್ನು ಪ್ರಾರಂಭಿಸಿದಾಗ, ಅದು TRAI ನ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿದೆ. ಆದರೆ TRAI ಮೂಕ ಪ್ರೇಕ್ಷಕನಾಗಿ ಉಳಿಯಿತು. ಆ ಸಮಯದಲ್ಲಿ ಟೆಲಿಕಾಂ ಇಲಾಖೆಯ ಕಾರ್ಯದರ್ಶಿಯಾಗಿದ್ದ ಹಿರಿಯ ಅಧಿಕಾರಿ ಜೆ.ಎಸ್. ದೀಪಕ್ ಅವರು ಜಿಯೋ ನಿಯಮಗಳ ಉಲ್ಲಂಘನೆಯ ಬಗ್ಗೆ ಗಂಭೀರ ಆಕ್ಷೇಪಣೆಗಳನ್ನು ಎತ್ತಿದರು ಮತ್ತು ಕ್ರಮಕ್ಕೆ ಒತ್ತಾಯಿಸಿ TRAI ಗೆ ಪತ್ರ ಬರೆದರು. TRAI ಯಾವುದೇ ಕ್ರಮ ಕೈಗೊಂಡಿಲ್ಲ. ಬದಲಾಗಿ, ಮೋದಿ ಸರ್ಕಾರವು ಜೆ.ಎಸ್. ದೀಪಕ್ ಅವರನ್ನು ರಾತ್ರೋರಾತ್ರಿ DoT ನಿಂದ ಹೊರಹಾಕಿತು.

BSNL ಕಾಲಿಗೆ ಸಂಕೋಲೆ

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (BSNL) ಪ್ರತಿಷ್ಠಿತ ಸಾರ್ವಜನಿಕ ವಲಯದ ಕಂಪನಿಯಾಗಿದೆ. ಖಾಸಗಿ ಟೆಲಿಕಾಂ ಕಂಪನಿಗಳ ಪ್ರವೇಶಕ್ಕೂ ಮುನ್ನ ದೇಶದ ಮೂಲೆ ಮೂಲೆಗೆ ಇದರ ಜಾಲ ಹರಡಿದೆ. ಬಿಜೆಪಿ ಸರ್ಕಾರವು ಇದರ ಕಾಲಿಗೆ ಸಂಕೋಲೆಯನ್ನು ಹಾಕಿದೆ. ವಿವಿಧ ರಿಯಾಯಿತಿಗಳು ಮತ್ತು ಅವಕಾಶಗಳನ್ನು ಕೊಡುವ ಮೂಲಕ ಕಾರ್ಪೊರೇಟ್ ಕಂಪನಿಗಳ ವಿಸ್ತರಣೆಗೆ ಅವಕಾಶ ಸೃಷ್ಟಿಸಿದೆ. ಬಿಎಸ್‌ಎನ್‌ಎಲ್ ತನ್ನ ಸೇವೆಗಳನ್ನು ವಿಸ್ತರಿಸಲು ಮತ್ತು ಅದರ ತಾಂತ್ರಿಕ ಸಾಮರ್ಥ್ಯಗಳನ್ನು ಹೆಚ್ಚಿಸಲು ಪ್ರಯತ್ನಿಸಿದಾಗಲೆಲ್ಲಾ ಅದು ಅಡಚಣೆಗಳನ್ನು ಎದುರಿಸುತ್ತಿದೆ. ಬಿಎಸ್‌ಎನ್‌ಎಲ್ ಅನ್ನು ಅಸಮರ್ಥ ಸಂಸ್ಥೆ ಎಂದು ಬಿಂಬಿಸುವ ಕಾರ್ಯವನ್ನು ಸ್ವತಃ ಬಿಜೆಪಿ ನಾಯಕರೇ ಕೈಗೆತ್ತಿಕೊಂಡು ಪ್ರಚಾರ ಮಾಡಿದ್ದಾರೆ.

ಖಾಸಗಿ ಪೂರೈಕೆದಾರರು ಎರಡು ಅಥವಾ ಮೂರು ಹಂತಗಳಲ್ಲಿ ಮುಂದುವರಿದ ನಂತರವೇ ಮೊದಲ ಹಂತದ ಸೇವೆಗಳನ್ನು ನೀಡುವ ವಿಧಾನವನ್ನು ಬಿಎಸ್‌ಎನ್‌ಎಲ್ ಅಳವಡಿಸಿಕೊಳ್ಳುತ್ತಿದೆ. ಗುಣಮಟ್ಟದ ಕಂಪನಿಗಳಿಂದ 4G ಮತ್ತು 5G ನಿರ್ವಹಣಾ ಉಪಕರಣಗಳು ಮತ್ತು ತಂತ್ರಜ್ಞಾನವನ್ನು ಖರೀದಿಸಲು ಬಿಎಸ್‌ಎನ್‌ಎಲ್ ವಿನಂತಿಸಿದರೆ–ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯವು ವರ್ಷಗಳಿಂದ ಅದನ್ನು ಜಯಿಸಲು ಸಾಧ್ಯವಾಗಲಿಲ್ಲ.

ಬಿಎಸ್‌ಎನ್‌ಎಲ್ ನಿಂದಾಗಿ ಮತ್ತಷ್ಟು ಏರಿಕೆಗೆ ತಡೆ

ಟೆಲಿಕಾಂ ಕ್ಷೇತ್ರದ ನಿಜವಾದ 'ನಿಯಂತ್ರಕ'ವಾಗಿ ಕಾರ್ಯನಿರ್ವಹಿಸುತ್ತಿರುವುದು ಬಿಎಸ್‌ಎನ್‌ಎಲ್ ಮಾತ್ರ. ಬಿಎಸ್‌ಎನ್‌ಎಲ್ ಪ್ರಬಲವಾಗಿದ್ದಾಗ, ಇದು ನಿಜವಾದ ನಿಯಂತ್ರಕವಾಗಿ ಕಾರ್ಯನಿರ್ವಹಿಸಿತು ಮತ್ತು ಖಾಸಗಿ ಪೂರೈಕೆದಾರರ ಬೆಲೆಗಳನ್ನು ನಿಯಂತ್ರಣದಲ್ಲಿ ಇರಿಸಿತು. ಕ್ರಮೇಣ ವಿಸ್ತರಣೆ ಕುಂಠಿತಗೊಂಡು ಖಾಸಗಿ ಕಂಪನಿಗಳ ಅಬ್ಬರಕ್ಕೆ ಅವಕಾಶವಾಗುತ್ತಿದೆ. ಈ ಹೊರೆಗಳಿಂದ ಜನರನ್ನು ಮುಕ್ತಗೊಳಿಸಲು ಬಿಎಸ್‌ಎನ್‌ಎಲ್ 5G ಸೇವೆಗಳೊಂದಿಗೆ ಬಲವಾಗಿ ವಿಸ್ತರಿಸಬೇಕು. ಅದಕ್ಕೆ ಕೇಂದ್ರ ಸರ್ಕಾರ ಸೂಕ್ತ ಅನುಮತಿ ಮತ್ತು ನೆರವು ನೀಡಬೇಕು. ಖಾಸಗಿ ಟೆಲಿಕಾಂ ಕಂಪನಿಗಳ 'ದರ' ಅಕ್ರಮವನ್ನು ತಡೆಯಲು ಬಿಎಸ್‌ಎನ್‌ಎಲ್ ಬಲವರ್ಧನೆಯಿಂದ ಮಾತ್ರ ಸಾಧ್ಯ!

ಆದರೆ, ಈಗ ಸನ್ನಿವೇಶ ಸಂಪೂರ್ಣ ಬದಲಾಗಿದೆ. ಅದು ಪ್ರತಿ ಬಾರಿ ಅವರು ಬಳಕೆದಾರರ ಅಗತ್ಯಗಳಿಗೆ ಅನುಗುಣವಾಗಿ 3ಜಿ, 4ಜಿ ಮತ್ತು 5ಜಿ ಸೇವೆಗಳಿಗೆ ಹೋದಾಗ, ಕೇಂದ್ರದಿಂದ ಅನುಮತಿಯನ್ನು ನಿರಾಕರಿಸಲಾಗುತ್ತದೆ. ಬಿಎಸ್‌ಎನ್‌ಎಲ್ ತನ್ನ 4ಜಿ ಮತ್ತು 5ಜಿ ಸೇವೆಗಳನ್ನು ಇಲ್ಲಿಯವರೆಗೆ ಪ್ರಾರಂಭಿಸಲು ಸಾಧ್ಯವಾಗಲಿಲ್ಲ, ಇದರ ಪರಿಣಾಮವಾಗಿ ಖಾಸಗಿ ಆಪರೇಟರ್‌ಗಳೊಂದಿಗೆ ಸಮಾನ ಹೆಜ್ಜೆಯಲ್ಲಿ ಸ್ಪರ್ಧಿಸುವುದಕ್ಕೆ ಆಗದೆ ಅದು ಹೆಚ್ಚು ದುರ್ಬಲವಾಗಿದೆ.

ಬಿಎಸ್‌ಎನ್‌ಎಲ್ ನೊಂದಿಗೆ 4ಜಿ ಮತ್ತು 5ಜಿ ಸೇವೆಗಳು ಲಭ್ಯವಿಲ್ಲದ ಕಾರಣ, ಅದರ ಗ್ರಾಹಕರು ಹೈಸ್ಪೀಡ್ ಡೇಟಾ ಸೇವೆಯಿಂದ ವಂಚಿತರಾಗಿದ್ದಾರೆ. ಮೋದಿ ಆಡಳಿತದ ಈ ವಿಶ್ವಾಸಘಾತುಕ ದ್ರೋಹ ಮತ್ತು ನಿರ್ಲಕ್ಷ್ಯದಿಂದಾಗಿ BSNL ಬಿಎಸ್‌ಎನ್‌ಎಲ್ ಅನ್ನು ಬೃಹತ್ ಪ್ರಮಾಣದಲ್ಲಿ ತ್ಯಜಿಸಲು ಮತ್ತು ರಿಲಯನ್ಸ್ ಜಿಯೋ ಮತ್ತು ಏರ್ಟೆಲ್ ಗೆ ವಲಸೆ ಹೋಗಲು ಅವರನ್ನು ಒತ್ತಾಯಿಸಿದೆ. TRAI ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ, ಬಿಎಸ್‌ಎನ್‌ಎಲ್ 2023–24 ರಲ್ಲಿ 1.8 ಕೋಟಿ ಗ್ರಾಹಕರನ್ನು ಕಳೆದುಕೊಂಡಿದೆ. ಮಾರ್ಚ್ 2024 ರಲ್ಲಿ ತಿಂಗಳಲ್ಲೇ 23.54 ಲಕ್ಷ ಗ್ರಾಹಕರು ಬಿಎಸ್‌ಎನ್‌ಎಲ್ ಅನ್ನು ತೊರೆದಿದ್ದಾರೆ. ಅದೇ ತಿಂಗಳಲ್ಲಿ ರಿಲಯನ್ಸ್ ಜಿಯೋ 21.43 ಲಕ್ಷ ಹೊಸ ಗ್ರಾಹಕರನ್ನು ಗಳಿಸಿದೆ ಮತ್ತು ಏರ್ಟೆಲ್ 17.5 ಲಕ್ಷ ಹೊಸ ಗ್ರಾಹಕರನ್ನು ಗಳಿಸಿದೆ. ಈ ಎಲ್ಲಾ ಬೆಳವಣಿಗೆಗಳು ಜಿಯೋ ಮತ್ತು ಏರ್ಟೆಲ್ ಗಳು ತಮ್ಮ ದರಗಳನ್ನು ಕಡಿದಾಗಿ ಹೆಚ್ಚಿಸಲು ಪ್ರೋತ್ಸಾಹಿಸಿವೆ.

ಪುಟ 12 ಕ್ಕೆ

ಜಿಯೋ ಜಾಹಿರಾತಿನಲ್ಲಿ ಮೋದಿ ಭಾವಚಿತ್ರ

ಮೋದಿ 2016 ರಲ್ಲಿ ನೋಟು ಅಮಾನ್ಯೀಕರಣವನ್ನು ಘೋಷಿಸಿದರು. ಇದಾದ ಕೆಲವೇ ದಿನಗಳಲ್ಲಿ ಮೋದಿಯವರಿಂದ ಡಿಜಿಟಲ್ ಪಾವತಿಗಳ ವಿಷಯ ಪ್ರಸ್ತಾಪವಾಯಿತು. ಕೆಲವೇ ದಿನಗಳಲ್ಲಿ ಅಂಬಾನಿಯ ಜಿಯೋ ಆಕರ್ಷಕ ಕಡಿಮೆ ದರವನ್ನು ಘೋಷಿಸಿ, ಕೆಲವೇ ದಿನಗಳಲ್ಲಿ ಲಕ್ಷಗಟ್ಟಲೆ ಗ್ರಾಹಕರನ್ನು ತನ್ನತ್ತ ಸೆಳೆದುಕೊಂಡಿತು. ಮೋದಿಯವರ ಭಾವಚಿತ್ರವನ್ನು ಜಿಯೋ ತನ್ನ ಜಾಹಿರಾತಿಗಾಗಿ ಬಳಸಿಕೊಂಡಿತು. ಸಾರ್ವಜನಿಕ ಒಡೆತನದ ಬಿಎಸ್‌ಎನ್‌ಎಲ್ ಸಂಸ್ಥೆಯನ್ನು ಮತ್ತಷ್ಟು ಬೆಳೆಸುವ ಜವಾಬ್ದಾರಿ ಹೊತ್ತ ಪ್ರಧಾನಿಯೇ ಖಾಸಗಿ ಸಂಸ್ಥೆಯಾದ ಜಿಯೋ ಬೆಳವಣಿಗೆಗೆ ಸಹಕಾರಿಯಾಗಿ ಬಹಿರಂಗವಾಗಿ ಕಾಣಿಸಿಕೊಂಡರು. ಆ ಮೂಲಕ ಸಾರ್ವಜನಿಕ ಉದ್ಯಮವೊಂದನ್ನು ಅವನತಿಯತ್ತ ತಳ್ಳಲು ಮುಂದಾದರು. ಮೋದಿ ಸರ್ಕಾರ ಜಿಯೋ ವಿಸ್ತರಣೆಗೆ ಇಷ್ಟೆಲ್ಲಾ ಮಾಡುತ್ತಿರುವ ಸಂದರ್ಭದಲ್ಲಿಯೂ, ಬಿಎಸ್‌ಎನ್‌ಎಲ್ ತನ್ನ ಕಾಲ



ಮೇಲೆ ನಿಂತಿದೆ. ಅದು ತನ್ನ ಗ್ರಾಹಕರಿಗೆ ಹೈ–ಸ್ಪೀಡ್ ಡೇಟಾವನ್ನು ಒದಗಿಸುವ ಯೋಜನೆಗಳನ್ನು ಹೊಂದಿದೆ.

ಮೋದಿಯ ಅಡಿಯಲ್ಲಿ "ಎಲ್ಲವೂ ಹಿಂದಿನಂತೆಯೇ ಸಾಗಿವೆ" ಎಂಬ ಕಥನದ ಸೃಷ್ಟಿ–ಸಿಪಿಐ(ಎಂ) ಕೇಂದ್ರ ಸಮಿತಿ

ಭಾರತದ ಜನತೆ ಸಂವಿಧಾನ ಮತ್ತು ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಎತ್ತಿ ಹಿಡಿಯುತ್ತ ಮತ್ತು ತೀವ್ರವಾಗಿ ಕುಸಿಯುತ್ತಿರುವ ಜೀವನೋಪಾಯದ ಪರಿಸ್ಥಿತಿಗಳ ಬಗ್ಗೆ ಆಳವಾದ ಕಳವಳ ವ್ಯಕ್ತಪಡಿಸುತ್ತಾ, ಕಳೆದ ಎರಡು ಲೋಕಸಭಾ ಚುನಾವಣೆಗಳಿಗಿಂತ ಭಿನ್ನವಾಗಿ ಬಿಜೆಪಿ ಬಹುಮತವನ್ನು ಪಡೆಯದಂತೆ ಖಚಿತಪಡಿಸಿದರೂ ಕೂಡ, ಕೋಮು ಧ್ರುವೀಕರಣವನ್ನು ಮತ್ತಷ್ಟು ತೀವ್ರಗೊಳಿಸಲು, ಫಲಿತಾಂಶ ಪ್ರಕಟವಾದ ಮರುದಿನದಿಂದಲೇ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಸರಣಿ ದಾಳಿಗಳು ನಡೆಯುತ್ತಿವೆ. ಅದರೊಂದಿಗೇ, ಕೇಂದ್ರೀಯ ಸಂಸ್ಥೆಗಳನ್ನು ಅಸ್ತ್ರಗಳಾಗಿ ಮಾಡಿಕೊಂಡು ನಮ್ಮನ್ನೂ ಒಳಗೊಂಡಂತೆ ಪ್ರತಿಪಕ್ಷಗಳ ಮೇಲೆ ಗುರಿಯಿಡುವುದೂ ಮುಂದುವರೆದಿದೆ. ಪತ್ರಕರ್ತರ ವಿರುದ್ಧದ ಎಫ್‌ಐಆರ್‌ಗಳು, ಅರವಿಂದ್ ಕೇಜ್ರಿವಾಲ್‌ರನ್ನು ಸಿಬಿಐ ಪುನಃ ಬಂಧಿಸಿರುವುದು, ಅರುಂಧತಿ ರಾಯ್ ವಿರುದ್ಧದ ಕಾನೂನು ಕ್ರಮಕ್ಕೆ ಮುಂಜೂರಾತಿ ಮುಂತಾದವು ಅವ್ಯಾಹತವಾಗಿ ಮುಂದುವರೆದಿವೆ. ಎನ್‌ಎಸ್‌ಎ (ರಾಷ್ಟ್ರೀಯ ಸುರಕ್ಷತಾ ಸಲಹೆಗಾರ) ಮತ್ತು ಪ್ರಧಾನ ಮಂತ್ರಿಯ ಮುಖ್ಯ ಕಾರ್ಯದರ್ಶಿಯ ಮರುನೇಮಕ, ಭಾರತಕ್ಕೆ ಯಾವುದೇ ಕಾರ್ಯಸೂಚಿಯನ್ನು ಹೊಂದಿರದ ಶೃಂಗಸಭೆಯ ನೇಪಥ್ಯದಲ್ಲಿ ಜಿ–7 ನಾಯಕರನ್ನು ಭೇಟಿ ಮಾಡಲು ಮೋದಿ ಇಟಲಿಗೆ ಪ್ರಯಾಣಿಸಿರುವುದು; ಚುನಾಯಿತರಾದ ಎಲ್ಲಾ ಮಾಜಿ ಮಂತ್ರಿಗಳನ್ನು ಅವರು ಕಳೆದ ಸಂಪುಟದಲ್ಲಿ ನಿರ್ವಹಿಸಿದ ಸಚಿವಾಲಯಗಳಿಗೇ ಮುಖ್ಯಸ್ಥರಾಗಿ ಮತ್ತೆ ನೇಮಿಸಿರುವುದು ಮತ್ತು ಸುಮಾರು 150 ಸಂಸದರನ್ನು ಅಮಾನತುಗೊಳಿಸಿದ ಓಂ ಬಿರ್ಲಾರವರನ್ನೇ ಮತ್ತೆ ಲೋಕಸಭಾಧ್ಯಕ್ಷರಾಗಿ ಮರು ಆಯ್ಕೆ ಮಾಡಿರುವುದು ಮೋದಿಯ ಅಡಿಯಲ್ಲಿ "ಎಲ್ಲವೂ ಹಿಂದಿನಂತೆಯೇ ಸಾಗಿವೆ" ಎಂಬ ಕಥನವನ್ನು ಸೃಷ್ಟಿಸಲು ಪ್ರಯತ್ನಿಸಲಾಗುತ್ತಿದೆ ಎಂಬುದನ್ನು ಸೂಚಿಸುತ್ತವೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಜೂನ್ 28ರಿಂದ 30ರ ವರೆಗೆ ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ, ಲೋಕಸಭಾ ಚುನಾವಣೆಗಳ ಮತ್ತು ನಂತರದ ಬೆಳವಣಿಗೆಗಳ ಪರಾಮರ್ಶೆ ಮತ್ತು ನೀಟ್ ಹಗರಣದ ವಿಮರ್ಶೆ ನಡೆಸಿದ್ದಲ್ಲದೆ, ಜುಲೈ 1ರಿಂದ ಜಾರಿಗೆ ತಂದಿರುವ ಹೊಸ ಕ್ರಿಮಿನಲ್ ಕಾಯ್ದೆಗಳ ವಿಮರ್ಶೆಯನ್ನೂ ನಡೆಸಿತು. ಸಭೆಯ ನಂತರ ಪ್ರಕಟಿಸಿದ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ.

ಕೇಂದ್ರ ಸಮಿತಿಯ ಹೇಳಿಕೆ

18ನೇ ಲೋಕಸಭೆ ಚುನಾವಣೆ ಫಲಿತಾಂಶ

ಕೇಂದ್ರ ಸಮಿತಿಯು 18 ನೇ ಲೋಕಸಭೆಯ ಫಲಿತಾಂಶಗಳನ್ನು ಚರ್ಚಿಸಿತು ಮತ್ತು ಇದು ಬಿಜೆಪಿಗೆ ಗಮನಾರ್ಹ ಹಿನ್ನಡೆ ಎಂಬ ತೀರ್ಮಾನಕ್ಕೆ ಬಂದಿದೆ. ಭಾರತದ ಜನತೆ ಸಂವಿಧಾನ ಮತ್ತು ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಎತ್ತಿ ಹಿಡಿಯುತ್ತ ಮತ್ತು ತೀವ್ರವಾಗಿ ಕುಸಿಯುತ್ತಿರುವ ಜೀವನೋಪಾಯದ ಪರಿಸ್ಥಿತಿಗಳ ಬಗ್ಗೆ ಆಳವಾದ ಕಳವಳ ವ್ಯಕ್ತಪಡಿಸುತ್ತಾ, ಕಳೆದ ಎರಡು ಲೋಕಸಭಾ ಚುನಾವಣೆಗಳಿಗಿಂತ ಭಿನ್ನವಾಗಿ ಬಿಜೆಪಿ ಬಹುಮತವನ್ನು ಪಡೆಯದಂತೆ ಖಚಿತಪಡಿಸಿದ್ದಾರೆ. 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಬಿಜೆಪಿಯ ಕಿರುಚಾಟವನ್ನು ತಿರಸ್ಕರಿಸಿ, ಅವರಿಗೆ 240 ಸ್ಥಾನಗಳನ್ನು ನೀಡಿದ್ದಾರೆ. ಇದು 2019 ರ ಲೋಕಸಭೆಗಿಂತ 63 ಕಡಿಮೆಯಾಗಿದೆ. ಒಟ್ಟಾರೆಯಾಗಿ, ಬಿಜೆಪಿ ಹಿಂದೆ ಗೆದ್ದಿದ್ದ 92 ಸ್ಥಾನಗಳನ್ನು ಕಳೆದುಕೊಂಡಿದೆ, ಆದರೆ 29 ಹೊಸ ಸ್ಥಾನಗಳನ್ನು ಗೆಲ್ಲುವ ಮೂಲಕ ಅದರ ನಿವ್ವಳ ನಷ್ಟ 63 ಆಗಿದೆ. ಇದು ಬಹುಮತಕ್ಕೆ 32 ಸ್ಥಾನಗಳಷ್ಟು ಕಡಿಮೆ. ಆದಾಗ್ಯೂ, ಅದರ ಮಿತ್ರಪಕ್ಷಗಳು ಹೆಚ್ಚುವರಿ 52 ಸ್ಥಾನಗಳನ್ನು ಗೆಲ್ಲುವುದರೊಂದಿಗೆ, ಮೋದಿ ಈಗ 292 ಸಂಸದರ ಅಂದರೆ, ಅಗತ್ಯವಿರುವ ಬಹುಮತಕ್ಕಿಂತ ಕೇವಲ 20 ಹೆಚ್ಚು ಬೆಂಬಲದೊಂದಿಗೆ ಎನ್‌ಡಿಎ ಸರ್ಕಾರವನ್ನು ಹೊಂದಿದ್ದಾರೆ.

ಇಂಡಿಯಾ ಬಣದ ಪಕ್ಷಗಳು ಒಟ್ಟಾಗಿ 234 ಸ್ಥಾನಗಳನ್ನು ಗೆಲ್ಲುವಂತೆ ಜನಗಳು ಅಣಿನೆರೆದಿದ್ದಾರೆ. ಇದು ಬಹುಮತಕ್ಕೆ 38 ಕಡಿಮೆ. ಎನ್‌ಡಿಎ ಮೈತ್ರಿಕೂಟದ ಎಲ್ಲಾ ಘಟಕಗಳು ಒಟ್ಟಾಗಿ 42.5 ಶೇಕಡಾ ಮತಗಳನ್ನು ಪಡೆದರೆ, ಇಂಡಿಯಾ ಬಣದ ಪಕ್ಷಗಳು ಒಟ್ಟಾಗಿ 40.6 ಶೇಕಡಾ ಮತಗಳನ್ನು ಪಡೆದಿವೆ. ಎರಡು ಸಂಯೋಜನೆಗಳ ನಡುವಿನ ಮತ ಹಂಚಿಕೆಯ ವ್ಯತ್ಯಾಸವು 2 ಶೇಕಡಾಕ್ಕಿಂತ ಕ್ಕಿಂತ ಕಡಿಮೆಯಾಗಿದೆ, 1.9 ಶೇಕಡಾದಷ್ಟು. ಈ ಪ್ರತಿಕೂಲ ಫಲಿತಾಂಶಗಳ ಹೊರತಾಗಿಯೂ ಮತ್ತು ಒಂದು ಸಮ್ಮಿಶ್ರ ಸರ್ಕಾರವನ್ನು ರಚಿಸ ಬೇಕಾಗಿ ಬಂದರೂ, ಬಿಜೆಪಿಯು ಮೋದಿಯ ಪ್ರಾಬಲ್ಯವನ್ನು ಮರುಸ್ಥಾಪಿಸಲು ಪಟ್ಟುಬಿಡದೆ ದಾಳಿಗಳನ್ನು ಪ್ರಾರಂಭಿಸಿದೆ. ಅದರ ಒಟ್ಟಾರೆ ಮತ ಹಂಚಿಕೆಯಲ್ಲಿ ಇಳಿಕೆ ಶೇಕಡಾ 1 ಕ್ಕಿಂತ ಸ್ವಲ್ಪ ಹೆಚ್ಚಷ್ಟೇ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಕಳೆದ ದಶಕದಲ್ಲಿ ಅದು ತಾನು ಅನುಸರಿಸಿದ ಹಿಂದುತ್ವ ಪ್ರಶ್ನೆಯನ್ನು ಮತ್ತಷ್ಟು ಕ್ರೋಡೀಕರಿಸ ಬಯಸುತ್ತಿದೆ.

ಕೋಮು ಧ್ರುವೀಕರಣವನ್ನು ಮತ್ತಷ್ಟು ತೀವ್ರಗೊಳಿಸಲು, ಫಲಿತಾಂಶ ಪ್ರಕಟವಾದ ಮರುದಿನದಿಂದಲೇ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಸರಣಿ ದಾಳಿಗಳು ನಡೆಯುತ್ತಿವೆ. ಅದರೊಂದಿಗೇ, ಕೇಂದ್ರೀಯ ಸಂಸ್ಥೆಗಳನ್ನು ಅಸ್ತ್ರಗಳಾಗಿ ಮಾಡಿಕೊಂಡು ನಮ್ಮನ್ನೂ ಒಳಗೊಂಡಂತೆ ಪ್ರತಿಪಕ್ಷಗಳ ಮೇಲೆ ಗುರಿಯಿಡುವುದೂ ಮುಂದುವರೆದಿದೆ. ಪತ್ರಕರ್ತರ ವಿರುದ್ಧದ ಎಫ್‌ಐಆರ್‌ಗಳು, ಅರವಿಂದ್ ಕೇಜ್ರಿವಾಲ್‌ರನ್ನು ಸಿಬಿಐ ಪುನಃ ಬಂಧಿಸಿರುವುದು, ಅರುಂಧತಿ ರಾಯ್ ವಿರುದ್ಧದ ಕಾನೂನು ಕ್ರಮಕ್ಕೆ ಮುಂಜೂರಾತಿ ಮುಂತಾದವು ಅವ್ಯಾಹತವಾಗಿ ಮುಂದುವರೆದಿವೆ. ಎನ್‌ಎಸ್‌ಎ (ರಾಷ್ಟ್ರೀಯ ಸುರಕ್ಷತಾ ಸಲಹೆಗಾರ) ಮತ್ತು ಪ್ರಧಾನ ಮಂತ್ರಿಯ ಮುಖ್ಯ ಕಾರ್ಯದರ್ಶಿಯ ಮರುನೇಮಕ, ಭಾರತಕ್ಕೆ ಯಾವುದೇ ಕಾರ್ಯಸೂಚಿಯನ್ನು ಹೊಂದಿರದ ಶೃಂಗಸಭೆಯ ನೇಪಥ್ಯದಲ್ಲಿ ಜಿ–7 ನಾಯಕರನ್ನು ಭೇಟಿ ಮಾಡಲು ಮೋದಿ ಇಟಲಿಗೆ ಪ್ರಯಾಣಿಸಿರುವುದು; ಚುನಾಯಿತರಾದ ಎಲ್ಲಾ ಮಾಜಿ ಮಂತ್ರಿಗಳನ್ನು ಅವರು ಕಳೆದ ಸಂಪುಟದಲ್ಲಿ ನಿರ್ವಹಿಸಿದ ಸಚಿವಾಲಯಗಳಿಗೇ ಮುಖ್ಯಸ್ಥರಾಗಿ ಮತ್ತೆ ನೇಮಿಸಿರುವುದು ಮತ್ತು ಸುಮಾರು 150 ಸಂಸದರನ್ನು ಅಮಾನತುಗೊಳಿಸಿದ ಓಂ ಬಿರ್ಲಾರವರನ್ನೇ ಮತ್ತೆ ಲೋಕಸಭಾಧ್ಯಕ್ಷರಾಗಿ ಮರು ಆಯ್ಕೆ ಮಾಡಿರುವುದು ಮೋದಿಯ ಅಡಿಯಲ್ಲಿ "ಎಲ್ಲವೂ ಹಿಂದಿನಂತೆಯೇ ಸಾಗಿವೆ" ಎಂಬ ಕಥನವನ್ನು ಸೃಷ್ಟಿಸಲು ಪ್ರಯತ್ನಿಸಲಾಗುತ್ತಿದೆ ಎಂಬುದನ್ನು ಸೂಚಿಸುತ್ತವೆ.

ಈ ಪರಿಸ್ಥಿತಿಯಲ್ಲಿ, ಭಾರತೀಯ ಸಂವಿಧಾನ, ಜಾತ್ಯತೀತ ಪ್ರಜಾಪ್ರಭುತ್ವ ಒಕ್ಕೂಟ ತತ್ವ ಮತ್ತು ಜನರ ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಗಾಗಿ ಹೋರಾಟಗಳು ಮತ್ತು ಬಹುಪಾಲು ಭಾರತೀಯ ಜನಗಳ ಜೀವನೋಪಾಯಗಳನ್ನು ಉತ್ತಮಗೊಳಿಸುವ ಹೋರಾಟಗಳನ್ನು ತೀವ್ರಗೊಳಿಸಬೇಕಾಗಿದೆ ಎಂದು ಕೇಂದ್ರ ಸಮಿತಿಯು ತೀರ್ಮಾನಿಸಿದೆ. ಸಂಸತ್ತಿನ ಒಳಗೆ ಮತ್ತು ಹೊರಗೆ ಸಿಪಿಐ(ಎಂ) ಈ ಕಾರ್ಯಭಾರವನ್ನು ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಜಂಟಿಯಾಗಿ ಮತ್ತು ಸ್ವತಂತ್ರವಾಗಿ ದೇಶಾದ್ಯಂತ ನಿಭಾಯಿಸುತ್ತದೆ.

ಸಿಪಿಐ(ಎಂ) ಸಾಧನೆ

ಮೋದಿ ಆಡಳಿತದ ನೀತಿಗಳ ವಿರುದ್ಧದ ಹೋರಾಟಗಳಲ್ಲಿ ಮತ್ತು ಆರೆಸ್ಸೆಸ್/ಬಿಜೆಪಿ ವಿರುದ್ಧ ಜಾತ್ಯತೀತ ಶಕ್ತಿಗಳನ್ನು ಒಟ್ಟುಗೂಡಿಸುವಲ್ಲಿ ದುಡಿಯುವ ಜನರನ್ನು ಸಂಘಟಿಸುವಲ್ಲಿ ಸಿಪಿಐ(ಎಂ) ಪಾತ್ರವಹಿಸಿತು ಮತ್ತು ಆ ಮೂಲಕ ಇಂಡಿಯಾ ಬಣವನ್ನು ಬಲಪಡಿಸುವಲ್ಲಿ ಕೊಡುಗೆ ನೀಡಿತು. ಆದರೆ, ಪಕ್ಷದ ಸಾಧನೆ ನಿರಾಶಾದಾಯಕವಾಗಿದೆ. 2019 ರಲ್ಲಿ 71 ಸ್ಥಾನಗಳಿಗೆ ಹೋಲಿಸಿದರೆ ಸಿಪಿಐ(ಎಂ) ಈ ಬಾರಿ 52 ಸ್ಥಾನಗಳಲ್ಲಿ ಸ್ಪರ್ಧಿಸಿದೆ. ಇವುಗಳಲ್ಲಿ ಅದು 4 ಸ್ಥಾನಗಳನ್ನು ಗೆದ್ದಿದೆ (ತಮಿಳುನಾಡು 2; ಕೇರಳ ಮತ್ತು ರಾಜಸ್ಥಾನ ತಲಾ 1). ಒಟ್ಟಾರೆಯಾಗಿ ಎಡಪಕ್ಷಗಳು 8 ಸಂಸದರನ್ನು ಹೊಂದಿವೆ [ಸಿಪಿಐ(ಎಂ) 4, ಸಿಪಿಐ 2, ಸಿಪಿಐ(ಎಂಎಲ್) 2].

ಕೇಂದ್ರ ಸಮಿತಿಯು ನಾವು ಸ್ಪರ್ಧಿಸಿದ ಎಲ್ಲಾ ರಾಜ್ಯಗಳಲ್ಲಿ ಪಕ್ಷದ ಕಾರ್ಯಕ್ಷಮತೆಯನ್ನು ಗಂಭೀರವಾದ ಆತ್ಮಾವಲೋಕನದೊಂದಿಗೆ ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿದೆ. ದೌರ್ಬಲ್ಯಗಳು ಮತ್ತು ನ್ಯೂನತೆಗಳನ್ನು ಗುರುತಿಸಲಾಗಿದೆ ಮತ್ತು ಬೊಟ್ಟುಮಾಡಲಾಗಿದೆ. ಪಕ್ಷದ ರಾಜ್ಯ ಸಮಿತಿಗಳು ಈಗ ಈ ನ್ಯೂನತೆಗಳನ್ನು ನಿವಾರಿಸಲು ಮತ್ತು ಪಕ್ಷವನ್ನು ಮತ್ತಷ್ಟು ಬಲಪಡಿಸಲು ರೂಪಿಸಿದ ಕಾರ್ಯಭಾರಗಳ ಅನುಷ್ಠಾನವನ್ನು ಮುಂದೊಯ್ಯುತ್ತವೆ.

ಅಲ್ಪಸಂಖ್ಯಾತರ ಮೇಲೆ ದಾಳಿಗಳಿಗೆ ಪ್ರತಿಭಟನೆ

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾದ ನಂತರ ದೇಶದ ವಿವಿಧ ಭಾಗಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದವರ ಜೀವ, ಜೀವನೋಪಾಯ ಮತ್ತು ಆಸ್ತಿಗಳ ಮೇಲೆ ನಡೆಯುತ್ತಿರುವ ಭೀಕರ ದಾಳಿಗಳನ್ನು ಕೇಂದ್ರ ಸಮಿತಿ ಖಂಡಿಸಿದೆ.

ಛತ್ತೀಸ್‌ಗಢದ ರಾಯ್‌ಪುರ, ಉತ್ತರಪ್ರದೇಶದ ಅಲಿಗಢ ಮತ್ತು ಗುಜರಾತ್‌ನ ಚಿಖೋದ್ರಾದಲ್ಲಿ ನಡೆದ ದಾಳಿಗಳಲ್ಲಿ ಒಟ್ಟು ಐವರು ಮುಸ್ಲಿಂ ಪುರುಷರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

"ಗೋಹತ್ಯೆ" ಅಥವಾ "ಗೋಮಾಂಸದ ಪತ್ತೆ" ಎಂಬ ಆಧಾರರಹಿತ ಆರೋಪಗಳನ್ನು ಅನುಸರಿಸಿ, ಮಧ್ಯಪ್ರದೇಶದ ಮಾಂಡ್ಲಾದಲ್ಲಿ 11 ಮುಸ್ಲಿಮರ ಮನೆಗಳನ್ನು ನೆಲಸಮಗೊಳಿಸಲಾಯಿತು, ಮುಸ್ಲಿಂ ವ್ಯಕ್ತಿಯ ಅಂಗಡಿಯನ್ನು ಧ್ವಂಸಗೊಳಿಸಲಾಯಿತು, ಹಿಮಾಚಲ ಪ್ರದೇಶದ ನಹಾನ್‌ನಲ್ಲಿ ಅನೇಕವನ್ನು ಬಲವಂತವಾಗಿ ಮುಚ್ಚಲಾಯಿತು ಮತ್ತು ಒಡಿಶಾದ ಬಾಲಸೋರ್‌ನಲ್ಲಿ ಘರ್ಷಣೆ ನಡೆದಿದೆ.

ಗುಜರಾತ್‌ನ ವಡೋದರದಲ್ಲಿ ಕಡಿಮೆ ಆದಾಯದ ವರ್ಗಗಳ ವಸತಿ ಸಮುಚ್ಚಯದಲ್ಲಿ ಮುಸ್ಲಿಂ ಮಹಿಳೆಯೊಬ್ಬರಿಗೆ ನೀಡಲಾಗಿದ್ದ ಫ್ಲ್ಯಾಟ್‌ನಲ್ಲಿ ವಾಸಿಸದಂತೆ ತಡೆದರೆ, ದೆಹಲಿಯ ಸಂಗಮ್ ವಿಹಾರ್‌ನಲ್ಲಿರುವ ನಿವಾಸಿಗಳನ್ನು ಹಿಂದುತ್ವದ ಸದಸ್ಯರು ಹಸುವಿನ ಮೃತದೇಹ ಪತ್ತೆಯಾದ ನಂತರ ಮತ್ತು ಹಿಂದುತ್ವ ಸಂಘಟನೆಗಳ ಪ್ರಚೋದನಕಾರಿ ಭಾಷಣಗಳಿಂದಾಗಿ ಮನೆ ಬಿಟ್ಟು ಓಡಿಹೋಗಬೇಕಾಯಿತು. ಜಬಲ್‌ಪುರದಲ್ಲಿ ಹಿಂದುತ್ವ ಸಂಘಟನೆಗಳು ಮುಸ್ಲಿಮರು ನಗರವನ್ನು ತೊರೆಯುವಂತೆ ಬೆದರಿಕೆಯೊಡ್ಡುವ ಪ್ರತಿಭಟನೆಯನ್ನು ಆಯೋಜಿಸಿವೆ.

ಬಿಜೆಪಿ ಅನುಭವಿಸಿದ ಹಿನ್ನಡೆಯ ನಂತರ ಕೋಮುವಾದಿ ದಾಳಿಗಳು ಈ ರೀತಿಯಲ್ಲಿ ತೀಕ್ಷ್ಣಗೊಳ್ಳುತ್ತಿರುವುದು ಹಿಂದುತ್ವದ ಕೋಮುವಾದಿ ಶಕ್ತಿಗಳು ಹೊಸ ಪ್ರತೀಕಾರದೊಂದಿಗೆ ಧ್ರುವೀಕರಣದ ತಮ್ಮ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿವೆ ಎಂಬ ಅಂಶವನ್ನು ಎತ್ತಿ ತೋರಿಸುತ್ತದೆ.

ಬಿಜೆಪಿ ಮತ್ತು ಇತರ ಕೋಮುವಾದಿ ಸಂಘಟನೆಗಳ ಇಂತಹ ನಿರ್ಲಜ್ಜ ಕುತಂತ್ರಗಳ ವಿರುದ್ಧ ಜಾಗರೂಕರಾಗಿರಲು ಪಕ್ಷದ ಎಲ್ಲ ಘಟಕಗಳಿಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಇಂತಹ ಹೀನ ಯತ್ನಗಳ ವಿರುದ್ಧ ದೇಶಾದ್ಯಂತ ಪಕ್ಷದ ಘಟಕಗಳು ಕೂಡಲೇ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಬೇಕು.

ಪರೀಕ್ಷಾ ಹಗರಣಗಳು: ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ(ಎನ್‌ಟಿಎ) ನಡೆಸಿದ ಪರೀಕ್ಷೆಗಳ ಸುತ್ತಲಿನ ಹಗರಣಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು, ಅವರ ಪೋಷಕರು ಮತ್ತು ಇತರರು ಎದುರಿಸುತ್ತಿರುವ ಆತಂಕ, ತೀವ್ರ ಆಘಾತದ ಬಗ್ಗೆ ಕೇಂದ್ರ ಸಮಿತಿಯು ತನ್ನ ಆಳವಾದ ಕಳವಳವನ್ನು ವ್ಯಕ್ತಪಡಿಸಿದೆ.

ಶಿಕ್ಷಣದ ಕೇಂದ್ರೀಕರಣ, ವಾಣಿಜ್ಯೀಕರಣ ಮತ್ತು ಕೋಮುವಾದವನ್ನು ಪ್ರತಿಪಾದಿಸುವ ಎನ್‌ಇಪಿ 2020ಗೆ ತನ್ನ ತೀವ್ರ ವಿರೋಧವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿತು. ಪರೀಕ್ಷಾ ವ್ಯವಸ್ಥೆಯ ಕೇಂದ್ರೀಕರಣವು ಈ ಭರದ ಪ್ರಯತ್ನದ ಅಭಿನ್ನ ಭಾಗವಾಗಿದೆ. ವ್ಯಾಪಂ ಹಗರಣದಂತೆ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸುವುದು ಇದನ್ನು ಮರೆಗೆ ತಳ್ಳುವ ಯತ್ನ ಎಂಬುದು ಕೇಂದ್ರ ಸಮಿತಿಯ ದೃಢವಾದ ಅಭಿಪ್ರಾಯವಾಗಿದೆ.

ಕೇಂದ್ರ ಶಿಕ್ಷಣ ಸಚಿವರು ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕನ್ನು ಕಳೆದುಕೊಂಡಿದ್ದು, ಕೂಡಲೇ ರಾಜೀನಾಮೆ ಸಲ್ಲಿಸಬೇಕು. ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯನ್ನು ರದ್ದುಗೊಳಿಸುವುದು, ಎನ್‌ಟಿಎಯನ್ನು ವಿಸರ್ಜಿಸುವುದು ಮತ್ತು ಶಿಕ್ಷಣ ವ್ಯವಸ್ಥೆಯ ಕೇಂದ್ರೀಕರಣದ ಎಲ್ಲಾ ಉಪಕ್ರಮಗಳನ್ನು ರದ್ದುಗೊಳಿಸಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಕ್ರಿಮಿನಲ್ ಕಾನೂನುಗಳನ್ನು ಜಾರಿಗೊಳಿಸಬಾರದು

ಜುಲೈ 1, 2024 ರಿಂದ ಹೊಸ ಕ್ರಿಮಿನಲ್ ಕಾನೂನುಗಳನ್ನು ಜಾರಿಗೆ ತರಲು ಮೋದಿ ಸರ್ಕಾರ ಪಟ್ಟು ಹಿಡಿದಿರುವುದಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿಯು ತನ್ನ ತೀವ್ರ ವಿರೋಧವನ್ನು ವ್ಯಕ್ತಪಡಿಸಿತು.

ತರಾತುರಿಯಲ್ಲಿ, ಚರ್ಚೆಯಿಲ್ಲದೆ, ನಿರಂಕುಶ ವಾಗಿ ಮತ್ತು ಪ್ರಜಾಪ್ರಭುತ್ವ ವಿರೋಧಿ ರೀತಿಯಲ್ಲಿ, ಸಂಸತ್ತಿನಿಂದ ಹೆಚ್ಚಿನ ಸಂಖ್ಯೆಯ ವಿರೋಧ ಪಕ್ಷದ ಸಂಸದರನ್ನು ಅಮಾನತುಗೊಳಿಸಿದಾಗ ಪಾಸು ಮಾಡಿಸಿಕೊಂಡ ಈ ಕಾನೂನುಗಳು ಸ್ವಭಾವತಃ ಕರಾಳ ಕಾನೂನುಗಳು.

ಪುಟ 12 ಕ್ಕೆ

ಹತ್ರಾಸ್ ನಲ್ಲಿ ಕಾಲ್ತುಳಿತದಿಂದ 121 ಜನರ ಬಲಿ: ಮೂಢನಂಬಿಕೆಗೆ ಕೊನೆಯೇ ಇಲ್ಲವೇ?





ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಸತ್ಸಂಗ ಸಭೆಯಲ್ಲಿ ಕಾಲ್ತುಳಿತಕ್ಕೆ ಸಿಲುಕಿ 121 ಅಮಾಯಕರ ಜೀವಗಳು ಬಹಳ ಸುಲಭವಾಗಿ ಬಲಿಯಾದವು. ಏನಿದು ವಿಕೃತಿ! ಮೂಢನಂಬಿಕೆಗೆ ಕೊನೆಯೇ ಇಲ್ಲವೇ? ಪಾದದ ದೂಳಿನಿಂದ ಭಕ್ತರ ಸಕಲ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂದು ವ್ಯಾಪಕ ಪ್ರಚಾರ ಮಾಡಿದ ಸ್ವಯಂ ಘೋಷಿತ ದೇವದೂತ ಬೋಲೆ ಬಾಬಾ ಈ ಘೋರಘಟನೆಯ ಕೇಂದ್ರಬಿಂದು. ಲಕ್ಷಾಂತರ ಜನರು ಸೇರುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದ ಸ್ಥಳೀಯ ಆಡಳಿತದ ನಿಷ್ಕ್ರಿಯತೆ, ಬಾಬಾ ನೊಡನೆ ಇರುವ ರಾಜಕಾರಣಿಗಳ ನಂಟು, ಅಜ್ಞಾನದ ಕುರುಡು ನಂಬಿಕೆಗಳನ್ನು ಹೋಗಲಾಡಿಸಲು ಆಳುವವರು ಯಾವುದೇ ಪ್ರಯತ್ನ ಮಾಡದಿರುವುದು, ಸ್ವಾರ್ಥಕ್ಕಾಗಿ ಅವುಗಳನ್ನು ದಟ್ಟವಾಗಿ ಪೋಷಿಸಲು ಪ್ರಯತ್ನಿಸುತ್ತಿರುವುದು? ಇವೆಲ್ಲವೂ ಅಮಾಯಕ ಜನರ ಜೀವಗಳು ಬಲಿಯಾಗಲು ಕಾರಣ.

ಏನಿದು ವಿಕೃತಿ! ಮೂಢನಂಬಿಕೆಗೆ ಕೊನೆಯಿಲ್ಲವೇ? ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಸತ್ಸಂಗ ಸಭೆಯಲ್ಲಿ ಕಾಲ್ತುಳಿತದಿಂದ 121 ಅಮಾಯಕ ಜೀವಗಳು ಬಹಳ ಸುಲಭವಾಗಿ ಬಲಿಯಾದವು. ಆಡಳಿತಗಾರರು ಎಂದಿನಂತೆ ಭೀಕರ ದುರಂತಕ್ಕೆ ಸಂತಾಪ ಸೂಚಿಸುವುದು, ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸುವುದು, ಸಂಬಂಧಿಕರಿಗೆ ಸಾಂತ್ವನ ಹೇಳುವುದನ್ನು ಮಾಡುತ್ತಿದ್ದಾರೆ. ಒಂದಷ್ಟು ಹಣದ ರೂಪದ ಪರಿಹಾರವನ್ನೂ ಘೋಷಿಸಿದ್ದಾರೆ. ಘಟನೆಯ ಬಗ್ಗೆ ತನಿಖೆಗೂ ಆದೇಶಿಸಲಾಗಿದೆ. ಕೆಲವರನ್ನು ಬಂಧಿಸಲಾಗಿದೆ. ಆದರೆ, ಜನರು ಮೌಢ್ಯತೆಗೆ ಒಳಗಾಗದಂತೆ ಪ್ರಭುತ್ವ ಯಾವ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬ ಪ್ರಶ್ನೆಗೆ ಉತ್ತರ 'ಇಲ್ಲ' ಎಂಬುದಾಗಿದೆ.

ಈ ದುರ್ಘಟನೆಗೆ ಮೊದಲನೆಯ ಕಾರಣ ಈ ಭೋಲೆ ಬಾಬಾ ಕಡೆಯವರು ಮಾಡಿದ ಸುಳ್ಳು ಪ್ರಚಾರ ಮತ್ತು ಈ ಪ್ರಚಾರವನ್ನು ಮುಗ್ಧ ಭಕ್ತರು ನಿಜವೆಂದೇ ನಂಬಿದ್ದು. ಪಾದದ ದೂಳಿನಿಂದ ಭಕ್ತರ ಸಕಲ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂದು ವ್ಯಾಪಕ ಪ್ರಚಾರ ಮಾಡಿದ ಸ್ವಯಂ ಘೋಷಿತ ದೇವದೂತ ನಾರಾಯಣ ಸಾಕಾರ್ ಹರಿ ಅಲಿಯಾಸ್ ಬೋಲೆ ಬಾಬಾ ಈ ಘೋರಘಟನೆಯ ಕೇಂದ್ರಬಿಂದು. ಅವರ ನಿಜವಾದ ಹೆಸರು ಸೂರಜ್ ಪಾಲ್ ಸಿಂಗ್. ಆಧ್ಯಾತ್ಮಿಕ ಗುರುವಾಗಿ ಅವತರಿಸುವ ಮೊದಲು ಉತ್ತರಪ್ರದೇಶದ ಪೊಲೀಸರ ಸ್ಥಳೀಯ ಗುಪ್ತಚರ ವಿಭಾಗದಲ್ಲಿ ಸಾಮಾನ್ಯ ಕಾನ್ಸ್ಟೇಬಲ್ ಆಗಿದ್ದರು. ಆ ಸಮಯದಲ್ಲಿ ಅವರ ಮೇಲೆ ಅನೇಕ ದುಷ್ಕೃತ್ಯದ ಪ್ರಕರಣಗಳ ಆರೋಪವಿದೆ. ಲೈಂಗಿಕ ದೌರ್ಜನ್ಯದ ಅಪರಾಧ ಎಸಗಿದವರು. ಈ ಕಾರಣದಿಂದ ಅವರನ್ನು ಹುದ್ದೆಯಿಂದ ಅಮಾನತುಗೊಳಿಸಲಾಯಿತು, ಆದರೆ ಜಾಮೀನಿನ ಮೇಲೆ ಬಿಡುಗಡೆಗೊಂಡ ಅವರು 1990ರಲ್ಲಿ ಸ್ವಯಂಪ್ರೇರಿತ ನಿವೃತ್ತಿಯನ್ನು ಆರಿಸಿಕೊಂಡರು. ನಂತರ ತನ್ನನ್ನು ತಾನು 'ದೇವಮಾನವ' ಎಂದು ಹೇಳಿಕೊಂಡರು. ಅವರು ಮಾರ್ಕೆಟಿಂಗ್ ಮಾದರಿಯಲ್ಲಿ ಕೆಲಸ ಮಾಡಿ ತನ್ನ ಭಕ್ತರ ಸಂಖ್ಯೆಯನ್ನು ಹೆಚ್ಚಿಸಿಕೊಂಡರು. ಅವರ ಛಾಯಾಚಿತ್ರಗಳು ರೋಗನಿರೋಧಕ ಗುಣಗಳನ್ನು ಹೊಂದಿವೆ ಎಂಬ ಸಂದೇಶವನ್ನು ಬಾಬಾ ಅವರ ಬೆಂಬಲಿಗರು ವ್ಯಾಪಕವಾಗಿ ಹರಡಿದರು.

ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ದೆಹಲಿ, ಹರಿಯಾಣ ಮತ್ತು ಇತರ ಉತ್ತರದ ರಾಜ್ಯಗಳಲ್ಲಿ ಈ ಬಾಬಾ ಅದ್ಭುತವಾದ ನೆಟ್ವರ್ಕ್ ಹೊಂದಿದ್ದಾರೆ ಎಂದು ವರದಿಗಳು ಹೇಳುತ್ತದೆ. ಲಕ್ಷಾಂತರ ಭಕ್ತರ ದಂಡು ಹರಿದು ಬರಲು ಈ ಜಾಲವೇ ಕಾರಣ. ಹಿಂದೊಮ್ಮೆ, ಸತ್ತ ಮಕ್ಕಳನ್ನು ಬದುಕಿಸುತ್ತೇನೆ ಎಂದೂ ಕೂಡಾ ಈ ಬಾಬಾ ಹೇಳಿದ್ದಾನೆ.

ಎಫ್ಐಆರ್ ನಲ್ಲಿ ಬಾಬಾ ಹೆಸರಿಲ್ಲವೇಕೆ?

ನಿಜವಾಗಿಯೂ ಆ ಬಾಬಾ ದೇವದೂತನೇ ಹಾಗಿದ್ದರೆ, ಘಟನೆಯ ನಂತರ ಓಡಿಹೋಗಿ ತಲೆಮರೆಸಿಕೊಂಡಿದ್ದೇಕೆ? ಈ ಘಟನೆಯ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಘರ್ಜಿಸುತ್ತಿದ್ದಾರೆ. ಹಾಗಾದರೆ ಎಫ್ಐಆರ್ನಲ್ಲಿ ಬಾಬಾ ಹೆಸರನ್ನು ಏಕೆ ನಮೂದಿಸಿಲ್ಲ? ಇದರಲ್ಲಿ ಏನಾದರೂ ಕಪಟ ನಾಟಕವಿದೆಯೇ? ಎಂಬ ಅನುಮಾನಗಳು ಸಹಜವಾಗಿ ಬರುತ್ತಿವೆ.

ಸ್ಥಳೀಯ ಆಡಳಿತದ ಗಮನಕ್ಕೂ ಬರಲಿಲ್ಲವೆ!!

ಇದು ಜಿಲ್ಲಾ ಅಧಿಕಾರಿಗಳಿಂದ ಅನುಮತಿ ಕೋರಿದ ನಿರುಪದ್ರವ ಅರ್ಜಿಯೊಂದಿಗೆ ಪ್ರಾರಂಭವಾಯಿತು. ಸುಮಾರು 80,000 ಭಕ್ತರು ಸತ್ಸಂಗ ಸಭೆಗೆ ಹಾಜರಾಗುವ ನಿರೀಕ್ಷೆಯಿತ್ತು. ಅಧಿಕಾರಿಗಳು ಇದನ್ನು ವಾಡಿಕೆಯ ಕಾರ್ಯವಿಧಾನವಾಗಿ ಅನುಮೋದಿಸಿದರು. ಈ ಸತ್ಸಂಗ ಸಭೆಗೆ 80 ಸಾವಿರ ಮಂದಿಗೆ ಅವಕಾಶ ನೀಡಿದರೆ, ಎರಡೂವರೆ ಲಕ್ಷ ಜನ ಹೇಗೆ ಬಂದರು? ಸರಿಯಾದ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳಿಲ್ಲದ ಆ ವ್ಯವಸ್ಥೆ ಎಂಥದು? ಈ ಘಟನೆ ಅಲ್ಲಿನ ಆಡಳಿತದ ನಿಷ್ಕ್ರಿಯತೆಯನ್ನು ಎತ್ತಿ ತೋರಿಸುತ್ತದೆ. ಅಂತಹ ಸಭೆಗಳಲ್ಲಿ ಜನಸಂದಣಿಯು ನಿರೀಕ್ಷಿಸಿದ ಸಂಖ್ಯೆಗಳನ್ನು ಮೀರಿ ಹೇಗೆ ವೃದ್ಧಿಸಿಕೊಳ್ಳುತ್ತದೆ ಎಂಬುದನ್ನು ಆಡಳಿತವು ಮೊದಲೇ ಮನಗಾಣಬೇಕಿತ್ತು. ಭೋಲೆ ಬಾಬಾ ಅವರ ಅನುಮೋದಿತ ಭಕ್ತರ ಸಂಖ್ಯೆಯ ಮೂರು ಪಟ್ಟು ಹೆಚ್ಚು ಸೇರಿದ್ದರು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ ಎಂದು ಸ್ಥಳೀಯ ಆಡಳಿತವೂ ನಿರೀಕ್ಷಿಸಿರಲಿಲ್ಲ ಅಥವಾ ಜನರು ಸೇರುವಾಗಲೂ ಆಡಳಿತದ ಗಮನಕ್ಕೂ ಬರಲಿಲ್ಲ ಎಂದರೆ ನಂಬಲಾಗದು.

2,50,000 ಜನಸಮೂಹವು ಒಮ್ಮೆಗೆ ಮೇಲಿನಿಂದ ಇಳಿಯುವುದಿಲ್ಲ. ಇವರು ರಸ್ತೆಗಳ ಮೂಲಕವೇ ಸತ್ಸಂಗ ಸಭೆಗೆ ಬಂದಿದ್ದರು. ದೂರದ ಊರುಗಳಿಂದ, ಹೊರ ರಾಜ್ಯಗಳಿಂದ ಜನರು ತಂಡೋಪ ತಂಡವಾಗಿ ಬಂದಿರುತ್ತಾರೆ. ಇಷ್ಟು ದೊಡ್ಡ ಸಂಖ್ಯೆಯ ಜನರು ಒಂದಡೆ ಸೇರುವ ಸಂದರ್ಭದಲ್ಲಿಯೂ ಸುಮಾರು ಏಳ ರಿಂದ ಎಂಟು ಗಂಟೆಗಳ ಸಮಯ ತೆಗೆದುಕೊಳ್ಳುತ್ತದೆ. ಹೆಚ್ಚು ಸ್ಥಳವು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದೆ. ಭಕ್ತರ ಒಳಹರಿವಿನಿಂದ ಉಂಟಾಗುವ ಟ್ರಾಫಿಕ್ ಜಾಮ್‌ಗಳ ಸುದ್ದಿಯನ್ನು ನಗರ ಮತ್ತು ಜಿಲ್ಲಾ ನಿಯಂತ್ರಣ ಕೊಠಡಿಗೆ ಪ್ರಸಾರ ಮಾಡುವ ಸಾಧ್ಯತೆಯಿದೆ. ಇಂತಹ ಸಂದರ್ಭಗಳಲ್ಲಿ ತುರ್ತು ಯೋಜನೆ ಕಡ್ಡಾಯವಾಗಿತ್ತು, ಆದರೆ ಸ್ಥಳೀಯ ಆಡಳಿತ ಯಾವುದನ್ನೂ ಮಾಡಲಿಲ್ಲ ಎಂಬುದು ಸ್ಪಷ್ಟವಾಗಿದೆ.

ಸಂವಿಧಾನದ 51–ಎ ವಿಧಿಯಲ್ಲಿ?

ಮನುಷ್ಯನು ಶಾಶ್ವತ ಅನ್ವೇಷಕ, ಸತ್ಯದ ಅನ್ವೇಷಕ. ಪುರೋಹಿತರು ಮತ್ತು ರಾಜರಿಂದ ಅನೇಕ ವಿಜ್ಞಾನಿಗಳು ಹುತಾತ್ಮರಾಗಿದ್ದರೂ, ವಿಜ್ಞಾನವು ಗೆದ್ದಿದೆ. ಆದರೆ, ವೈಜ್ಞಾನಿಕ ವಿಚಾರಗಳನ್ನು ಜನಸಾಮಾನ್ಯರಿಂದ ದೂರವಿಡುವ ಷಡ್ಯಂತ್ರವು ಕಾಲಕಾಲಕ್ಕೆ ಹೊಸ ರೂಪಗಳಲ್ಲಿ ಹೊರಹೊಮ್ಮುತ್ತಲೇ ಇದೆ. ಭಾರತದ ಸಂವಿಧಾನದ 51–ಎ ವಿಧಿಯಲ್ಲಿ 'ವೈಜ್ಞಾನಿಕ ದೃಷ್ಟಿಕೋನ ಮತ್ತು ವೈಜ್ಞಾನಿಕ ವಿಷಯಗಳನ್ನು ಅಭಿವೃದ್ಧಿಪಡಿಸಬೇಕು ಮತ್ತು ಯಾವಾಗಲೂ ಜನರ ಅಭಿವೃದ್ಧಿಗೆ ಶ್ರಮಿಸಬೇಕು' ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಸಮಾಜದಲ್ಲಿ ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಂಡರೆ ಮಾತ್ರ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂದು ಸಲಹೆ ನೀಡಿದೆ. ಆದರೆ, ದೇಶದಲ್ಲಿ ಬೇರೊಂದು ಸಿದ್ಧಾಂತ ಬೇರೂರಿದೆ. ಜಗತ್ತು ತಾಂತ್ರಿಕವಾಗಿ ಮುನ್ನಡೆಯುತ್ತಿದ್ದರೂ, ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಕ್ಷೇತ್ರಗಳಲ್ಲಿ ಹಲವಾರು ಬದಲಾವಣೆಗಳಾಗಿದ್ದರೂ, ಸತ್ತವರು ತಮ್ಮ ಸಮಾಧಿಯಿಂದ ಎಚ್ಚೆತ್ತುಕೊಂಡು ಸನಾತನ ಧರ್ಮ ಮತ್ತು ಅಂಧ ಧಾರ್ಮಿಕ ನಂಬಿಕೆಯ ಹೆಸರಿನಲ್ಲಿ ಕಾಯಕಲ್ಪ ಚಿಕಿತ್ಸೆಯಿಂದ ಹಳತಾದ ವೈದಿಕ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಗಗನಯಾತ್ರಿಗಳು ಚಂದ್ರನ ಮೇಲೆ ಕಾಲಿಡುತ್ತಿದ್ದಾರೆ. ಚಂದ್ರನಲ್ಲಿಗೆ ಹೋಗಿ ಬರುತ್ತಿದ್ದಾರೆ. ಅಲ್ಲಿನ ಮಣ್ಣನ್ನೂ ತರುತ್ತಿದ್ದಾರೆ. ಆದರೆ, ಬಾಬಾ, ಸ್ವಾಮೀಜಿಗಳ ಪಾದಧೂಳಿಗಾಗಿ ಲಕ್ಷಾಂತರ ಜನ ಸಾಲುಗಟ್ಟಿ ನಿಲ್ಲುವುದು ದುರಂತ!

ಧಾರ್ಮಿಕ ಮತಾಂಧತೆಯನ್ನು ಹೆಚ್ಚಿಸುತ್ತಿದ್ದಾರೆ

ಜನರಲ್ಲಿ ವೈಜ್ಞಾನಿಕ ದೃಷ್ಟಿಕೋನವನ್ನು ಹೆಚ್ಚಿಸಿ ಎಂದು ಸಂವಿಧಾನ ಹೇಳಿದರೆ, ಆಡಳಿತಗಾರರು ಧಾರ್ಮಿಕ ಮತಾಂಧತೆಯನ್ನು ಹೆಚ್ಚಿಸುತ್ತಿದ್ದಾರೆ. ಇತ್ತೀಚೆಗೆ ಈ ಮೂಢನಂಬಿಕೆ ಉತ್ತುಂಗಕ್ಕೇರಿದೆ. ನಾನೇ ದೇಶದ ನಿಜವಾದ ಮುಖ್ಯಸ್ಥ ಎಂದು ಹಬ್ಬಿಸಿದರೆ, ಅದೇ ರೀತಿ ಬಾಬಾಗಳು, ಸ್ವಾಮೀಜಿಗಳು ಹುಟ್ಟಿಕೊಳ್ಳುತ್ತಿದ್ದಾರೆ. ತಾವು ದೇವರ ಪ್ರತಿನಿಧಿಗಳು ಎಂದು ಹೇಳಿಕೊಳ್ಳುತ್ತಾರೆ. ಹೊಸ ದೀಕ್ಷೆಗಳು, ಸತ್ಸಂಗಗಳು, ಪವಾಡ ರಾತ್ರಿಗಳು ಮತ್ತು ಆಚರಣೆಗಳು ಬರುತ್ತಿವೆ. ಬರಗಾಲದಿಂದ ಹಳ್ಳಿಗಳಲ್ಲಿ ಜಾನುವಾರುಗಳಿಗೆ ಮೇವು, ಜನರಿಗೆ ಆಹಾರ ಸಿಗದೆ ಜನ ಪರದಾಡುತ್ತಿದ್ದಾರೆ. ನಮ್ಮ ಸ್ಥಾನ ನಿರುದ್ಯೋಗ, ಹಸಿವು ಮತ್ತು ಬಡತನ ನಿವಾರಣೆ ವಿಷಯದಲ್ಲಿ ತಳದಲ್ಲಿದೆ. ಕಿಲೋಮೀಟರ್ ದೂರದಿಂದ ಕುಡಿಯುವ ನೀರನ್ನೂ ತರುವ ದುರದೃಷ್ಟ ನಮ್ಮದು. ಇದೇ ಸಂದರ್ಭದಲ್ಲಿ ಈ ಸ್ವಾಮೀಜಿಗಳು, ಬಾಬಾಗಳು, ಪೀಠಾಧಿಪತಿಗಳು ಜನರ ಧಾರ್ಮಿಕ ನಂಬಿಕೆಯನ್ನು ಆಸರೆಯಾಗಿಟ್ಟುಕೊಂಡು ಕಳ್ಳರನ್ನು, ದರೋಡೆಕೋರರನ್ನು ಶಿಷ್ಯರನ್ನಾಗಿಸಿ ಜೇಬು ತುಂಬಿಸಿಕೊಳ್ಳುತ್ತಿದ್ದಾರೆ.

ಮೌಲ್ಯ, ಸಿದ್ಧಾಂತ, ಮಾನವೀಯ ಚಿಂತನೆ ಮತ್ತು ಬದ್ಧತೆ ಇಲ್ಲದ ರಾಜಕಾರಣವನ್ನು ನಾವು ನೋಡುತ್ತಿದ್ದೇವೆ. ಸೇವೆ, ತ್ಯಾಗ, ಪ್ರಾಮಾಣಿಕತೆ ಇತ್ಯಾದಿ ಗುಣಗಳೆಲ್ಲ ಮಾಯವಾಗಿ ಸ್ವಾರ್ಥ, ವೈಯಕ್ತಿಕ ಹಿತಾಸಕ್ತಿಗಳೇ ರಾಜಕೀಯವಾಗಿ ಮುಂದೆ ಬಂದಿವೆ. ಮೂಢನಂಬಿಕೆಗಳ ಬಗ್ಗೆ ಬಹಳಷ್ಟು ರಾಜಕೀಯ ಪಕ್ಷಗಳು ಅತ್ಯಂತ ತಾತ್ಸಾರ ಮಾಡಿವೆ ಎಂಬುದನ್ನು ಈ ಬೆಳವಣಿಗೆಗಳು ಸ್ಪಷ್ಟಪಡಿಸುತ್ತವೆ. ಅಜ್ಞಾನದ ಕುರುಡು ನಂಬಿಕೆಗಳನ್ನು ಹೋಗಲಾಡಿಸಲು ಯಾವುದೇ ಪ್ರಯತ್ನ ಮಾಡದಿರುವುದು, ಸ್ವಾರ್ಥಕ್ಕಾಗಿ ಅವುಗಳನ್ನು ದಟ್ಟವಾಗಿ ಪೋಷಿಸಲು ಪ್ರಯತ್ನಿಸುತ್ತಿರುವುದು ದೊಡ್ಡ ದುರಂತ.

ಮನುಷ್ಯನ ಮುಗ್ಧತೆ ಮತ್ತು ಧಾರ್ಮಿಕ ನಂಬಿಕೆಗಳನ್ನೇ ಬಂಡವಾಳ ಮಾಡಿಕೊಳ್ಳುವ ದೇವಬಾಬಾಗಳು, ಭೋಲೆಬಾಬಾಗಳು ಮತ್ತು ಸ್ವಾಮೀಜಿಗಳು ಪ್ರತಿ ಹಳ್ಳಿ ಮತ್ತು ನಗರಗಳಲ್ಲಿ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. ಇದೆಲ್ಲವೂ ಮುಗ್ಧ ಭಕ್ತರ ದೌರ್ಬಲ್ಯ ಮತ್ತು ಪ್ರಾಣದೊಂದಿಗೆ ಆಡುವ ಚೆಲ್ಲಾಟಗಳಾಗಿವೆ. ಜನರ ಕುರಿತು ರಾಜಕೀಯ ಚಿತ್ತಶುದ್ಧಿ ಮತ್ತು ವಿಜ್ಞಾನದ ಕೊರತೆ ಇದ್ದಾಗ ಈ ಅವಘಡಗಳು ಇದೇ ರೀತಿ ಸಂಭವಿಸುತ್ತವೆ.

ಸರ್ಕಾರಗಳು ಮತ್ತು ಪ್ರಗತಿಪರರು ನಮ್ಮ ಸಂವಿಧಾನ ನೀಡಿರುವ ಸ್ಫೂರ್ತಿಯೊಂದಿಗೆ ಸಮಾಜವನ್ನು ಜಾಗೃತಗೊಳಿಸಬೇಕು. ಮನೆಯಲ್ಲಿ ಪ್ರಾಥಮಿಕ ಹಂತದಿಂದಲೇ ಪೋಷಕರು ಹಾಗೂ ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಬೇಕು. ಪ್ರಶ್ನಿಸುವುದು ಹೆಚ್ಚಾಗಬೇಕು. ಅಜ್ಞಾನವನ್ನು ಹೆಚ್ಚಿಸುವ ಮತ್ತು ದ್ವೇಷವನ್ನು ಹುಟ್ಟುಹಾಕುವ ಶಕ್ತಿಗಳ ಬಗ್ಗೆ ಜನರು ಎಚ್ಚರದಿಂದಿರಬೇಕು.

–ಸಿಜಿ

‘ವಿಕಸಿತ’ ಭಾರತದಲ್ಲಿ ಎರಡೇ ವಾರಗಳಲ್ಲಿ 14 ‘ಕುಸಿತ’ಗಳು!

ಕಳೆದ ಎರಡು ವಾರಗಳಲ್ಲಿ ದೇಶದ ಮೂರು ವಿಮಾನ ನಿಲ್ದಾಣಗಳ ಮೇಲ್ಛಾವಣಿಗಳು ಮತ್ತು ಬಿಹಾರದ 10 ಹೊಸ ಮತ್ತು ನಿರ್ಮಾಣ ಹಂತದಲ್ಲಿರುವ ಸೇತುವೆಗಳು ಮುರಿದು ಬಿದ್ದ ಸುದ್ದಿಗಳು ಬಂದಿವೆ. ಜತೆಗೆ 18ನೇ ಲೋಕಸಭಾ ಚುನಾವಣಾ ಪ್ರಚಾರ ಆರಂಭವಾಗುವ ಸ್ವಲ್ಪವೇ ಮೊದಲು ಉದ್ಘಾಟಿಸಲ್ಪಟ್ಟ ಶ್ರೀರಾಮ ಮಂದಿರಕ್ಕೆ ಹೋಗುವ, ಹೊಸದಾಗಿ ನಿರ್ಮಿಸಲ್ಪಟ್ಟ ‘ರಾಮಪಥ’ ಮತ್ತು ಸುತ್ತಲಿನ ಪ್ರದೇಶ ಮೊದಲ ಮಳೆಯಲ್ಲೇ ಜಲಾವೃತ್ತವಾಗಿ, ರಾಮಪಥ ಹಲವೆಡೆಗಳಲ್ಲಿ ಕುಸಿದು ಬಿದ್ದಿದೆ ಎಂದು ವರದಿಯಾಗಿದೆ. ಇದಕ್ಕೆ ಕಾರಣ ವಿಪರೀತ ಮಳೆ ಎಂದು ಸರಕಾರ ಹೇಳಿಕೊಂಡಿದೆ.

ಎನ್‌ಡಿಎ–3 ಸರಕಾರ ರಚನೆಗೊಂಡ ಕೆಲವೇ ದಿನಗಳಲ್ಲಿ ಈ ಸುದ್ದಿಗಳು ಬರುತ್ತಿರುವುದು ಮತ್ತು ಇವೆಲ್ಲವೂ ಬಿಜೆಪಿ/ಎನ್‌ಡಿಎ ಆಳ್ವಿಕೆಯುಲ್ಲಿನ ಪ್ರದೇಶಗಳಲ್ಲಿ ಸಂಭವಿಸಿರುವುದು ಕೇವಲ ಕಾಕತಾಳೀಯವೇ? ಇವು ಕೇವಲ ವಿಪರೀತ ಮಳೆಯ ಪರಿಣಾಮಗಳಷ್ಟೆಯೇ ಎಂಬ ಪ್ರಶ್ನೆಗಳು ಎದ್ದಿವೆ. ಈ ಮೂಲರಚನೆಗಳ, ಅದರಲ್ಲೂ ವಿಮಾನ ನಿಲ್ದಾಣಗಳ ಹಿನ್ನೆಲೆಗಳನ್ನು ನೆನಪಿಸಿಕೊಂಡರೆ ಈ ಪ್ರಶ್ನೆಗಳು ಅಪ್ರಸ್ತುತವೇನಲ್ಲ ಎಂದು ಕಾಣಬರುತ್ತದೆ.

ಮಾರ್ಚ್10 ರಂದು ಒಕ್ಕೂಟ ಸರಕಾರದ ಪ್ರೆಸ್ ಇನ್‌ಫಾರ್ಮೇಶನ್ ಬ್ಯುರೊ ಪ್ರಕಟಿಸಿದ ಈ ಸುದ್ದಿಯನ್ನು ನೋಡಿ: “ಪ್ರಧಾನ ಮಂತ್ರಿಗಳು ದೇಶಾದ್ಯಂತ 9800 ಕೋಟಿ ರೂ.ಗಳ 15 ವಿಮಾನ ನಿಲ್ದಾಣಗಳ ಶಂಕುಸ್ಥಾಪನೆ ನಡೆಸಿದರು. ಅವರು ಪುಣೆ, ಕೊಲ್ಹಾಪುರ, ಗ್ವಾಲಿಯರ್, ಜಬಲ್‌ಪುರ, ದಿಲ್ಲಿ, ಲಕ್ನೌ, ಅಲಿಘಡ್, ಆಜಂಗಡ್, ಚಿತ್ರಕೂಟ್, ಮೊರಾದಾಬಾದ್, ಶ್ರಾವಸ್ತಿ ಮತ್ತು ಆದಂಪುರ ವಿಮಾನ ನಿಲ್ದಾಣಗಳಲ್ಲಿ ಹೊಸ ಟರ್ಮಿನಲ್ ಕಟ್ಟಡಗಳನ್ನು ಉದ್ಘಾಟಿಸಿದರು. ಕಡಪಾ, ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳ ಹೊಸ ಟರ್ಮಿನಲ್ ಕಟ್ಟಡಗಳ ಶಂಕುಸ್ಥಾಪನೆ ನಡೆಸಿದರು. ವಿಮಾನ ನಿಲ್ದಾಣಗಳನ್ನು ಎಷ್ಟು ವೇಗವಾಗಿ ಕಟ್ಟಲಾಗಿದೆ ಎಂಬುದಕ್ಕೆ ಉದಾಹರಣೆಯಾಗಿ ಅವರು ಗ್ವಾಲಿಯರ್ ಟರ್ಮಿನಲನ್ನು ಕೇವಲ 16 ತಿಂಗಳಲ್ಲಿ ಪೂರ್ಣಗೊಳಿಸಲಾಯಿತು ಎಂದರು. ಈ ಮುತುವರ್ಜಿ ವಿಮಾನ ಪ್ರಯಾಣವನ್ನು ಸುಲಭಗೊಳಿಸಿದೆ ಮತ್ತು ದೇಶದ ಸಾಮಾನ್ಯ ಜನರ ಕೈಗೆಟಕುವಂತೆ ಮಾಡುತ್ತವೆ ಎಂದು ಅವರು ಹೇಳಿದರು. ಪ್ರಕಟಿತ ಪ್ರಾಜೆಕ್ಟುಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಿರುವ ಸರಕಾರದ ದಾಖಲೆ ಇವೆಲ್ಲ ಚುನಾವಣಾ ಗಿಮಿಕ್‌ಗಳು ಎಂಬ ಆರೋಪಗಳನ್ನು ನಿರಾಕರಿಸುತ್ತವೆ ಎಂದು ಅವರು ಒತ್ತಿ ಹೇಳಿದರು. ‘ಮೋದಿ ಸಂಪೂರ್ಣವಾಗಿ ಬೇರೆಯೇ ತರಹದವರು ಎಂಬುದನ್ನು ಜನ ಕಾಣುತ್ತಿದ್ದಾರೆ. ನಾನು ಒಂದು ವಿಕಸಿತ ಭಾರತವನ್ನು ನಿರ್ಮಿಸಲು ದಣಿವಿಲ್ಲದೆ ದುಡಿಯುತ್ತಿದ್ದೇನೆ’ ಎಂದು ಹೇಳಿದರು”!

ಜೂನ್ 28ರ ಮುಂಜಾವಿನಲ್ಲಿ ದಿಲ್ಲಿ ವಿಮಾನ ನಿಲ್ದಾಣದ ಟರ್ಮಿನಲ್ 1ರ ಮೇಲ್ಛಾವಣಿ ಕುಸಿದು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಕಾದಿದ್ದ ಟ್ಯಾಕ್ಸಿಯ ಚಾಲಕ ತನ್ನ ಕಾರಿನಲ್ಲೇ ಸಾವನ್ನಪ್ಪಿದರು, ಏಳೆಂಟು ಮಂದಿ ತೀವ್ರವಾಗಿ ಗಾಯಗೊಂಡರು. ಇದಕ್ಕೆ ಸ್ವಲ್ಪವೇ ಮೊದಲು ಜಬಲ್‌ಪುರ ವಿಮಾನ ನಿಲ್ದಾಣದಲ್ಲೂ ಟರ್ಮಿನಲ್ ಮೇಲ್ಛಾವಣಿ ಕುಸಿದು ಬಿದ್ದ ವರದಿ ಬಂದಿತ್ತು. ನಂತರ ಗುಜರಾತಿನ ರಾಜಕೋಟ್ ವಿಮಾನ ನಿಲ್ದಾಣದ ಹೊರಗಿರುವ ಪ್ರಯಾಣಿಕರನ್ನು ಇಳಿಸುವ, ಹತ್ತಿಸಿಕೊಳ್ಳುವ ಜಾಗದಲ್ಲಿನ ಮೇಲ್ಛಾವಣಿ ಕುಸಿದ ಸುದ್ದಿಯೂ ಬಂದಿದೆ. ಈ ಮೂರೂ ವಿಮಾನ ನಿಲ್ದಾಣಗಳೂ ಮಾರ್ಚ್ 10ರ ಪ್ರಧಾನಿಗಳ ಉದ್ಘಾಟನೆಯ ಪಟ್ಟಿಯಲ್ಲಿದ್ದಂತವುಗಳು ಎಂಬುದನ್ನು ಗಮನಿಸಬಹುದು.

ದಿಲ್ಲಿಯ ಟರ್ಮಿನಲ್ 1ರಲ್ಲಿ ಮೇಲ್ಛಾವಣಿ ಕುಸಿದ ಭಾಗ ಪ್ರಧಾನಿಗಳು ಉದ್ಘಾಟಿಸಿದ ಭಾಗಕ್ಕೆ ಸೇರಿದ್ದಲ್ಲ, ಅದರ ಎದುರಿರುವಂತದ್ದು, 2008ರಲ್ಲಿ ನಿರ್ಮಿಸಲ್ಪಟ್ಟದು, ಸದ್ಯದಲ್ಲೇ ಅದನ್ನು ದುರಸ್ತಿ ಮಾಡುವ ಯೋಜನೆಯಿತ್ತು ಎಂದು ವಿಮಾನಯಾನ ಮಂತ್ರಿಗಳು ಧಾವಿಸಿ ಬಂದು ಸ್ಪಷ್ಟೀಕರಣ ನೀಡಿದರು. ಆದರೆ ಅವರು ಇದಕ್ಕೆ ಹಿಂದಿನ ಯುಪಿಎ ಸರಕಾರ ಹೊಣೆ ಎನ್ನುವಂತೆಯೂ ಇರಲಿಲ್ಲ. ಏಕೆಂದರೆ, ಆಗ ವಿಮಾನಯಾನ ಮಂತ್ರಿಯಾಗಿದ್ದವರು (ಪ್ರಫುಲ್ ಪಟೇಲ್) ಈಗ ಬಿಜೆಪಿಗೆ ಪಕ್ಷಾಂತರಗೊಂಡು ರಾಜ್ಯಸಭಾ ಸದಸ್ಯ ಸ್ಥಾನ ಪಡೆದಿದ್ದಾರೆ. ಅವರು ‘ಹೆಣಗಳ ಮೇಲೆ ರಾಜಕೀಯ ಮಾಡಬೇಡಿ’ ಎಂದು ಉಪದೇಶ ನೀಡಿದ್ದಾರಂತೆ!

ಇನ್ನು ಜಬಲ್‌ಪುರ್ ಮತ್ತು ರಾಜಕೋಟ್ ಅವಘಡಗಳ ಬಗ್ಗೆ ಇಂತಹ ಸ್ಪಷ್ಟೀಕರಣಗಳೂ ಬಂದಿಲ್ಲ.

ಬಿಹಾರದ 10 ಸೇತುವೆಗಳ ಕುಸಿತಕ್ಕೂ ಬಿಜೆಪಿ/ಎನ್‌ಡಿಎ ಮುಖಂಡರುಗಳಿಂದ ಯಾವುದೇ ಆರೋಪ/ಸ್ಪಷ್ಟೀಕರಣ ಬಂದಿಲ್ಲ–ತನಿಖೆ ನಡೆಸುವುದಾಗಿ ಹೇಳಲಾಗಿದೆಯಷ್ಟೇ. ಈಗ 14 ಇಂಜಿನಿಯರುಗಳನ್ನು ಅಮಾನತು ಮಾಡಲಾಗಿದೆ ಎಂಬ ಸುದ್ದಿ ಬಂದಿದೆ.



ಎಚ್ಚರಿಕೆ!
ಮುಂದೆ ಹೊಸದಾಗಿ ಉದ್ಘಾಟನೆಯಾದ ಮೂಲರಚನಾ ಪ್ರಾಜೆಕ್ಟ್ ಇದೆ.
ವ್ಯಂಗ್ಯಚಿತ್ರ: ಮಂಜುಲ್, ಫೇಸ್‌ಬುಕ್

ಚುನಾವಣಾ ಪ್ರಚಾರದ ವೇಳೆ ಬಹಳಷ್ಟು ಸುದ್ದಿಯಲ್ಲಿದ್ದ ಅಯೋಧ್ಯೆಯ ಶ್ರೀರಾಮಮಂದಿರವಂತೂ ಚುನಾವಣಾ ಫಲಿತಾಂಶದ ನಂತರ ನೇಪಥ್ಯಕ್ಕೆ ಸರಿದಿರುವುದು ಎಲ್ಲರ ಗಮನಕ್ಕೂ ಬಂದಿದೆ.

“ಜನರ ಕೋಟಿಗಟ್ಟಲೆ ಹಣವನ್ನು ಈ ಪ್ರಾಜೆಕ್ಟುಗಳಲ್ಲಿ ಖರ್ಚು ಮಾಡಲಾಗುತ್ತದೆ. ಸಾರ್ವಜನಿಕ ಮೂಲರಚನೆಗಳನ್ನು ನಿರ್ಮಿಸುವಲ್ಲಿ ಇಂತಹ ಅಸಮರ್ಥತೆಗೆ ಉತ್ತರದಾಯಿಗಳು ಯಾರು? ಮೂಲರಚನಾ ಪ್ರಾಜೆಕ್ಟುಗಳು ಮರಳಿನ ಕೋಟೆಗಳೇ? ಉದ್ಘಾಟನಾ ರಿಬ್ಬನುಗಳನ್ನು ಕತ್ತರಿಸುವುದೇ ರಾಜಕೀಯದ ಮತ್ತು ಬದುಕಿನ ಜೀವಾಳವಾಗಿರುವವರು ಅವು ಕುಸಿದಾಗ ಉತ್ತರ ನೀಡದೆ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ” ಎಂದು ಒಬ್ಬ ವೀಕ್ಷಕರು ಟಿಪ್ಪಣಿ ಮಾಡಿದ್ದಾರೆ.

ಇದೇ ಸಮಯದಲ್ಲಿ ‘ಮೋದಿ ಸಂಪೂರ್ಣವಾಗಿ ಬೇರೆಯೇ ತರಹದವರು ಎಂಬುದನ್ನು ಜನ ಕಾಣುತ್ತಿದ್ದಾರೆ. ನಾನು ಒಂದು ವಿಕಸಿತ ಭಾರತವನ್ನು ನಿರ್ಮಿಸಲು ದಣಿವಿಲ್ಲದೆ ದುಡಿಯುತ್ತಿದ್ದೇನೆ’ ಎಂಬ ಪ್ರಧಾನಿ ಮಾತುಗಳನ್ನು ಭಾರತದ ಮತದಾರರು ಒಪ್ಪಿಲ್ಲ ಎಂದೂ ಹೇಳಬಹುದೇನೋ.

ಮೋದಿಯ ಅಡಿಯಲ್ಲಿ “ಎಲ್ಲವೂ ಹಿಂದಿನಂತೆಯೇ ಸಾಗಿವೆ” ಎಂಬ ಕಥನದ ಸೃಷ್ಟಿ–ಸಿಪಿಐ(ಎಂ) ಕೇಂದ್ರ ಸಮಿತಿ..... ಪುಟ 10 ರಿಂದ

ಸುಪ್ರೀಂ ಕೋರ್ಟ್ ‘ದೇಶದ್ರೋಹ’ವನ್ನು ನಿರೂಪಿಸಿದ ಐಪಿಸಿಯ ಸೆಕ್ಷನ್ 124ಎ ಅನ್ನು ಸಾಕಷ್ಟು ಸರಿಯಾಗಿಯೇ ತೆಗೆದು ಹಾಕಿದ್ದರೂ, ಇದನ್ನು ಹೊಸ ಭಾರತೀಯ ನ್ಯಾಯ ಸಂಹಿತೆಯಲ್ಲಿ ಸೆಕ್ಷನ್ 152 ಆಗಿ ಕಳ್ಳತನದಿಂದ ತೂರಲಾಗಿದೆ ಮತ್ತು ಇದರೊಂದಿಗೆ ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯ ಉಲ್ಲೇಖಗಳಿವೆ. ಮೂಲ ಸೆಕ್ಷನ್ 124A ನಲ್ಲಿ ಇವು ಇರಲಿಲ್ಲ. ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದ್ದು, ಹೊಸ ಕಾನೂನಿನಿಂದ ಜನರನ್ನು ‘ರಾಷ್ಟ್ರ ವಿರೋಧಿ’ಗಳೆಂದು ಆರೋಪಿಸುವುದು ಮತ್ತು ಶಿಕ್ಷೆಗೆ ಗುರಿಪಡಿಸುವುದು ಈಗ ಹೆಚ್ಚು ಸುಲಭವಾಗುತ್ತದೆ.

ನಾಗರಿಕರಿಗೆ ಹಾನಿಯಾಗುವಂತಹ ಪೊಲೀಸ್ ಅಧಿಕಾರಗಳನ್ನು ಹೆಚ್ಚಿಸುವ ಅನೇಕ ನಿಬಂಧನೆಗಳಿವೆ. ಉದಾಹರಣೆಗೆ, ಹೊಸ ಕಾನೂನು ಹಿಂದಿನ ಕಾನೂನಿನಲ್ಲಿ ನಿಗದಿಪಡಿಸಿದ 15 ದಿನಗಳ ಮಿತಿಯನ್ನು ಮೀರಿ ಆರೋಪಿಯ ಪೊಲೀಸ್ ಕಸ್ಟಡಿಗೆ ಅವಕಾಶವನ್ನು ನೀಡುತ್ತದೆ. ಹೊಸ ನಿಬಂಧನೆಯ ಅರ್ಥ ನ್ಯಾಯಾಧೀಶರು ಒಬ್ಬ ಆರೋಪಿಯನ್ನು 90 ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಬಹುದು. ಒಂದು ದಂಡನೀಯ ಅಪರಾಧದ ಸಂದರ್ಭದಲ್ಲಿ ಎಫ್‌ಐಆರ್ ಅನ್ನು ಕೂಡ 15 ದಿನಗಳವರೆಗೆ ಪೊಲೀಸ್ ಅಧಿಕಾರಿಯಿಂದ ವಿಚಾರಣೆಯ ನಂತರವೇ ಹಾಕಲಾಗುವುದು.

ಮತ್ತೊಂದು ಅತ್ಯಂತ ಅಪಾಯಕಾರಿ ಅಂಶವೆಂದರೆ ಯುಎಪಿಎ ಅಡಿಯಲ್ಲಿ ಆರೋಪಗಳ ತನಿಖೆಯನ್ನು ಹಿರಿಯ ಪೊಲೀಸ್ ಅಧಿಕಾರಿ ನಡೆಸುತ್ತಾರಾದರೂ, ಹೊಸ ಸೆಕ್ಷನ್ 152 ರ ಅಡಿಯಲ್ಲಿ ಆರೋಪಗಳನ್ನು ಪೊಲೀಸ್ ಠಾಣೆಯಲ್ಲಿ ಒಬ್ಬ ಐ.ಒ. ತನಿಖೆ ಮಾಡುತ್ತಾರೆ. ಯುಎಪಿಎ ಅಡಿಯಲ್ಲಿ, ಸರ್ಕಾರವು ಯಾರನ್ನಾದರೂ ವಿಚಾರಣೆಗೆ ಒಳಪಡಿಸಲು ಮಂಜೂರಾತಿ ನೀಡಬೇಕಾಗಿತ್ತು, ಹೊಸ ನ್ಯಾಯ ಸಂಹಿತೆಯ ಅಡಿಯಲ್ಲಿ, ಒಬ್ಬ ಸಾಮಾನ್ಯ ಪೊಲೀಸ್ ಅಧಿಕಾರಿ ಭಯೋತ್ಪಾದನೆಗಾಗಿ ಯಾರನ್ನಾದರೂ ವಿಚಾರಣೆಗೆ ಒಳಪಡಿಸಬಹುದು.

‘ಒಬ್ಬ ವ್ಯಕ್ತಿ ಎಸಗಿದ ಕೃತ್ಯ ಆ ಸಮಯದಲ್ಲಿ ಕ್ರಿಮಿನಲ್ ಆಗಿದ್ದ ಹೊರತು ಯಾರನ್ನೂ ಶಿಕ್ಷೆಗೆ ಗುರಿಪಡಿಸುವಂತಿಲ್ಲ’ ಎಂಬುದು ಕಾನೂನಿನ ಮೂಲಭೂತ ತತ್ವವಾಗಿದ್ದರೂ, ಜುಲೈ 1 ರ ನಂತರ ಏನಾಗುತ್ತದೆ ಎಂದರೆ ಜುಲೈ 1 ರ ಮೊದಲು ಎಫ್‌ಐಆರ್ ಹಾಕಿದ್ದರೆ ಆ ಸಮಯದಲ್ಲಿ ಜಾರಿಯಲ್ಲಿದ್ದ ಕಾನೂನು ಅನ್ವಯವಾಗುತ್ತದೆ, ಆದರೆ ಜುಲೈ 1 ರ ನಂತರ ದಾಖಲಿಸಲಾದ ಎಫ್‌ಐಆರ್‌ಗಳಿಗೆ ಹೊಸ ಅಂಶಗಳಿರುವ ಕಾನೂನು ಅನ್ವಯಿಸುತ್ತದೆ.

ಇದರರ್ಥ ಎರಡೂ ಕಾನೂನುಗಳು ಏಕಕಾಲದಲ್ಲಿ ಇರುತ್ತವೆ ಮತ್ತು ಯಾವ ವ್ಯವಸ್ಥೆಯನ್ನು ಅನ್ವಯಿಸಬೇಕು ಎಂಬುದರ ಕುರಿತು ವಿವಾದಗಳುಂಟಾಗುತ್ತವೆ. ಮೇಲ್ಮನವಿಗಳು ತುಂಬಾ ಸಂಕೀರ್ಣವಾಗುತ್ತವೆ. ಕಾನೂನು ಏನು ಹೇಳುತ್ತದೆ ಎಂಬುದರ ಕುರಿತು ಈ ಹೊಸ ಕಾನೂನುಗಳು ಅನಿಶ್ಚಿತತೆ ಮತ್ತು ಅಸ್ಪಷ್ಟತೆ ಎರಡನ್ನೂ ಉಂಟು ಮಾಡುತ್ತವೆ, ಇದು ಸ್ವೀಕಾರಾರ್ಹವಲ್ಲ. ಇದು ಲಕ್ಷಗಟ್ಟಲೆ ಕ್ರಿಮಿನಲ್ ಪ್ರಕರಣಗಳ ಬೃಹತ್ ಬಾಕಿಯನ್ನು ಹೆಚ್ಚಿಸುತ್ತದೆ.

ಹೀಗೆ ಈ ಕಾನೂನುಗಳ ಬಗ್ಗೆ ಹಲವಾರು ನೈಜ ಆತಂಕಗಳು ಮತ್ತು ಹಿಂದಕ್ಕೆಳೆಯುವ ಮತ್ತು ಕರಾಳ ಸ್ವರೂಪ ಹೊಂದಿರುವುದರಿಂದಾಗಿ, ಅವುಗಳನ್ನು ಸದ್ಯಕ್ಕೆ ಅನುಷ್ಠಾನಗೊಳಿಸಬಾರದು ಎಂದು ಈ ಬಗ್ಗೆ ಗಂಭೀರ ಆತಂಕ ವ್ಯಕ್ತಡಿಸಿರುವ ವಕೀಲರ ಸಂಘಗಳು, ಕಾಳಜಿಯುಳ್ಳ ನಾಗರಿಕರು ಮತ್ತು ನಾಗರಿಕ ಸಮಾಜದ ಸಂಘಟನೆಗಳ ಆಗ್ರಹಕ್ಕೆ ಸಿಪಿಐ(ಎಂ) ದನಿಗೂಡಿಸುತ್ತದೆ.

ಪಕ್ಷದ 24ನೇ ಮಹಾಧಿವೇಶನ

ಏಪ್ರಿಲ್ 2025 ರಲ್ಲಿ ನಡೆಯಲಿರುವ ಪಕ್ಷದ 24ನೇ ಮಹಾಧಿವೇಶನ ನಡೆಸುವವರೆಗೆ 2024 ರ ಸೆಪ್ಟೆಂಬರ್ ತಿಂಗಳಿನಿಂದ ಎಲ್ಲಾ ಹಂತಗಳಲ್ಲಿ ನಡೆಸಬೇಕಾದ ಪಕ್ಷದ ಸಮ್ಮೇಳನಗಳ ವೇಳಾಪಟ್ಟಿಯನ್ನು ಕೇಂದ್ರ ಸಮಿತಿಯು ಅನುಮೋದಿಸಿತು.





ಬಂಡವಾಳಶಾಹಿ ಬಡತನ ಮತ್ತು ಬಂಡವಾಳಶಾಹಿ-ಪೂರ್ವದ ಬಡತನ

ಬಡತನ ಎಂದರೆ ಜೀವನಕ್ಕೆ ಅತ್ಯಗತ್ಯವಾದ ಬಳಕೆ-ಮೌಲ್ಯಗಳ ಲಭ್ಯತೆಯ ಕೊರತೆ ಎಂದು ವ್ಯಾಖ್ಯಾನಿಸಿದರೂ ಸಹ, ಈ ಕೊರತೆಯು ಬಂಡವಾಳಶಾಹಿಯ ಅಡಿಯಲ್ಲಿ ಅದಕ್ಕೇ ವಿಶಿಷ್ಟವಾದ ಸಾಮಾಜಿಕ ಸಂಬಂಧಗಳೊಂದಿಗೆ ಹೆಣೆದುಕೊಂಡಿದೆ ಮತ್ತು ಬಂಡವಾಳಶಾಹಿ-ಪೂರ್ವದ ಸಮಾಜಗಳಲ್ಲಿನ ಬಡತನಕ್ಕಿಂತ ಭಿನ್ನವಾಗಿದೆ. ಬಂಡವಾಳಶಾಹಿಯ ಅಡಿಯಲ್ಲಿ ಬಡತನವು ಮಾನವ ಘನತೆಯನ್ನೇ ಕಿತ್ತುಕೊಳ್ಳುವ ನಿರ್ದಿಷ್ಟ ಸ್ವರೂಪವನ್ನು ತಳೆದು, ಇನ್ನಷ್ಟು ಅಸಹನೀಯಗೊಳ್ಳುತ್ತದೆ. ಇದನ್ನು ಬಡವರಿಗೆ ಸಾಕಷ್ಟು ಬಜೆಟ್ ವರ್ಗಾವಣೆಗಳ ಮೂಲಕ ನಿವಾರಿಸಬಹುದು ಎಂದು ಯಾರಾದರೂ ಭಾವಿಸಿದ್ದರೆ, ಅದು ತಪ್ಪು ಎಂದೇ ಹೇಳಬೇಕಾಗುತ್ತದೆ. ಈಗ ನಿಜವಾಗಿಯೂ ಬೇಕಾಗಿರುವುದು ಜನತೆಗೆ ಉದ್ಯೋಗ, ಶಿಕ್ಷಣ, ಆರೋಗ್ಯ, ವೃದ್ಧಾಪ್ಯ ಭದ್ರತೆ ಮತ್ತು ಆಹಾರವನ್ನು ಸಾರ್ವತ್ರಿಕವಾಗಿ ಒದಗಿಸಿ ಅವರು ಒಂದು ಪ್ರಜಾಪ್ರಭುತ್ವ ಸಮಾಜದ ನಾಗರಿಕರು ಎಂಬ ಘನತೆಯನ್ನು ಮರುಸ್ಥಾಪಿಸುವ ಕ್ರಮ; ಆದರೆ ಅದು ನವ-ಉದಾರವಾದಿ ಬಂಡವಾಳಶಾಹಿಯನ್ನು ಮೀರಿ ಹೋದಾಗ ಮಾತ್ರವೇ ಸಾಧ್ಯ.

-ಪ್ರೊ. ಪ್ರಭಾತ್ ಪಟ್ನಾಯಕ್-

ಬಡತನ ಎಂಬುದು ಎಲ್ಲ ಉತ್ಪಾದನಾ ವಿಧಾನಗಳಲ್ಲಿ ಇರುವ ಒಂದು ಏಕರೂಪದ ವಿದ್ಯಮಾನವೆಂದು ಪರಿಗಣಿಸಲಾಗುತ್ತದೆ. ಹೆಸರಾಂತ ಅರ್ಥಶಾಸ್ತ್ರಜ್ಞರು ಸಹ ಬಡತನದ ಈ ಏಕರೂಪದ ಪರಿಕಲ್ಪನೆಯನ್ನು ನಂಬುತ್ತಾರೆ. ಆದರೆ ವಾಸ್ತವವಾಗಿ, ಬಂಡವಾಳಶಾಹಿಯ ಅಡಿಯಲ್ಲಿ ಬಡತನವು ಬಂಡವಾಳಶಾಹಿ ಪೂರ್ವದ ಬಡತನಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ಸಂಖ್ಯಾಶಾಸ್ತ್ರೀಯವಾಗಿ ಹೇಳುವುದಾದರೆ ಬಡತನ ಎಂದರೆ ಜೀವನಕ್ಕೆ ಅತ್ಯಗತ್ಯವಾದ ಉಪಯೋಗ-ಮೌಲ್ಯಗಳ ಲಭ್ಯತೆಯ ಕೊರತೆ ಎಂದು ವ್ಯಾಖ್ಯಾನಿಸಿದರೂ ಸಹ, ಈ ಕೊರತೆಯು ಬಂಡವಾಳಶಾಹಿಯ ಅಡಿಯಲ್ಲಿ ಅದಕ್ಕೇ ವಿಶಿಷ್ಟವಾದ ಸಾಮಾಜಿಕ ಸಂಬಂಧಗಳೊಂದಿಗೆ ಹೆಣೆದುಕೊಂಡಿದೆ ಮತ್ತು ಹಿಂದಿನದಕ್ಕಿಂತ ಭಿನ್ನವಾಗಿದೆ. ಬಂಡವಾಳಶಾಹಿಯ ಅಡಿಯಲ್ಲಿ ಬಡತನವು ನಿರ್ದಿಷ್ಟವಾಗಿ ಅಭದ್ರತೆ ಮತ್ತು ಅವಮಾನದ ನಿರ್ದಿಷ್ಟ ಸ್ವರೂಪವನ್ನು ತಳೆಯುತ್ತದೆ. ಇದು ಅದನ್ನು ಇನ್ನಷ್ಟು ಅಸಹನೀಯಗೊಳಿಸುತ್ತದೆ.

ಬಂಡವಾಳಶಾಹಿ ಬಡತನದಲ್ಲಿ ಸರಿಸುಮಾರು ನಾಲ್ಕು ನಿಕಟ ಲಕ್ಷಣಗಳಿವೆ. ಮೊದಲನೆಯದು, ಪರಿಸ್ಥಿತಿಗಳೇನೇ ಇರಲಿ, ಒಪ್ಪಂದಗಳು ಅನುಲ್ಲಂಘನೀಯ ಎಂಬುದರಿಂದ ಉದ್ಭವಿಸುವಂತದ್ದು, ಅಂದರೆ ಬಡವರು ತೆರಬೇಕಾದ್ದನ್ನು ತೆರಲೇಬೇಕು; ಅದು ಆಸ್ತಿಗಳ ನಷ್ಟ ಅಥವಾ ನಿರ್ಗತಿಕತೆಗೆ ಕಾರಣವಾಗುತ್ತದೆ. ಬಂಡವಾಳಶಾಹಿ ಪೂರ್ವದ ಕಾಲದಲ್ಲಿ, ಉದಾಹರಣೆಗೆ ಮೊಘಲ್ ಭಾರತದಲ್ಲಿ, ಕಂದಾಯ ಉತ್ಪನ್ನಕ್ಕೆ ಅನುಗುಣವಾಗಿತ್ತು. ಇದರರ್ಥ ಕೊಯ್ಲು ಚೆನ್ನಾಗಿರದ ವರ್ಷಗಳಲ್ಲಿ, ರೈತರಿಂದ ಕಂದಾಯ ವಸೂಲಿಗಳು ತಂತಾನೇ ಕಡಿಮೆಯಾಗುತ್ತವೆ; ಬೇರೆ ರೀತಿಯಲ್ಲಿ ಹೇಳುವುದಾದರೆ, ಬೆಳೆ ಚೆನ್ನಾಗಿಲ್ಲದ ವರ್ಷಗಳಲ್ಲಿ ರೈತರು ತೆರಬೇಕಾದ ಸುಂಕಗಳು ತಂತಾನೇ ಕಡಿಮೆಯಾಗುತ್ತಿದ್ದವು. ಇನ್ನೂ ಹೇಳುವುದಾದರೆ, ಬೆಳೆ ಚೆನ್ನಾಗಿಲ್ಲದಾಗ ಅದರ ಹೊರೆ ಉತ್ಪಾದಕರು ಮತ್ತು ಧಣಿಗಳ ನಡುವೆ ಹಂಚಿಕೆಯಾಗುತ್ತಿದ್ದವು. ಆದರೆ ವಸಾಹತುಶಾಹಿ ಭಾರತದಲ್ಲಿ, ಅದರ ಬಂಡವಾಳಶಾಹಿ ಸ್ವರೂಪಕ್ಕೆ ಅನುಸಾರವಾಗಿ, ತೆರಿಗೆಯನ್ನು ಭೂಮಿಯ ಮೇಲೆ ವಿಧಿಸಲಾಯಿತು; ಉತ್ಪಾದಕರು ಮತ್ತು ಧಣಿಯ ನಡುವಿನ ಒಪ್ಪಂದವು ಬದಲಾಯಿತು: ಉತ್ಪಾದಕನು ಕೃಷಿ ಮಾಡಬೇಕಾದರೆ ಪ್ರಭುತ್ವಕ್ಕೆ ನಿರ್ದಿಷ್ಟ ಪ್ರಮಾಣದ ಕಂದಾಯವನ್ನು ಪಾವತಿಸಬೇಕು. ಇದರರ್ಥ ಬೆಳೆ ಚೆನ್ನಾಗಿರದ ವರ್ಷದಲ್ಲಿ, ಅದರ ಹೊರೆ ಹಂಚಿಕೆಯಾಗುವುದಿಲ್ಲ, ಅದು ಉತ್ಪಾದಕರ ಮೇಲೆ ಮಾತ್ರ ಬೀಳುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಒಪ್ಪಂದವು, ಉತ್ಪನ್ನದ ಪಾಲಿನ ರೂಪದಲ್ಲಿ ಅಥವಾ ಅದರ ಹಣದ ರೂಪದಲ್ಲಿ ನಿಗದಿತ ಮೊತ್ತದ ಹಣ ಪಾವತಿಗೆ ಆಗಿತ್ತು. ರೈತರ ದಾರಿದ್ರ್ಯ ಅಂದರೆ, ರೈತರ ಆಸ್ತಿ ಲೇವಾದೇವಿದಾರರಿಗೆ ವರ್ಗಾವಣೆಯಾಗುವುದನ್ನು ಇದು ಸೂಚಿಸುತ್ತದೆ. ಸಂಕ್ಷಿಪ್ತವಾಗಿ ಬಡತನವು ನಿರ್ಗತಿಕತೆಗೆ ಸಂಬಂಧಿಸಿದ್ದಾಗಿರುತ್ತದೆ, ಆದ್ದರಿಂದ ಉತ್ಪಾದಕರ ಮೇಲೆ ಸಂಚಿತ ಪರಿಣಾಮವನ್ನು ಉಂಟುಮಾಡುತ್ತದೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಉತ್ಪಾದಕರಿಗೆ ಬಳಕೆ-ಮೌಲ್ಯಗಳಿಗೆ ಲಭ್ಯತೆಯ ಕೊರತೆಯ "ಹರಿವು" ಅವರ ಸ್ವತ್ತುಗಳನ್ನು ವಂಚಿಸುವ "ದಾಸ್ತಾನು" ಪ್ರಕ್ರಿಯೆಯೊಂದಿಗೆ ಇರುತ್ತದೆ, ಇದು ಕ್ರಮೇಣ ಅವರ ದುರ್ಬಲತೆಯನ್ನು ಹೆಚ್ಚಿಸುತ್ತದೆ. ಹೀಗೆ ಬಡತನಕ್ಕೆ ಒಂದು ಚಲನೆಯನ್ನು ಸೇರಿಸಲಾಯಿತು.

ಬಂಡವಾಳಶಾಹಿ ಬಡತನದ ಇತರ ಲಕ್ಷಣಗಳು

ಬಂಡವಾಳಶಾಹಿ ಬಡತನದ ಎರಡನೆಯ ಲಕ್ಷಣವೆಂದರೆ ಅದನ್ನು, ವ್ಯಕ್ತಿಗಳಾಗಲಿ ಅಥವಾ ಕುಟುಂಬಗಳಾಗಲಿ ಬಿಡಿಯಾಗಿ ಅನುಭವಿಸುತ್ತಾರೆ. ಜನರು ಸಮುದಾಯಗಳಲ್ಲಿ ವಾಸಿಸುತ್ತಿದ್ದ ಬಂಡವಾಳಶಾಹಿ-ಪೂರ್ವ ಸಮಾಜದಲ್ಲಿ, ಸಮುದಾಯದ ಇತರ ಸದಸ್ಯರು, ಒಂದೇ ಜಾತಿ-ಗುಂಪಿಗೆ ಅಥವಾ ಒಂದೇ ಹಳ್ಳಿಗೆ ಸೇರಿದವರು ಬೆಳೆ ಚೆನ್ನಾಗಿರದಾಗ ಅಥವಾ ನೈಸರ್ಗಿಕ ವಿಪತ್ತುಗಳಲ್ಲಿ, ನಿರ್ದಿಷ್ಟ ವರ್ಷಗಳಲ್ಲಿ ಬಡವರ ಸಹಾಯಕ್ಕೆ ಬರುತ್ತಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ಕಷ್ಟಕಾಲದಲ್ಲಿ ಒಂಟಿಯಾಗಿರುತ್ತಿರಲಿಲ್ಲ. ಬಂಡವಾಳಶಾಹಿಯ ಅಡಿಯಲ್ಲಿ, ವ್ಯವಸ್ಥೆಯ ಅನಿವಾರ್ಯ ತರ್ಕದಿಂದಾಗಿ ಸಮುದಾಯಗಳು ಒಡೆದುಹೋದಾಗ ಮತ್ತು ವ್ಯಕ್ತಿಯು ಪ್ರಾಥಮಿಕ ಆರ್ಥಿಕ ವರ್ಗವಾಗಿ ಹೊರಹೊಮ್ಮಿದಾಗ, ಈ ವ್ಯಕ್ತಿಯು ಒಂಟಿಯಾಗಿ ಕಷ್ಟವನ್ನು ಅನುಭವಿಸುತ್ತಾನೆ.

ಆರ್ಥಿಕ ಸಿದ್ಧಾಂತದಲ್ಲಿನ ಮಾರ್ಕ್ಸ್‌ವಾದಿಯೇತರ ಸಂಪ್ರದಾಯಗಳು ಈ ಮೂಲಭೂತ ಬದಲಾವಣೆಯನ್ನು ನೋಡಲು ವಿಫಲವಾಗುತ್ತವೆ. ಏಕೆಂದರೆ ಅವುಗಳಿಗೆ ಯಾವುದೇ ಇತಿಹಾಸ ಪ್ರಜ್ಞೆ ಎಂಬುದು ಇರುವುದಿಲ್ಲ. ಇತಿಹಾಸದ ಬಗ್ಗೆ ಅವುಗಳ ಈ ಕುರುಡುತನವನ್ನು ಮಾರ್ಕ್ಸ್ ಟೀಕಿಸಿದ್ದರು: ಅವು ಇತಿಹಾಸದ ಒಂದು ನಿರ್ದಿಷ್ಟ ಹಂತದಲ್ಲಿ ಮಾತ್ರ ಹೊಮ್ಮಿದ ಬಿಡಿ ವ್ಯಕ್ತಿಯ ವಿದ್ಯಮಾನ ಎಂದು ತಿಳಿಯದೆ, ಅದು ಎಲ್ಲಾ ಕಾಲಕ್ಕೂ ಅಸ್ತಿತ್ವದಲ್ಲಿತ್ತು ಎಂದೇ ಭಾವಿಸುತ್ತವೆ. 1870 ರ ಸುಮಾರಿಗೆ ಪ್ರಾರಂಭವಾದ ಕಾರ್ಲ್ ಮೆಂಗರ್ ಮತ್ತು ಸ್ಟಾನ್ಲಿ ಜೆವೊನ್ಸ್‌ರಿಂದ ಪ್ರಾರಂಭವಾಗುವ ನವ-ಶಾಸ್ತ್ರೀಯ ಅರ್ಥಶಾಸ್ತ್ರಗಳಂತೂ ವ್ಯಕ್ತಿಯನ್ನು ದೈವತ್ವಕ್ಕೆ ಏರಿಸಿದವು, ವ್ಯಕ್ತಿಯನ್ನು ಶಾಶ್ವತ ಪ್ರವರ್ಗವಾಗಿಸಿದವು; ಇದೇ ಅವರ ವಿಶ್ಲೇಷಣೆಯ ನಿರ್ಗಮನದ ಬಿಂದುವಾಗಿತ್ತು. ಆದ್ದರಿಂದ ಈ ಎರಡೂ ತೊರೆಗಳಿಗೆ ಬಂಡವಾಳಶಾಹಿ ಬಡತನ ಮತ್ತು ಬಂಡವಾಳಶಾಹಿ-ಪೂರ್ವದ ಬಡತನದ ನಡುವಿನ ವ್ಯತ್ಯಾಸ ಕಾಣಿಸಲಿಲ್ಲ. ಮೊದಲನೆಯದನ್ನು ಬಿಡಿಯಾದ, ಪರಕೀಯಗೊಂಡ ವ್ಯಕ್ತಿಗಳು ಅನುಭವಿಸಿದರೆ, ಎರಡನೆಯದ್ದು ಸಮುದಾಯದೊಳಗೆ ಮಾತ್ರ ಅನುಭವಿಸಿದ ಅಭಾವವನ್ನು ಮತ್ತು ಅದರಿಂದಾಗಿ ಕೊರತೆಯನ್ನು ಹಂಚಿಕೊಂಡದ್ದನ್ನು ಸೂಚಿಸುತ್ತದೆ.

ಪರಕೀಯ ಭಾವ

ಪರಕೀಯ ಭಾವಕ್ಕೊಳಗಾದ ವ್ಯಕ್ತಿಗಳು ಬಂಡವಾಳಶಾಹಿಯ ವಿಶಿಷ್ಟ ಲಕ್ಷಣ. (ಈ ಭಾವ ಅವರು ವಿವಿಧ 'ಸಂಯೋಜನೆ'ಗಳಲ್ಲಿ ಅಥವ ಕಾರ್ಮಿಕ ಸಂಘಗಳಲ್ಲಿ ಒಟ್ಟು ಸೇರಿ ವ್ಯವಸ್ಥೆಯ ವಿರುದ್ಧ ಹೋರಾಟಗಳಲ್ಲಿ ಒಂದಾಗುವವರೆಗೂ ಇರುತ್ತದೆ) ಬಡತನವನ್ನು ಅನುಭವಿಸುವ ಈ ವ್ಯಕ್ತಿಗಳೇ ಬಡತನಕ್ಕೆ ಹೆಚ್ಚುವರಿ ಆಯಾಮವನ್ನು ನೀಡುತ್ತಾರೆ; ಬಂಡವಾಳಶಾಹಿ ಬಡತನವನ್ನು ರೂಪಿಸುವುದು ಉಪಯೋಗ-ಮೌಲ್ಯಗಳ ಲಭ್ಯತೆಯ ಕೊರತೆಯಷ್ಟೇ ಅಲ್ಲ, ಈ ಲಭ್ಯತೆಯ ಕೊರತೆಯೊಂದಿಗೆ ಇರುವ ಮಾನಸಿಕ ವೇದನೆಯೂ ಅದರಲ್ಲಿ ಸೇರಿದೆ.

ಬಂಡವಾಳಶಾಹಿ ಬಡತನದ ಮೂರನೇ ಲಕ್ಷಣವನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಇದು ಎರಡು ಕಾರಣಗಳಿಗಾಗಿ ಉದ್ಭವಿಸುತ್ತದೆ: ಒಂದು ಉದ್ಯೋಗಿಗಳ ಕಡಿಮೆ ವೇತನ, ಮತ್ತು ಇನ್ನೊಂದು ಉದ್ಯೋಗವೇ ಇಲ್ಲದಿರುವುದು. ಬಡತನದಿಂದ ವಿಶೇಷವಾಗಿ ಬಳಲುತ್ತಿರುವಂತದ್ದು ಈ ಕಾರ್ಮಿಕರ ಮೀಸಲು ಪಡೆಯೇ. ವಾಸ್ತವವಾಗಿ ನಮ್ಮಂತಹ ಅರ್ಥವ್ಯವಸ್ಥೆಗಳಲ್ಲಿ "ಉದ್ಯೋಗಿಗಳು" ಮತ್ತು "ನಿರುದ್ಯೋಗಿಗಳು" ಎರಡು ವಿಭಿನ್ನ ಪ್ರವರ್ಗಗಳಾಗಿರುವುದಿಲ್ಲ. ಒಂದು ಸಣ್ಣ ವಿಭಾಗವನ್ನು ಹೊರತುಪಡಿಸಿ, ಹೆಚ್ಚಿನ ಕಾರ್ಮಿಕರು ವಾರದಲ್ಲಿ ಹಲವಾರು ದಿನಗಳು ಅಥವಾ ದಿನದಲ್ಲಿ ಹಲವಾರು ಗಂಟೆಗಳ ಕಾಲ ನಿರುದ್ಯೋಗಿಗಳಾಗಿರುತ್ತಾರೆ, ಇದರಿಂದಾಗಿ ಉದ್ಯೋಗ ಪಡೆಯಲು ಅಸಮರ್ಥವಾಗಿರುವುದರಿಂದ ಉಂಟಾಗಿರುವ ಬಡತನಕ್ಕೆ ಸಂಬಂಧಿಸಿದ ಮಾನಸಿಕ ವೇದನೆ ಹೆಚ್ಚು ವ್ಯಾಪಕವಾಗಿದೆ. ಉದ್ಯೋಗದ ಕೊರತೆಯು ವೈಯಕ್ತಿಕ ವೈಫಲ್ಯವಾಗಿ ಕಾಡುತ್ತದೆ, ಇದು ನಿರ್ದಿಷ್ಟವಾದ ಉಪಯೋಗ-ಮೌಲ್ಯಗಳ ಲಭ್ಯತೆಯ ಕೊರತೆಯೊಂದಿಗೇ ವ್ಯಕ್ತಿಯ ಆತ್ಮಸ್ಥೈರ್ಯವನ್ನು ಕೂಡ ಕುಗ್ಗಿಸುತ್ತದೆ.

ಬಂಡವಾಳಶಾಹಿ ಬಡತನದ ನಾಲ್ಕನೇ ಲಕ್ಷಣವೆಂದರೆ ಅದಕ್ಕೆ ಕಾರಣವಾಗುವ ಅಂಶಗಳು ಅದರಿಂದ ಪೀಡಿತರಿಗೆ ಕಾಣದಿರುವುದು. ಬಂಡವಾಳಶಾಹಿ-ಪೂರ್ವ ಸಮಾಜದಲ್ಲಿ ಒಂದು ನಿರ್ದಿಷ್ಟ ಉಪಯೋಗ-ಮೌಲ್ಯಗಳ ಲಭ್ಯತೆಯ ಕೊರತೆ ಎಂಬ ಅರ್ಥದಲ್ಲಿ ಬಡತನದ ಬೇರು ಉತ್ಪನ್ನದ ಗಾತ್ರ ಮತ್ತು ಅದರಲ್ಲಿ ದಣಿಯು ತೆಗೆದುಕೊಂಡ ಪಾಲಿನಲ್ಲಿದ್ದು, ವಾಸ್ತವವಾಗಿ ಇದು ಎಲ್ಲರಿಗೂ ಗೋಚರಿಸುತ್ತದೆ: ಕೊಯ್ಲು ಒಳ್ಳೆಯದಾಗಿರದಿದ್ದರೆ, ಉತ್ಪನ್ನದ ಗಾತ್ರವನ್ನು ಕಡಿಮೆ ಮಾಡಬಹುದು, ಆ ಮೂಲಕ ಬಡತನವನ್ನು ಉಲ್ಬಣಗೊಳಿಸಬಹುದು (ಇದು ಕೊರತೆಯನ್ನು ಹಂಚಿಕೊಂಡಾಗಲೂ ಸಂಭವಿಸಬಹುದು). ಹಾಗೆಯೇ, ಒಬ್ಬ ಶೋಷಕ ದಣಿ ಸಾಮಾನ್ಯ ಕೊಯ್ಲಿನ ಸಮಯದಲ್ಲೂ ಉತ್ಪಾದಕರಿಂದ ಕಸಿದುಕೊಂಡು, ಅವರಲ್ಲಿ ಅನೇಕರನ್ನು ಬಡತನಕ್ಕಿಳಿಸಬಹುದು. ಆದರೆ ಬಂಡವಾಳಶಾಹಿ ಪರಿಸ್ಥಿತಿಗಳಲ್ಲಿ ಒಬ್ಬ ವ್ಯಕ್ತಿ ಏಕೆ ನಿರುದ್ಯೋಗಿಯಾಗಿ ಉಳಿಯುತ್ತಾನೆ ಮತ್ತು ಅದರಿಂದಾಗಿ ಬಡವನಾಗಿ ಉಳಿಯುತ್ತಾನೆ ಎಂಬುದು ಆ ವ್ಯಕ್ತಿಗೇ ರಹಸ್ಯವಾಗಿ ಉಳಿಯುತ್ತದೆ. ಅಂತೆಯೇ, ಬೆಲೆಗಳು ಹಠಾತ್ತಾಗಿ ಏಕೆ ಏರುತ್ತವೆ, ಹೆಚ್ಚು ಜನರನ್ನು ಬಡತನಕ್ಕೆ ತಳ್ಳುತ್ತವೆ ಎಂಬುದು ಪೀಡಿತರಿಗೆ ನಿಗೂಢವಾಗಿಯೇ ಉಳಿಯುತ್ತದೆ.

1943 ರ ಬಂಗಾಳದ ಕ್ಷಾಮದ ಕುರಿತಾದ ಸತ್ಯಜಿತ್ ರಾಯ್ ಅವರ ಚಲನಚಿತ್ರ (ಆಶನಿ ಸಂಕೇತ್-ದೂರದ ಗುಡುಗು) ಬರಗಾಲದ ಸಮಯದಲ್ಲಿ, ಜಪಾನಿನ ಪಡೆಗಳು ಸಿಂಗಾಪುರವನ್ನು ಆಕ್ರಮಿಸಿಕೊಳ್ಳುತ್ತಿರುವಂತೆ ಬಂಗಾಳದಲ್ಲಿ ಬೆಲೆಗಳು ಏರುತ್ತಿದ್ದುದನ್ನು ತೋರಿಸುತ್ತದೆ. ಇಂದು ಉಕ್ರೇನ್‌ನಲ್ಲಿನ ಯುದ್ಧವು ವಿಶ್ವಾದ್ಯಂತ ಆಹಾರದ ಬೆಲೆಗಳ ಏರಿಕೆಗೆ ನಿಸ್ಸಂಶಯವಾಗಿ ಕೊಡುಗೆ ನೀಡುತ್ತದೆ, ಇದು ದೂರದ ಆಫ್ರಿಕನ್ ಅಥವಾ ಭಾರತೀಯ ಹಳ್ಳಿಯಲ್ಲೂ ಬಡತನವನ್ನು ಉಲ್ಬಣಗೊಳಿಸುತ್ತದೆ. ಮೇಲ್ನೋಟಕ್ಕೆ ಕಾಣುವ ಬಂಡವಾಳಶಾಹಿ ಬಡತನದ ಬೇರುಗಳ ಅಪಾರದರ್ಶಕತೆಗೂ,

ಪುಟ 14 ಕ್ಕೆ

ಯುಕೆ: ಟೋರಿ ಪರಾಭವ, ಲೇಬರ್‌ಗೆ ಭಾರಿ ಬಹುಮತ...

ಪುಟ 16 ರಿಂದ

ಗೆ ಭಾರೀ ಬಹುಮತ ಬಂದಿದೆ. ಆದರೆ ಅದರ ಜನಬೆಂಬಲ ಗಮನಾರ್ಹವಾಗಿ ಹೆಚ್ಚಿಲ್ಲ.

ಕೋಷ್ಟಕ–1 ಯುಕೆ ಚುನಾವಣೆ ಫಲಿತಾಂಶ?
ಪಕ್ಷಗಳ ಸೀಟು, ಮತಗಳಿಕೆ, ಬದಲಾವಣೆ

ಪಕ್ಷ	ಸೀಟು 2024	ಸೀಟು ಗಳಿಕೆ/ನಷ್ಟ (+/–) (2019 ಹೋಲಿಕೆ)	ಮತಗಳಿಕೆ % (2024)	ಮತಗಳಿಕೆ % (2019 ಹೋಲಿಕೆ)
ಲೇಬರ್	411	+211	33.8	+1.7
ಟೋರಿ	121	–251	23.7	–19.9
ಲಿಬರಲ್	72	+63	12.2	+0.6
ರಿಫಾರ್ಮ್	5	+5	14.3	
ಗ್ರೀನ್	4	+3	7.0	
ಸ್ಕಾಟಿಶ್ ನ್ಯಾಶನಲ್	9	–38	2.5	–1.3
ಸಿನ್ ಫಿನ್ ಉ.ಐರ್ಲೆಂಡ್	7	0	1.0	
ಡಿ.ಯು.ಪಿ ಉ.ಐರ್ಲೆಂಡ್	5	0	1.0	
ಪಕ್ಷೇತರರು	6	+6		
ಇತರ ಪಕ್ಷಗಳು	10			

ಇದಕ್ಕೆ ಕಾರಣ ಲೇಬರ್ ಟೋರಿ ಪಕ್ಷದ ನೀತಿಗಳ ಪರಿಣಾಮಗಳನ್ನು ಟೀಕಿಸುತ್ತಾ ಬಂದಿದ್ದರೂ, “ಬದಲಾವಣೆ”ಯ ಥೀಮ್ ಮೇಲೆ ಚುನಾವಣಾ ಪ್ರಚಾರ ನಡೆಸಿದರೂ, “ಬದಲಾವಣೆ” ಏನೆಂಬುದನ್ನು ವಿಷದೀಕರಿಸುವ ಬದಲಿ ನೀತಿಗಳನ್ನು ಕಾರ್ಯಕ್ರಮವಾಗಿ ದೃಢವಾಗಿ ಮುಂದಿಟ್ಟಿಲ್ಲ. ಈಗಿನ ನಾಯಕ ಸ್ಟಾರ್ಮರ್ ಹಿಂದಿನ ನಾಯಕ ಕಾರ್ಬಿನ್ ತಯಾರಿಸಿದ್ದ ಬದಲಿ ನೀತಿಗಳ ಕಾರ್ಯಕ್ರಮವನ್ನು ದುರ್ಬಲಗೊಳಿಸುವ ಅಥವಾ ಕೈ ಬಿಡುತ್ತಾ ಬಂದಿದ್ದರು. ಖಾಸಗೀಕರಣಗೊಂಡ ಎಲ್ಲ ಸಾಮಾಜಿಕ ಸೇವೆಗಳನ್ನು (ನೀರು, ರೈಲು ಇತ್ಯಾದಿ) ಮತ್ತೆ ರಾಷ್ಟ್ರೀಕರಣಗೊಳಿಸುವ ನೀತಿಯನ್ನು ಬರಿಯ ರೈಲ್ವೇ ರಾಷ್ಟ್ರೀಕರಣಕ್ಕೆ ಸೀಮಿತಗೊಳಿಸಿದ್ದರು. ರಾಷ್ಟ್ರೀಯ ಆರೋಗ್ಯ ಸೇವೆಯನ್ನು ಸೂಕ್ತ ಸಂಪನ್ಮೂಲಗಳೊಂದಿಗೆ ಬಲ ಪಡಿಸುವ ಭರವಸೆಯಿತ್ತಿದ್ದರೂ, ಆರೋಗ್ಯ ಸೇವೆಯಲ್ಲಿ “ದಕ್ಷತೆ ಮತ್ತು ಉತ್ತಮ ಸೇವೆ”ಗಾಗಿ ಖಾಸಗಿ ಪಾಲುದಾರಿಕೆ ಬೇಕಾಗುತ್ತದೆ ಎಂದು ಹೇಳಿದ್ದರು. ಸಾಮಾಜಿಕ ಸೇವೆ ಮತ್ತಿತರ ಕಲ್ಯಾಣ ಯೋಜನೆಗಳಿಗೆ ಸಂಪನ್ಮೂಲ ಹೊಂಚಲು ಅತಿ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಹಿಂದಿನ ಪ್ರಸ್ತಾಪಗಳ ಬಗ್ಗೆ ಮೌನವಾಗಿದ್ದರು. ಕಾರ್ಮಿಕರ ಆದಾಯ ಹೆಚ್ಚಿಸುವ ಕ್ರಮಗಳ, ಅದಕ್ಕಾಗಿ ಅವರ ಹೋರಾಟಗಳಾದಾಗ ಅದಕ್ಕೆ ಬೆಂಬಲಿಸುವ, ಸ್ಪಂದನ ತೋರುವ, ದಮನ ಮಾಡದಿರುವ ಕ್ರಮಗಳ ಬಗೆಗಾಗಲಿ ಹೆಚ್ಚು ಮಾತಾಡಲಿಲ್ಲ. ಈ ಕುರಿತ ಟೋರಿ ನೀತಿಗಳನ್ನು ಬದಲಿಸುವ ಭರವಸೆ ನೀಡಲಿಲ್ಲ.

ವಲಸೆಗಾರರ ವಿರುದ್ಧ ನವನಾಜಿ ದ್ವೇಷ ಪ್ರಚಾರ, ಇಸ್ಲಾಂ–ಭೀತಿ ಪ್ರಚಾರಗಳನ್ನು ದೃಢವಾಗಿ ವಿರೋಧಿಸಲಿಲ್ಲ. ಆ ಬಗ್ಗೆ ಟೋರಿ ವಿಚಿತ್ರ ನೀತಿಗಳನ್ನು ವಿರೋಧಿಸಿದರೆ ವಿನಹ, ತಮ್ಮ ನೀತಿಗಳನ್ನು ಸ್ಪಷ್ಟ ಪಡಿಸಲಿಲ್ಲ. ವಿದೇಶಾಂಗ ನೀತಿಯಲ್ಲಿ ಸಹ ಗಾಜಾ ನರಮೇಧದ ಮತ್ತು ಉಕ್ರೇನ್ ಯುದ್ಧದ ವಿರುದ್ಧ ಪ್ರಬಲ ಜನಾಭಿಪ್ರಾಯ ರೂಪುಗೊಳ್ಳುತ್ತಿದ್ದರೂ ಟೋರಿ ನೀತಿಗಿಂತ ಲೇಬರ್ ನೀತಿ ಭಿನ್ನವಾಗಿರಲಿಲ್ಲ. ‘ಇಸ್ರೇಲ್ ಗೆ ತನ್ನ ಸ್ವರಕ್ಷಣೆಯ ಹಕ್ಕು ಇದೆ’ ಎನ್ನುವ, ಗಾಜಾ ನರಮೇಧ ಖಂಡಿಸದಿರುವ ಮತ್ತು ನರಮೇಧ ನಡೆಸುತ್ತಿರುವ ಇಸ್ರೇಲಿಗೆ ಮಿಲಿಟರಿ ಪೂರೈಕೆ ನಿಲ್ಲಿಸದಿರುವ ಟೋರಿ ಸರಕಾರದ ನೀತಿಗಳನ್ನು ವಿರೋಧಿಸಲಿಲ್ಲ ಮಾತ್ರವಲ್ಲ, ಸಮರ್ಥಿಸಿತು. ಇದು ಮುಸ್ಲಿಂ ಗಮನಾರ್ಹ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲಿ ಲೇಬರ್ ಸೋಲಿಗೂ ಕಾರಣವಾಯಿತು. ಭಾರೀ ಇಂಧನ ಬೆಲೆಏರಿಕೆ, ಹಣದುಬ್ಬರಕ್ಕೆ ಕಾರಣವಾಗಿ ಜನರ ಜೀವನವೆಚ್ಚವನ್ನು ಮತ್ತಷ್ಟು ಹದಗೆಡಿಸಿದೆ.

ಉಕ್ರೇನ್ ಯುದ್ಧ ನಿಲ್ಲಿಸುವುದನ್ನು ಬಿಟ್ಟು, ಉಕ್ರೇನ್ ಗೆ ಭಾರಿ ಪ್ರಮಾಣದ ಮಿಲಿಟರಿ, ಹಣಕಾಸು ನೆರವು ನೀಡುವ ನೀತಿಯನ್ನೂ ಸಹ ಲೇಬರ್ ನಾಯಕ ವಿರೋಧಿಸಲಿಲ್ಲ ಮಾತ್ರವಲ್ಲ, ಸಮರ್ಥಿಸಿತು. ಈ ಎಲ್ಲ ನೀತಿಗಳ ವಿರುದ್ಧ ಲೇಬರ್ ಪಕ್ಷದ ಬೆಂಬಲಿಗರು, ನಾಯಕರು ವ್ಯಾಪಕವಾಗಿ ಸಾರ್ವಜನಿಕವಾಗಿ ಪ್ರತಿಭಟನಾ ಪ್ರದರ್ಶನ ಇತ್ಯಾದಿಗಳ ಮೂಲಕ ಅಭಿವ್ಯಕ್ತಪಡಿಸುತ್ತಿದ್ದರೂ ಅದಕ್ಕೆ ಸ್ಪಂದಿಸಲಿಲ್ಲ. ಮಾತ್ರವಲ್ಲ ಅವರ ಮೇಲೆ ಹಲವು ಕಡೆ ಶಿಸ್ತು ಕ್ರಮ ಕೈಗೊಳ್ಳಲಾಯಿತು. ಉದಾಹರಣೆಗೆ ಹಲವು ಪ್ಯಾಲೆಸ್ಟೀನ್ ಪರ ನಾಯಕರಿಗೆ ಟಿಕೇಟು ನಿರಾಕರಿಸಲಾಯಿತು. ಹೀಗೆ ಟೋರಿ ಪಕ್ಷಕ್ಕಿಂತ ಸ್ಪಷ್ಟವಾಗಿ ಭಿನ್ನವಾದ ಜನಪರ ನೀತಿಗಳನ್ನು ಮುಂದಿಡಲಿಲ್ಲ. ಹೀಗಾಗಿ ಲೇಬರ್ ಜನರಲ್ಲಿ ಉತ್ಸಾಹ ಮೂಡಿಸಲಿಲ್ಲ. ಟೋರಿ ವಿರುದ್ಧದ ಪ್ರತಿಭಟನಾ ಮತಗಳು ಉಗ್ರ ಬಲಪಂಥೀಯ ಮತ್ತಿತರ ಪಕ್ಷಗಳಿಗೆ ಹೋಯಿತು. ಲೇಬರ್ ನಾಯಕ ಸ್ಟಾರ್ಮರ್ ಹೇಳಿದ “ಬದಲಾವಣೆ” ನಿಜವಾಗಿಯೂ ಕಾರ್ಬಿನ್ ನಾಯಕತ್ವದಲ್ಲಿ ಸ್ಪಷ್ಟ ಜನಪರ ನೀತಿ ಅಂಗೀಕರಿಸಿದ್ದ ಲೇಬರ್ ಪಕ್ಷವನ್ನು ಮತ್ತೆ ನವ–ಉದಾರವಾದಿ ಬೆಂಬಲಿಗ ಟೋನಿ ಬ್ಲೇರ್ ಕಾಲದ “ನವ ಲೇಬರ್” ನತ್ತ ಬದಲಾಯಿಸುವ ಯೋಜನೆಯಿದ್ದ ಹಾಗಿದೆ. ಆದರೆ ಯುಕೆ ಜನತೆ ಸಾಮಾನ್ಯವಾಗಿ ಮತ್ತು ಲೇಬರ್ ಪಕ್ಷದ ಬೆಂಬಲಿಗ ದುಡಿಯುವ ಜನ, ಅವರ ಸಂಘಟನೆಗಳು ನಿಜವಾದ ಬದಲಿ ನೀತಿಗೆ ಒತ್ತಡ ಹಾಕಲಿವೆ. ಮಾಜಿ ಲೇಬರ್ ನಾಯಕ ಜೆರೆಮಿ ಕಾರ್ಬಿನ್ ಅವರನ್ನು ಪಕ್ಷದಿಂದ ಹಲವು ನೆಪವೊಡ್ಡಿ ಹೊರಹಾಕಿದರೂ ಅವರು ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದಾರೆ,

ಲೇಬರ್ ಪಕ್ಷದ ವೇದಿಕೆಗಳಲ್ಲಿ ಮತ್ತು ಕಾರ್ಪೊರೇಟ್ ಮಾಧ್ಯಮಗಳಲ್ಲಿ ಕಾರ್ಬಿನ್ ಅವರ ವಿರುದ್ಧದ ಪ್ರಚಾರದ ನಂತರ ಈ ಚುನಾವಣೆಯಲ್ಲಿ ಕಾರ್ಬಿನ್ ಅವರನ್ನು ಪಕ್ಷದ ಅಭ್ಯರ್ಥಿಯಾಗಿ ನಿಲ್ಲದಂತೆ ಲೇಬರ್ ನಾಯಕತ್ವವು ನಿರ್ಬಂಧಿಸಿತು. ಇತರ ಲೇಬರ್ ಸದಸ್ಯರು ಸ್ಪಷ್ಟವಾಗಿ ಎಡಕ್ಕೆ ವಾಲುವಂತೆ, ಕಾರ್ಬಿನ್ ಅವರು ಲೇಬರ್ ನಾಯಕರಾಗಿದ್ದ ಅವಧಿಯಲ್ಲಿ, ಸಾರ್ವಜನಿಕರಲ್ಲಿ ವ್ಯಾಪಕ ಬೆಂಬಲವನ್ನು ಪಡೆದರೂ ಸಹ, ಅವರ ನೀತಿಗಳ ವಿರುದ್ಧ ತೀವ್ರ ಒತ್ತಡ ಮತ್ತು ದಾಳಿಗಳನ್ನು ಎದುರಿಸಿದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಹಾಗೆ ಇತರ 4 ಸಮರಶೀಲ ನಾಯಕರು ಪಕ್ಷೇತರರಾಗಿ ಗೆದ್ದಿದ್ದಾರೆ, ಕಾರ್ಬಿನ್ ತಮ್ಮ ಮತ್ತು ಲೇಬರ್ ಪಕ್ಷದ ಬೆಂಬಲಿಗರ, ದುಡಿಯುವ ಜನತೆ ಲೇಬರ್ ನಿಜವಾಗಿಯೂ ಜನಪರ “ಬದಲಾವಣೆ” ತರುವಂತೆ ಒತ್ತಡ ಹಾಕಲಿವೆ ಎಂದಿದ್ದಾರೆ.

ಸ್ಕಾಟಿಶ್ ಪ್ರತ್ಯೇಕತಾವಾದಕ್ಕೆ ಏಟು

ಹಿಂದೆ ಪ್ರಬಲವಾಗಿದ್ದ ಸ್ಕಾಟಿಷ್ ರಾಷ್ಟ್ರೀಯ ಪಕ್ಷವು (ಎಸ್.ಎನ್.ಪಿ) ಒಂದು ದಶಕದಲ್ಲಿ ಮೊದಲ ಬಾರಿಗೆ ಹಿನ್ನಡೆ ಕಂಡಿದೆ. 2019 ರಲ್ಲಿ ಸ್ಕಾಟ್ಲೆಂಡ್‌ನಲ್ಲಿ 48 ಸ್ಥಾನಗಳನ್ನು ಗೆದ್ದ ಎಸ್.ಎನ್.ಪಿ. 9 ಸೀಟುಗಳಿಗೆ ಕುಸಿಯುವ ಮೂಲಕ ಭಾರಿ ಹಿನ್ನಡೆ ಕಂಡಿದೆ.

2014 ರಲ್ಲಿ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ‘ಸ್ಕಾಟಿಷ್ ಸ್ವಾತಂತ್ರ್ಯ’ ಪರ ಬೆಂಬಲ ಪಡೆಯುವ ಪ್ರಯತ್ನದಲ್ಲಿ SNP ವಿಫಲವಾದರೂ ಅದು 2015 ರಿಂದ ಪ್ರತಿ ಯುಕೆ ಚುನಾವಣೆಯಲ್ಲಿ ಬಹುಪಾಲು ಸ್ಕಾಟಿಷ್ ಸ್ಥಾನಗಳನ್ನು ಗೆದ್ದಿದೆ ಮತ್ತು 2007 ರಿಂದ ಪ್ರಾಂತೀಯ ಸರಕಾರವನ್ನು ನಡೆಸುತ್ತಿದೆ.

ಸ್ಕಾಟ್ಲೆಂಡ್ ನ 57 ಸ್ಥಾನಗಳಲ್ಲಿ ಬಹುಮತವನ್ನು ಗೆದ್ದರೆ ಎರಡನೇ ಸ್ವಾತಂತ್ರ್ಯ ಜನಾಭಿಪ್ರಾಯ ಸಂಗ್ರಹಣೆಗೆ ಜನಾದೇಶವಾಗಲಿದೆ ಎಂದು ಅದು ಪ್ರಚಾರ ಮಾಡಿತ್ತು. ಆದರೆ ಪಕ್ಷದ ಸಮಗ್ರ ಸೋಲು ಸಾಧ್ಯತೆಯನ್ನು ಸದ್ಯಕ್ಕೆ ಹಿನ್ನೆಲೆಗೆ ತಳ್ಳುತ್ತದೆ.

ಯುಕೆ ರಾಜಕೀಯದಲ್ಲೂ ದ್ವಿಪಕ್ಷೀಯತೆ ಕುಸಿಯುತ್ತಿದೆ

ಹೆಚ್ಚಿನ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಹೆಚ್ಚು ಕಡಿಮೆ ಒಂದೇ (ಆಳುವ ಬಂಡವಾಳಶಾಹಿ ವರ್ಗದ ಪರ) ಆರ್ಥಿಕ ನೀತಿಗಳನ್ನು ಪಾಲಿಸುವ, ಸಾಮಾಜಿಕ ನೆಲೆ ಮತ್ತು ಸಾಮಾಜಿಕ ನೀತಿಗಳಲ್ಲಿ ಮಾತ್ರ ವ್ಯತ್ಯಾಸವಿರುವ ಎರಡು “ಮುಖ್ಯಧಾರೆ”ಯ ಪಕ್ಷಗಳ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಅಧಿಕಾರ ಈ ಎರಡೂ ಪಕ್ಷಗಳ ನಡುವೆ ಗಿರಕಿ ಹೊಡೆದು ‘ಬದಲಾವಣೆ’ಯ ಪೋಸು ಕೊಡುತ್ತಿರುತ್ತದೆ. ಇತರ ಪಕ್ಷಗಳು ಅಧಿಕಾರಕ್ಕೂ, ಲೆಕ್ಕಕ್ಕೂ ಬಾರದಂತೆ ಹಣಬಲ, ಮಾಧ್ಯಮ ಬಲಗಳ ಮೂಲಕ ಕ್ರಮ ವಹಿಸಲಾಗಿದೆ. ಯು.ಎಸ್.ನಲ್ಲಿ ಇದು ಅತ್ಯಂತ ಉಗ್ರ ರೂಪದಲಿದ್ದರೆ, ಯುರೋಪಿನಲ್ಲೂ ‘ಅನುಪಾತ ಪ್ರಾತಿನಿಧಿಕ ವ್ಯವಸ್ಥೆ’ ಇರುವಲ್ಲೂ ಈ ‘ದ್ವಿಪಕ್ಷೀತೆಯ ರಾಜಕೀಯ” ಜಾರಿಯಲ್ಲಿತ್ತು. ಆದರೆ ಬಂಡವಾಳಶಾಹಿ ವ್ಯವಸ್ಥೆ ಈಗಿನ ನವ–ಉದಾರವಾದಿ ಹಂತದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು ಬೆಲೆಏರಿಕೆ, ನಿರುದ್ಯೋಗ, ಅಸಮಾನತೆ ಮಿತಿಮೀರಿ ಜನರನ್ನು ಭೀಕರವಾಗಿ ತಟ್ಟುತ್ತಿರುವಾಗ “ದ್ವಿಪಕ್ಷೀಯತೆ ರಾಜಕೀಯ” ಕ್ಕೆ ತೀವ್ರ ಸವಾಲು ಎದುರಾಗಿದೆ. ಯುರೋಪಿನ ಹೆಚ್ಚಿನ ದೇಶಗಳಲ್ಲಿ “ದ್ವಿಪಕ್ಷೀಯತೆ ರಾಜಕೀಯ”ದ ‘”ಮುಖ್ಯಧಾರೆ”ಯ ಪಕ್ಷಗಳ ಜನಬೆಂಬಲ ಕುಸಿದಿದೆ. ಉಗ್ರ ಬಲಪಂಥೀಯ ನವ–ನಾಜಿ ರಾಜಕೀಯ ಶಕ್ತಿಗಳು, ವಿಶೇಷವಾಗಿ ಎಡಶಕ್ತಿಗಳು ದುರ್ಬಲವಾಗಿರುವಲ್ಲಿ, ಇದಕ್ಕೆ ಸವಾಲು ಹಾಕಿವೆ.

ಈ ವರೆಗೆ ಯುಕೆ ಯಲ್ಲಿ “ದ್ವಿಪಕ್ಷೀಯತೆ ರಾಜಕೀಯ” ಇನ್ನೂ ಜಾರಿಯಲ್ಲಿತ್ತು. ಆದರೆ ಈ ಚುನಾವಣೆಗಳಲ್ಲಿ "ಮುಖ್ಯಧಾರೆ"ಯಲ್ಲದ ಪಕ್ಷಗಳು ಬರಿಯ ಶೇ.20ರಷ್ಟು ಸೀಟು ಗಳಿಸಿದ್ದರೂ, ಶೇ.40ರಷ್ಟು ಮತ ಗಳಿಸಿವೆ. ‘ದ್ವಿಪಕ್ಷೀಯತೆ ರಾಜಕೀಯ’ ಕುಸಿಯುತ್ತಿರುವುದರ ಸಂಕೇತವಿದು.

ಬಂಡವಾಳಶಾಹಿ ಬಡತನ ಮತ್ತು ಬಂಡವಾಳಶಾಹಿ–ಪೂರ್ವದ ಬಡತನ.....

ಪುಟ 13 ರಿಂದ

ಬಂಡವಾಳಶಾಹಿಯ ಅಡಿಯಲ್ಲಿ ಇಡೀ ಜಗತ್ತು ಅಂತರ–ಸಂಬಂಧ ಹೊಂದಿರುವ ವಿದ್ಯಮಾನಕ್ಕೂ ಪರಸ್ಪರ ನಂಟಿದೆ. ಅಂದರೆ, ಜಾಗತಿಕ ಬೆಳವಣಿಗೆಗಳು, ದೂರದ ದೇಶಗಳಲ್ಲಿನ ಬೆಳವಣಿಗೆಗಳು, ಎಷ್ಟೇ ದೂರದಲ್ಲಿದ್ದರೂ ಪ್ರತಿ ಹಳ್ಳಿಯ ಮೇಲೆ ಪ್ರಭಾವ ಬೀರುತ್ತವೆ.

ಬಜೆಟ್ ವರ್ಗಾವಣೆಗಳು
ಮತ್ತು ಬಡತನ ನಿವಾರಣೆ

ಬಂಡವಾಳಶಾಹಿ ಬಡತನದ ಈ ನಿರ್ದಿಷ್ಟ ಲಕ್ಷಣಗಳು ಪ್ರಮುಖ ಪರಿಣಾಮಗಳನ್ನು ಹೊಂದಿವೆ. ಅವುಗಳಲ್ಲಿ ಒಂದರತ್ತ ಮಾತ್ರ ನಾನು ಗಮನ ಸೆಳೆಯುತ್ತೇನೆ. ಬಡತನವನ್ನು ಕಡಿಮೆ ಮಾಡಲು ಅಥವಾ ತೊಡೆದುಹಾಕಲು ಬಯಸುವ ಅನೇಕ ಸದುದ್ದೇಶವುಳ್ಳ ವ್ಯಕ್ತಿಗಳು ಸಮಾಜದಲ್ಲಿ ಪ್ರತಿಯೊಬ್ಬರಿಗೂ ಕನಿಷ್ಠ ಆದಾಯವಿರುವಂತೆ ಮಾಡಲು ಸರ್ಕಾರದ ಬಜೆಟ್‌ನಿಂದ ಹಣ ವರ್ಗಾವಣೆಯನ್ನು ಮಾಡಬೇಕೆಂದು ಸಲಹೆ ನೀಡುತ್ತಾರೆ, ನಿಜ, ಇದು ಎಲ್ಲಿಯೂ ಅಗತ್ಯ ಪ್ರಮಾಣದಲ್ಲಿ ಸಂಭವಿಸಿಲ್ಲ, ಇದರಿಂದಾಗಿ ಸಾಮಾಜಿಕ ವಿದ್ಯಮಾನವಾಗಿ ಬಡತನವು ಮುಂದುವರಿಯುತ್ತಿದೆ ಮತ್ತು ನವ–ಉದಾರವಾದಿ ಬಂಡವಾಳಶಾಹಿಯಿಂದ ಉಂಟಾದ ಆರ್ಥಿಕ ಹಿಂಜರಿತದ ಜೊತೆಗೆ ಪ್ರಪಂಚದಾದ್ಯಂತದ ಆಹಾರ ಬೆಲೆ ಹಣದುಬ್ಬರದಿಂದ ಇನ್ನಷ್ಟು ಉಲ್ಬಣಗೊಂಡಿದೆ; ವರ್ಗಾವಣೆಯ ಸಲಹೆಗಳು ಕೂಡ ಸಾಮಾನ್ಯವಾಗಿ ಅಲ್ಪ ಪ್ರಮಾಣದ ವರ್ಗಾವಣೆಗಳಿಗಷ್ಟೇ ಇರುತ್ತವೆ. ಆದರೆ ಇದೆಲ್ಲವೂ ಅಂದರೆ ಉಪಯೋಗ–ಮೌಲ್ಯಗಳ ಅಸಮರ್ಪಕ ಲಭ್ಯತೆ ಎಂಬರ್ಥದ ಬಡತನಕ್ಕೆ ಸಂಬಂಧಿಸಿದ್ದು, ನಿರ್ದಿಷ್ಟವಾಗಿ ಬಂಡವಾಳಶಾಹಿ ಬಡತನಕ್ಕೆ ಸಂಬಂಧಪಟ್ಟದ್ದಲ್ಲ.

ಸಾಕಷ್ಟು ವರ್ಗಾವಣೆಗಳನ್ನು ಮಾಡಿ ಮತ್ತು ಉಪಯೋಗ–ಮೌಲ್ಯಗಳ ಲಭ್ಯತೆಯ ಕೊರತೆ ಎಂಬರ್ಥದ ಬಡತನವನ್ನು ನಿವಾರಿಸಬಹುದಾದರೂ, ಬಂಡವಾಳಶಾಹಿ ಬಡತನವನ್ನು, ಮಾನಸಿಕ ವೇದನೆಯನ್ನೂ ನಿರುದ್ಯೋಗದ ಮೂಲಕ ಸ್ವಾಭಿಮಾನವನ್ನು ಕಿತ್ತುಕೊಳ್ಳುವ ಬಂಡವಾಳಶಾಹಿ ಬಡತನವನ್ನು ಅದು ನಿವಾರಿಸಲಾರದು. ನಿಜವಾದ ಅರ್ಥದಲ್ಲಿ ಬಂಡವಾಳಶಾಹಿ ಬಡತನವನ್ನು ತೊಡೆದು ಹಾಕಬೇಕಾದರೆ ಅದಕ್ಕೆ ಸಾರ್ವತ್ರಿಕ ಉದ್ಯೋಗವನ್ನು ಒದಗಿಸುವ ಅಗತ್ಯವಿದೆ. ಬಂಡವಾಳಶಾಹಿಯ ಅಡಿಯಲ್ಲಿ ಇದನ್ನು ಮಾಡಬಹುದೆಂದು ಕೇನ್ಸ್ ಭಾವಿಸಿದ್ದರು, ಆದರೆ ಅದು ತಪ್ಪು ಎಂದು ಸಾಬೀತಾಗಿದೆ. ಇದರರ್ಥ ವರ್ಗಾವಣೆ ಮಾಡಬಾರದು ಎಂದೇನೂ ಅಲ್ಲ; ಆದರೆ ಅದು ಖಂಡಿತವಾಗಿಯೂ ಸಾಲದು, ಅದು ಸಮಸ್ಯೆಯ ಮೂಲಕ್ಕೆ ಹೋಗದ ಉಪಶಮನಕಾರಿ ಕ್ರಮವಷ್ಟೇ.

ಭಾರತದಲ್ಲಿ ಅಂತೆಯೇ ಪ್ರಸ್ತುತ ಸುಮಾರು 80 ಕೋಟಿ ಫಲಾನುಭವಿಗಳಿಗೆ ತಿಂಗಳಿಗೆ ತಲಾ ಐದು ಕಿಲೋಗ್ರಾಂಗಳಷ್ಟು ಉಚಿತ ಆಹಾರಧಾನ್ಯಗಳನ್ನು ನೀಡಲಾಗುತ್ತಿದೆ. ಇದು ಅವರಿಗೆ ಎಷ್ಟು ತಲುಪುತ್ತದೆ, ಈ ಯೋಜನೆ ಎಷ್ಟು ಕಾಲ ಮುಂದುವರಿಯುತ್ತದೆ (ಸಾಂಕ್ರಾಮಿಕದಿಂದಾಗಿ ಇದನ್ನು ಪ್ರಾರಂಭಿಸಲಾಗಿತ್ತು) ಎಂಬುದು ಚರ್ಚಾಸ್ಪದ ವಿಷಯಗಳು. ಆದರೆ ಈ ರೀತಿಯ ಯೋಜನೆಗಳು ಸಮಕಾಲೀನ ಭಾರತದಲ್ಲಿ ಬಡತನಕ್ಕೆ ರಾಮಬಾಣವಾಗಿದೆ ಎಂದು ಯಾರಾದರೂ ನಂಬುತ್ತಿದ್ದರೆ, ಅದು ಖಂಡಿತವಾಗಿಯೂ ಸರಿಯಲ್ಲ ಎಂದು ಬೇಸರದಿಂದ ಹೇಳಬೇಕಾಗುತ್ತದೆ. ಬೇಕಾಗಿರುವುದು ಜನತೆಗೆ ಉದ್ಯೋಗ, ಶಿಕ್ಷಣ, ಆರೋಗ್ಯ, ವೃದ್ಧಾಪ್ಯ ಭದ್ರತೆ ಮತ್ತು ಆಹಾರವನ್ನು ಸಾರ್ವತ್ರಿಕವಾಗಿ ಒದಗಿಸಿ, ಅವರು ಒಂದು ಪ್ರಜಾಪ್ರಭುತ್ವ ಸಮಾಜದ ನಾಗರಿಕರು ಎಂಬ ಘನತೆಯನ್ನು ಮರುಸ್ಥಾಪಿಸುವುದು; ಆದರೆ ಹೀಗೆ ಮಾಡಲು ನವ–ಉದಾರವಾದಿ ಬಂಡವಾಳಶಾಹಿಯನ್ನು ಮೀರಿ ಹೋಗಬೇಕಾಗುತ್ತದೆ.

–ಕೆ.ವಿ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉಪ ಯೋಜನೆ ಹಣ ಸಾಮಾನ್ಯ ವಿಭಾಗದ ಬಳಕೆಗೆ ವರ್ಗಾವಣೆ

ದಲಿತ ಸಬಲೀಕರಣಕ್ಕೆ ಕೊಟ್ಟ ಬಾರಿ ಪೆಟ್ಟು

ಬಿ. ರಾಜಶೇಖರಮೂರ್ತಿ
ರಾಜ್ಯ ಉಪಾಧ್ಯಕ್ಷರು
ದಲಿತ ಹಕ್ಕುಗಳ ಸಮಿತಿ-ಕರ್ನಾಟಕ

ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ(SCSP-STSP)ಗೆ ಮೀಸಲಾದ 39,121 ಕೋಟಿ ರೂಪಾಯಿ ಹಣದಲ್ಲಿ 14,282.38 ಕೋಟಿ ರೂಪಾಯಿಗಳನ್ನು ರಾಜ್ಯದ 5 ಗ್ಯಾರಂಟಿ ಯೋಜನೆಗಳಿಗೆ ಬಳಸುತ್ತೇವೆ ಎಂದು ರಾಜ್ಯದ ಮುಖ್ಯಮಂತ್ರಿ ಎಸ್. ಸಿದ್ಧರಾಮಯ್ಯನವರು ಘೋಷಿಸಿದ್ದು, ಇದು ಸಾಮಾಜಿಕ ನ್ಯಾಯಕ್ಕೆ ಬಗೆದ ದ್ರೋಹವು, ದಲಿತ ಸಮುದಾಯಕ್ಕೆ ಎಸಗಿದ ವಂಚನೆಯೂ ಆಗಿದೆ.

ಜುಲೈ 5, 2024 ರಂದು ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ(ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ.)ಯ ರಾಜ್ಯ ಅಭಿವೃದ್ಧಿ ಪರಿಷತ್ ಅಧ್ಯಕ್ಷರಾಗಿರುವ ಮುಖ್ಯಮಂತ್ರಿ ಎಸ್. ಸಿದ್ದರಾಮಯ್ಯ ಅವರು ತಾವು ಪರಿಷತ್ ಸಭೆ ನಡೆಸಿ, ಪರಿಶಿಷ್ಟರ ಅಭಿವೃದ್ಧಿಗಾಗಿ 39,121 ಕೋಟಿ ರೂಪಾಯಿಗಳ ವೆಚ್ಚಕ್ಕೆ ಅನುಮೋದನೆ ನೀಡಿದ್ದೇವೆಂದು ಪ್ರಕಟಿಸಿದರು. ಆದರೆ ಇದು ಮುಖ್ಯಮಂತ್ರಿಯವರ ಒಂದು ಟೊಳ್ಳು ಘೋಷಣೆಯಾಗಿದೆ. ಅಷ್ಟು ಮಾತ್ರವಲ್ಲ, ಬಡ ದಲಿತರಿಗೆ ಸರಕಾರ ಎಸಗಿದ ವಂಚನೆಯಾಗಿದೆ.

ಏಕೆಂದರೆ ಇದೇ ಪರಿಷತ್ ಸಭೆಯಲ್ಲಿ ಎಸ್‌ಸಿಎಸ್‌ಪಿ/ಎಸ್‌ಟಿಎಸ್‌ಪಿ ಉಪಯೋಜನೆಯ ಒಟ್ಟು ಹಣದಲ್ಲಿ 14,282.38 ಕೋಟಿ ರೂಪಾಯಿಗಳನ್ನು ರಾಜ್ಯದ 5 ಗ್ಯಾರಂಟಿ ಯೋಜನೆಗಳಿಗೆ ಬಳಸುತ್ತೇವೆ ಎಂದೂ, ದಲಿತರೂ ಕೂಡ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿರುವುದರಿಂದ ಈ ಮೊತ್ತವನ್ನು ದಲಿತ ಕಲ್ಯಾಣಕ್ಕೇ ಬಳಸಿದಂತಾಗುತ್ತದೆ ಎಂದು ಮುಖ್ಯಮಂತ್ರಿಗಳು ಹೇಳುವ ಮೂಲಕ ತಮ್ಮ ಸರಕಾರದ ತಪ್ಪು ನೀತಿಗೆ ಸಮಜಾಯಿಷಿ ಕೊಡುವ ಪ್ರಯತ್ನವನ್ನೂ ಮಾಡಿದ್ದಾರೆ. ಎಲ್ಲ ಸಮುದಾಯಗಳ ಜನರೂ ಫಲಾನುಭವಿಗಳಾಗಿರುವ ಸಾಮಾನ್ಯ ಯೋಜನೆಗಳಿಗಿಂತ ಭಿನ್ನವಾಗಿ ದಲಿತ ವಿಭಾಗದ ಎಸ್.ಟಿ. ಮತ್ತು ಎಸ್.ಸಿ. ಸಮುದಾಯಗಳ ಸಬಲೀಕರಣ ಮತ್ತು ಕಲ್ಯಾಣಕ್ಕಾಗಿಯೇ ಪ್ರತ್ಯೇಕ ನಿಧಿಯನ್ನು ಮೀಸಲಿಡಬೇಕು. ಇಲ್ಲವಾದಲ್ಲಿ ಅಭಿವೃದ್ಧಿ ಯೋಜನೆಗಳ ಫಲ ಈ ಶೋಷಿತ ಸಮುದಾಯಗಳಿಗೆ ಸಮರ್ಪಕವಾಗಿ ತಲುಪುವುದಿಲ್ಲ. ಸಾಮಾನ್ಯ ಅಭಿವೃದ್ಧಿ ಯೋಜನೆಗಳ ಫಲದ ಬಹುಪಾಲು ಭಾಗವನ್ನು ಸಮಾಜದ ಬಲಾಢ್ಯ ಜಾತಿ-ವರ್ಗಗಳ ಜನರೇ ಕಬಳಿಸುತ್ತಾರೆ. ಹಾಗಾಗಬಾರದು ಎಂಬ ತಿಳುವಳಿಕೆಯ ಆಧಾರದಲ್ಲಿ ರೂಪುಗೊಂಡದ್ದು ಈ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ. ಈ ಯೋಜನೆಯ ಮೂಲ ಉದ್ದೇಶ, ನಿಜವಾದ ಪರಿಕಲ್ಪನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಸರಕಾರದ ಸಮಜಾಯಿಷಿಗೆ ಯಾವುದೇ ಅರ್ಥವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಇದಲ್ಲದೇ ಕಾಂಗ್ರೆಸ್ ಪಕ್ಷದ 5 ಗ್ಯಾರಂಟಿ ಯೋಜನೆಗಳನ್ನು ಈಡೇರಿಸಲು ಬಡ ದಲಿತರ ಹಣವೇ ಬೇಕಿತ್ತೇ? ಎಂಬ ಗಂಭೀರ ಪ್ರಶ್ನೆ ಇಲ್ಲಿ ಏಳುತ್ತದೆ. ಸಮಾಜದ ಶ್ರೀಮಂತ, ಬಂಡವಾಳಿಗ ವರ್ಗಗಳಿಗೆ ಒಂದಷ್ಟು ತೆರಿಗೆ ವಿಧಿಸುವ ಮೂಲಕ ಅಥವಾ ಬಡವರು, ದುಡಿಯುವ ವರ್ಗಗಳಿಗೆ ಹೊರೆಯಾಗದಂತೆ ಹಣ ಹೊಂದಿಸುವ ಹಲವು ಮಾರ್ಗಗಳನ್ನು ಕಂಡುಕೊಳ್ಳುವುದು ಸಾಧ್ಯವಿದೆ. ಅದಕ್ಕೆ ರಾಜಕೀಯ ಇಚ್ಚಾಶಕ್ತಿ ಇರಬೇಕಷ್ಟೆ. ಹೀಗಾಗಿ 'ಸಾಮಾಜಿಕ ನ್ಯಾಯ'ದ ಪರವಾಗಿದ್ದೇನೆಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರ ನೇತೃತ್ವದ ಸರಕಾರವು ಇಂತಹ ದಲಿತ ವಿರೋಧಿ ಕೆಲಸಕ್ಕೆ ಇಳಿಯಬಾರದಾಗಿತ್ತು. ಈ ರೀತಿಯಲ್ಲಿ ಒಂದು ಕೈಯಲ್ಲಿ ಕೊಟ್ಟಂತೆ ಮಾಡಿ, ಇನ್ನೊಂದು ಕೈಯಲ್ಲಿ ವಾಪಸ್ಸು ಪಡೆಯುವುದು ದಲಿತರಿಗೆ ಮಾಡುವ ಅನ್ಯಾಯವಾಗಿದೆ. ಪರಿಷತ್ ಸಭೆಯಲ್ಲಿ 14,282.38 ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲು ಹೊರಟಿರುವುದು ದಲಿತ ಸಮುದಾಯವನ್ನು ವಂಚಿಸುವ ನೀತಿಯೇ ಆಗಿದೆ.

ಕಳೆದ 10 ವರ್ಷಗಳಲ್ಲಿ ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಯೋಜನೆಗಳಿಗೆ ಬಜೆಟ್‌ಗಳಲ್ಲಿ ಘೋಷಿಸಿರುವುದು ಎರಡೂವರೆ ಲಕ್ಷ ಕೋಟಿಗಿಂತ ಹೆಚ್ಚು. ಇಷ್ಟು ದೊಡ್ಡ ಪ್ರಮಾಣದ ಹಣ ಅರ್ಹ ಬಡ ದಲಿತರಿಗೆ ತಲುಪದೆ, ಸಾಮಾನ್ಯ ಯೋಜನೆಗಳಿಗೆ ಬಳಕೆಯಾಗುವುದು, ಆ ಮೂಲಕ ದುರಪಯೋಗವಾಗಿರುವುದೇ ಹೆಚ್ಚಾಗಿದೆ. ಈ ಮೊತ್ತದಲ್ಲಿ ಗಣನೀಯ ಭಾಗವನ್ನು ದಲಿತರ ಅಭ್ಯುದಯಕ್ಕೆ ಬದಲಾಗಿ ಇತರೆ ಸಾಮಾನ್ಯ ಯೋಜನೆ-ಕಾಮಗಾರಿಗಳಿಗೆ ಬಳಸಲಾಗಿದೆ. ಹೀಗಾಗಿಯೇ ಕಳೆದ ಬಜೆಟ್‌ನಲ್ಲಿ 7(ಡಿ) ಕಾಲಂನ್ನು ತಿದ್ದುಪಡಿ ಮಾಡುತ್ತೇವೆಂದು ಘೋಷಿಸಿ, ಕಾಂಗ್ರೆಸ್ ಸರಕಾರವೇ ತಿದ್ದುಪಡಿ ಮಾಡಿದ್ದು. ಈಗ ತಮ್ಮದೇ ಸರಕಾರ ರೂಪಿಸಿದ್ದ ನೀತಿಯನ್ನು ಉಲ್ಲಂಘಿಸುತ್ತಿರುವುದು ಎಷ್ಟು ಸರಿ? ಎಂಬ ಪ್ರಶ್ನೆಯೂ ಉದ್ಭವಿಸಿದೆ. ರಾಜ್ಯದಲ್ಲಿರುವ ಒಟ್ಟು ಶೇ.26 ರಷ್ಟಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಮಾತ್ರ ಈ ಮೀಸಲು ಹಣವನ್ನು ಬಳಕೆ ಮಾಡಬೇಕೆಂಬುದು ಕಾಯ್ದೆಯ ಉದ್ದೇಶವಾಗಿದೆ. ಆದರೆ ರಾಜ್ಯ ಸರ್ಕಾರ ಕಾಯ್ದೆಗೆ, ಕಾಯ್ದೆಯ ಮೂಲ ಉದ್ದೇಶಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ.

ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸೇರಿದಂತೆ, ಮೀಸಲು ಕ್ಷೇತ್ರಗಳನ್ನು ಪ್ರತಿನಿಧಿಸುವ ಮಂತ್ರಿಗಳು, ಶಾಸಕರು ಆಳುವ ಸರ್ಕಾರದ ಅಧಿಕಾರಕ್ಕೆ ಹೆದರಿ, ಇಂತಹ ತೀರ್ಮಾನಗಳಲ್ಲಿ ತಾವು ಭಾಗಿಗಳಾಗಿ ಸಮ್ಮತಿ ಸೂಚಿಸಿರುವುದು ಅಥವಾ ಮೌನವಹಿಸಿರುವುದು ವಿಷಾದನೀಯವಾಗಿದೆ.

ಕಾಂಗ್ರೆಸ್ ಪಕ್ಷದ ಆಶ್ವಾಸನೆಗಳನ್ನು ನಂಬಿ, ಸಾಮಾಜಿಕ ನ್ಯಾಯ ದೊರೆಯುವ ನಿರೀಕ್ಷೆಯಲ್ಲಿ ದಲಿತ ಸಮುದಾಯದ ಗಣನೀಯ ವಿಭಾಗವು ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದೆ. ಹೀಗೆ ಚುನಾವಣೆಯಲ್ಲಿ ದಲಿತರ ಮತ ಪಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸುವುದನ್ನು ಈ ಕೂಡಲೇ ತಡೆಹಿಡಿಯಬೇಕು. ಈ ಉಪಯೋಜನೆಯ ಭಾಗವಾಗಿ ಮೀಸಲಿಟ್ಟ ಹಣವನ್ನು ದಲಿತರ ಸಬಲೀಕರಣಕ್ಕೆ ಮಾತ್ರವೇ ಬಳಸುವಂತಾಗಬೇಕು.

ರಾಜ್ಯ ಸರ್ಕಾರ ಈ ಕೂಡಲೇ ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಉಪ ಯೋಜನೆ ಅನುದಾನ-ಅನುಷ್ಠಾನದ ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ದಲಿತರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ಎದುರಾಗಿರುವ ಸಮಸ್ಯೆ-ಸವಾಲುಗಳ ಕುರಿತು ಚರ್ಚಿಸುವುದಕ್ಕಾಗಿಯೇ ಒಂದು ವಾರ ಕಾಲದ 'ವಿಶೇಷ ವಿಧಾನಸಭಾ ಅಧಿವೇಶನ'ವನ್ನು ಕರೆಯಬೇಕು. ಅದೇ ರೀತಿಯಲ್ಲಿ ಜಿಲ್ಲಾ-ತಾಲ್ಲೂಕು-ಗ್ರಾಮ ಪಂಚಾಯಿತ್‌ಗಳು, ಬೃಹತ್ ಮಹಾನಗರ ಪಾಲಿಕೆಗಳು, ನಗರ ಪಾಲಿಕೆಗಳು, ನಗರ ಸಭೆ, ಪುರಸಭೆ ಮುಂತಾದ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲೂ ಒಂದು ವಾರಗಳ ಕಾಲ ವಿಶೇಷ ಸಭೆಗಳನ್ನು ನಡೆಸಬೇಕು. ರಾಜ್ಯಮಟ್ಟದಿಂದ ಸ್ಥಳೀಯ ಗ್ರಾಮ ಪಂಚಾಯತ್ ಮಟ್ಟದವರೆಗೂ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಮಿತಿಗಳ ಸಭೆಗಳು ಕಾಲಕಾಲಕ್ಕೆ ಸೇರುವಂತಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಯೋಜನೆಗಳನ್ನು ಪುನರ್ ರೂಪಿಸಬೇಕು. ಆಯಾಯಾ ಜಿಲ್ಲಾ ನೈಸರ್ಗಿಕ ಸಂಪನ್ಮೂಲಗಳನ್ನು ಆಧರಿಸಿ ಉದ್ಯೋಗ ಸೃಷ್ಟಿಸುವಂತಹ ಯೋಜನೆಗಳನ್ನು ಆರಂಭಿಸಬೇಕು.



ಕಳೆದ 10 ವರ್ಷಗಳ ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಅನುದಾನ ಮತ್ತು ಅನುಷ್ಠಾನದ ಬಗ್ಗೆ ತಜ್ಞರ ಸಮಿತಿ ರಚಿಸಿ ಮೌಲ್ಯಮಾಪನ ಮಾಡಬೇಕು. ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಕಾಯ್ದೆ ಉಪ ಯೋಜನೆಗಳ ಅನುಷ್ಠಾನಗೊಳಿಸುವಲ್ಲಿ ವಿಳಂಬ ಮಾಡುವ ಅಥವ ನಿರ್ಲಕ್ಷ್ಯ ತೋರುವ ಅಧಿಕಾರಿಗಳನ್ನು ಕಾಯ್ದೆಯ ನಿಯಮದಂತೆ ಕಾನೂನಾತ್ಮಕವಾಗಿ ಶಿಕ್ಷೆಗೆ ಗುರಿಪಡಿಸಬೇಕು. ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಉಪ ಯೋಜನೆಗಳ ಬಗ್ಗೆ ಎಸ್.ಸಿ., ಎಸ್.ಟಿ. ಸಮುದಾಯದ ಜನರ ಮನೆ ಮನೆಗೂ ಭೇಟಿ ನೀಡಿ ಜಾಗೃತಿ ಮೂಡಿಸುವಂತಾಗಬೇಕು. ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ರಾಜ್ಯ ವಿಚಕ್ಷಣಾ (vegilence) ಆಯೋಗ ರಚಿಸಬೇಕು.

ಈ ಒಟ್ಟು ಪರಿಸ್ಥಿತಿ ಮತ್ತು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇನ್ನಾದರೂ ಎಲ್ಲಾ ದಲಿತ ಪರ ಸಂಘಟನೆಗಳು ಒಂದಾಗಿ, ಆಳುವ ಸರ್ಕಾರಗಳ ದಲಿತ ವಿರೋಧಿ ಧೋರಣೆಯನ್ನು ವಿರೋಧಿಸಿ ಎಸ್.ಸಿ.ಎಸ್.ಪಿ-ಎಸ್.ಟಿ.ಎಸ್.ಪಿ. ಉಪಯೋಜನೆಯ ಸಮರ್ಪಕ ಜಾರಿಗಾಗಿ ಚಳವಳಿಯನ್ನು ರೂಪಿಸಲು ಮುಂದಾಗಬೇಕು.

ಜಿಯೋ, ಏರ್ಟೆಲ್ ರೀಚಾರ್ಜ್ ದರ ಹೆಚ್ಚಳ: ಜನರ ಮೇಲೆ 20,000 ಕೋಟಿ ಹೆಚ್ಚಿನ ಹೊರೆ.... ಪುಟ 9 ರಿಂದ

ಬಿಎಸ್‌ಎನ್‌ಎಲ್ ತನ್ನ 4ಜಿ ಮತ್ತು 5ಜಿ ಸೇವೆಗಳನ್ನು ಇಂದಿನವರೆಗೂ ಪ್ರಾರಂಭಿಸಲು ಏಕೆ ಸಾಧ್ಯವಾಗಲಿಲ್ಲ? ಮೋದಿ ಸರ್ಕಾರವು ತಂದೊಡ್ಡಿದ ಕೆಳಗಿನ ಎರಡು ಅಡೆ-ತಡೆಗಳು ಇದಕ್ಕೆ ಕಾರಣ.

ಎ) 2019 ರಲ್ಲಿ, ಬಿಎಸ್‌ಎನ್‌ಎಲ್ ತನ್ನ ಅಸ್ತಿತ್ವದಲ್ಲಿರುವ 3ಜಿ ನೆಟ್‌ವರ್ಕ್ ಅನ್ನು 4ಜಿ ನೆಟ್‌ವರ್ಕ್ ಗೆ ಅಪ್‌ಗ್ರೇಡ್ ಮಾಡಲು ಅನುಮತಿಸಲಿಲ್ಲ.

ಬಿ) ಮತ್ತೆ 2020 ರಲ್ಲಿ, ರಿಲಯನ್ಸ್ ಜಿಯೋ ಮತ್ತು ಏರ್ಟೆಲ್ ಗೆ ಸಮಾನವಾಗಿ ಜಾಗತಿಕ ಮಾರಾಟಗಾರರಿಂದ ಸ್ಟ್ಯಾಂಡರ್ಡ್ 4ಜಿ ಉಪಕರಣಗಳನ್ನು ಖರೀದಿಸಲು ಬಿಎಸ್‌ಎನ್‌ಎಲ್ ಅನ್ನು ನಿರ್ಬಂಧಿಸಲಾಗಿದೆ. ಬದಲಾಗಿ, ಬಿಎಸ್‌ಎನ್‌ಎಲ್ ತನ್ನ 4ಜಿ ಉಪಕರಣಗಳನ್ನು ಭಾರತೀಯ ಉಪಕರಣ ತಯಾರಕರಿಂದ ಮಾತ್ರ ಪಡೆದುಕೊಳ್ಳಲು ಒತ್ತಾಯಿಸಲಾಗಿದೆ.

ಮೇ 2023 ರಲ್ಲಿ, ಮಾಜಿ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು ಬಿಎಸ್‌ಎನ್‌ಎಲ್ ತನ್ನ 4ಜಿ ಸೇವೆಯನ್ನು ಕೆಲವೇ ವಾರಗಳಲ್ಲಿ ಪ್ರಾರಂಭಿಸಲಿದೆ ಮತ್ತು ಅದೇ ವರ್ಷದ ನವೆಂಬರ್/ಡಿಸೆಂಬರ್ ವೇಳೆಗೆ 5ಜಿ ಸೇವೆಗೆ ಅಪ್‌ಗ್ರೇಡ್ ಮಾಡಲಾಗುವುದು ಎಂದು ಹೆಮ್ಮೆಪಟ್ಟಿದ್ದರು. ಆದಾಗ್ಯೂ, ಬಿಎಸ್‌ಎನ್‌ಎಲ್ ತನ್ನ 4ಜಿ ಸೇವೆಯನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

BSNL ನೌಕರರ ಒಕ್ಕೂಟದ ಪ್ರದರ್ಶನಗಳು

ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, BSNL ನೌಕರರ ಒಕ್ಕೂಟವು (BSNLEU) ತನ್ನ ಗ್ರಾಹಕರಿಗೆ 4ಜಿ ಸೇವೆಯನ್ನು ಒದಗಿಸಲು ವೊಡಾಫೋನ್ ಐಡಿಯಾದ ನೆಟ್ವರ್ಕ್ ಅನ್ನು ಬಳಸಲು ತಾತ್ಕಾಲಿಕವಾಗಿ ಅನುಮತಿ ನೀಡಬೇಕು ಎಂದು ಒತ್ತಾಯಿಸಿದೆ. ವೊಡಾಫೋನ್ ಐಡಿಯಾದ ಅತಿದೊಡ್ಡ ಷೇರುದಾರರಾಗಿರುವುದರಿಂದ, ಸರ್ಕಾರವು ಈ ಪ್ರಸ್ತಾಪವನ್ನು ಉತ್ತಮವಾಗಿ ಕಾರ್ಯಗತಗೊಳಿಸಬಹುದಿತ್ತು. ಆದರೆ ಮಾಡಲಿಲ್ಲ. BSNLEU ಈ ಬೇಡಿಕೆಯ ಅನುಷ್ಠಾನಕ್ಕೆ ಒತ್ತಾಯಿಸಿ ದೇಶಾದ್ಯಂತ ಪ್ರದರ್ಶನಗಳನ್ನು ಆಯೋಜಿಸಿತು.

ಜಿಯೋ ಮತ್ತು ಏರ್ಟೆಲ್ ನ ವಿಪರೀತ ಸುಂಕ ಹೆಚ್ಚಳದ ಹಿನ್ನೆಲೆಯಲ್ಲಿ, ಬಿಎಸ್‌ಎನ್‌ಎಲ್ ಉದ್ಯೋಗಿಗಳ ಒಕ್ಕೂಟ ಮತ್ತೊಮ್ಮೆ ಸಂಪರ್ಕ ಸಚಿವರಿಗೆ ಪತ್ರ ಬರೆದಿದ್ದು, ಬಿಎಸ್‌ಎನ್‌ಎಲ್ ನ 4ಜಿ ಸೇವೆಯನ್ನು ತಕ್ಷಣ ಪ್ರಾರಂಭಿಸಲು ಮತ್ತು 5ಜಿ ಸೇವೆಗೆ ಶೀಘ್ರವಾಗಿ ಅಪ್‌ಗ್ರೇಡ್ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದೆ. 4ಜಿ ಮತ್ತು 5ಜಿ ಸೇವೆಗಳನ್ನು ಪ್ರಾರಂಭಿಸುವ ಮೂಲಕ, ಬಿಎಸ್‌ಎನ್‌ಎಲ್ ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಹೆಚ್ಚಿನ ವೇಗದ ಡೇಟಾ ಸೇವೆಯನ್ನು ಒದಗಿಸುವ ಸ್ಥಾನದಲ್ಲಿರುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE July 8-14, 2024 Price: Rs. 10/- Date of Publication: 05 July 2024 RNI No. KARKAN /2006/17926 Posted on 10-07-2024
Posted at BG PSO, BG - 560026 **Posted at Periodical Rate -** Rs. 2

ಆಳುವ ಟೋರಿ (ಅಥವಾ ಕನ್ಸರ್ವೇಟಿವ್) ಪಕ್ಷ ಪರಾಭವ ಹೊಂದಿದೆ. ಇದರೊಂದಿಗೆ ಕಳೆದ 14 ವರ್ಷಗಳ ಸತತ ಟೋರಿ ಆಳ್ವಿಕೆ ಕೊನೆಗೊಂಡಿದೆ. ಟೋರಿಗಳ ಮೇಲೆ ಜನರ ಆಕ್ರೋಶವಿದ್ದು, ಅವರನ್ನು ಸೋಲಿಸಲು ಪಣ ತೊಟ್ಟಿದ್ದಾರೆ ಎಂಬುದು ಸ್ಪಷ್ಟವಿದೆ. ಟೋರಿಗಳ ಪರಾಭವ ಸಮಗ್ರವಾಗಿದೆ. ಬಹುಮತ ಮತ್ತು ಭಾರೀ ಸಂಖ್ಯೆಯಲ್ಲಿ ಸೀಟುಗಳನ್ನು ಕಳೆದುಕೊಂಡದ್ದು ಮಾತ್ರವಲ್ಲ, ಮತಗಳಿಕೆಯಲ್ಲೂ ಶೇ.20ರಷ್ಟು ನಷ್ಟವಾಗಿದೆ. ಮಾಜಿ ಪ್ರಧಾನಿ ಲಿಝ್ ಟ್ರಸ್ ಸೇರಿದಂತೆ 11 ಪ್ರಮುಖ ಸಚಿವರು ಸೋತಿದ್ದಾರೆ. ಲೇಬರ್ ದೊಡ್ಡ ಸಂಖ್ಯೆಯಲ್ಲಿ (211) ಸೀಟು ಹೆಚ್ಚಿಸಿಕೊಂಡು ಭಾರೀ ಬಹುಮತ (ಶೇ. 63 ಪ್ರಮಾಣದ ಸೀಟುಗಳು) ಪಡೆದಿದ್ದರೂ, ಅದರ ಮತಗಳಿಕೆ ಪ್ರಮಾಣ ಶೇ.33.8 ಮಾತ್ರವಿದ್ದು, 2019ಕ್ಕೆ ಹೋಲಿಸಿದರೆ ಶೇ.1.7 ಗಳಷ್ಟು ಮಾತ್ರ ಏರಿತ್ತು. ಲೇಬರ್ ಪಕ್ಷ ಯು.ಕೆ.ಯ ಚರಿತ್ರೆಯಲ್ಲೇ ಅತ್ಯಂತ ಕಡಿಮೆ ಮತಗಳಲ್ಲಿ ಅತಿ ಹೆಚ್ಚು ಸೀಟು ಗಳಿಸಿದ ರೆಕಾರ್ಡ್ ಮಾಡಿದೆಯಂತೆ! ಅದು ಹೇಗೆ ಸಾಧ್ಯ? ಈ ಚುನಾವಣೆಗಳಲ್ಲಿ "ಮುಖ್ಯಧಾರೆ"ಯಲ್ಲದ ಪಕ್ಷಗಳು ಬರಿಯ ಶೇ.20ರಷ್ಟು ಸೀಟು ಗಳಿಸಿದ್ದರೂ, ಶೇ.40ರಷ್ಟು ಮತ ಗಳಿಸಿವೆ. "ದ್ವಿಪಕ್ಷೀತೆಯ ರಾಜಕೀಯ" ಕುಸಿಯುತ್ತಿರುವುದರ ಸಂಕೇತವಿದು. ವಿಶ್ಲೇಷಣೆ ಮತ್ತು ವಿವರಗಳಿಗೆ ಮುಂದೆ ಓದಿ.





ಯುಕೆ: ಟೋರಿ ಪರಾಭವ, ಲೇಬರ್‌ಗೆ ಭಾರಿ ಬಹುಮತ, ಆದರೆ ಭಾರೀ ಬೆಂಬಲವಿಲ್ಲ?!

ಜಗದ ಸುತ್ತು
ವಸಂತರಾಜ್ ಎನ್.ಕೆ.

ಯು.ಕೆ. (ಯುನೈಟೆಡ್ ಕಿಂಗ್‌ಡಮ್)ಯಲ್ಲಿ ಜುಲೈ 4ರಂದು ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಚಾರಿತ್ರಿಕ ಫಲಿತಾಂಶ ಬಂದಿದೆ. ಪ್ರಧಾನಿ ರಿಶಿ ಸುನಕ್ ಅವರ ಆಳುವ ಟೋರಿ (ಅಥವಾ ಕನ್ಸರ್ವೇಟಿವ್) ಪಕ್ಷ ಪರಾಭವ ಹೊಂದಿದೆ. ಇದರೊಂದಿಗೆ ಕಳೆದ 14 ವರ್ಷಗಳ ಸತತ ಟೋರಿ ಆಳ್ವಿಕೆ ಕೊನೆಗೊಂಡಿದೆ. ಟೋರಿ ಪಕ್ಷ 251 ಸೀಟು ಕಳೆದುಕೊಂಡು ಇತ್ತೀಚಿನ ದಶಕಗಳಲ್ಲೇ ಅತ್ಯಂತ ಕನಿಷ್ಠ ಮಟ್ಟವಾದ 121 ಸೀಟುಗಳಿಗೆ ಕುಸಿದಿದೆ. ಲೇಬರ್ ಪಕ್ಷ 650 ಸೀಟುಗಳ ಪಾರ್ಲಿಮೆಂಟಿನಲ್ಲಿ 411 ಸೀಟುಗಳನ್ನು ಗಳಿಸಿ 1997ರ ನಂತರ ಅತಿ ಹೆಚ್ಚು ಸೀಟು ಗಳಿಸಿದೆ. ಮೂರನೇ ಎರಡು ಪ್ರಮಾಣದ (63% ಸೀಟುಗಳು) ಬಹುಮತಕ್ಕೆ ಹತ್ತಿರ ಬಂದಿದೆ. 2019ಕ್ಕೆ ಹೋಲಿಸಿದರೆ, 211 ಸೀಟುಗಳನ್ನು ಹೆಚ್ಚಿಸಿಕೊಂಡಿದೆ. ಲೇಬರ್ ಪಕ್ಷದ ನಾಯಕ ಕೀರ್ ಸ್ಟಾರ್ಮರ್ ಅವರನ್ನು ಪ್ರಧಾನಿಯಾಗಿ ನೇಮಿಸಲಾಗಿದೆ. ಲಿಬರಲ್ ಡೆಮೊಕ್ರಾಟಿಕ್ ಪಕ್ಷ ಸಹ ಅನಿರೀಕ್ಷಿತವಾಗಿ 71 ಸೀಟು ಗಳಿಸಿ ಪಕ್ಷದ ಚರಿತ್ರೆಯಲ್ಲೇ ಅತ್ಯಂತ ಹೆಚ್ಚು ಸೀಟು ಗಳಿಸಿದೆ. ಈ ಚುನಾವಣೆಯ ಮತದಾನದ ಪ್ರಮಾಣ (60%) 2001ರ ನಂತರ ಕಂಡು ಬಂದ ಅತಿ ಕಡಿಮೆ ಪ್ರಮಾಣ ಎನ್ನಲಾಗಿದೆ.

ಯುರೋ ಕೂಟದ ಚುನಾವಣೆಯಲ್ಲಿ ಹಲವು ಪ್ರಮುಖ ದೇಶಗಳಲ್ಲಿ ಉಗ್ರ ಬಲಪಂಥೀಯ ಪಕ್ಷಗಳ ಭಾರೀ ಮುನ್ನಡೆಯ ಮತ್ತು ಇತ್ತೀಚೆಗೆ ಫ್ರಾನ್ಸ್ ನ ಮೊದಲ ಸುತ್ತಿನಲ್ಲಿ ಉಗ್ರ ಬಲಪಂಥೀಯ ಪಕ್ಷ ಮೊದಲ ಸ್ಥಾನದಲ್ಲಿ ಬಂದು, ಎರಡನೇ ಸುತ್ತಿನಲ್ಲಿ ಬಹುಮತ ಪಡೆಯುವ ಸಾಧ್ಯತೆಯ ಹಿನ್ನೆಲೆಯಲ್ಲಿ ಯುಕೆ ಚುನಾವಣೆ ಸ್ವಲ್ಪ ಸಮಾಧಾನ ತರಬಹುದಾದರೂ, ವಿವರಗಳಿಗೆ ಹೋದರೆ ಆಶ್ಚರ್ಯ ಕಾದಿದೆ. ಹಲವು ಅವತಾರಗಳಲ್ಲಿ (ಬ್ರೆಕ್ಸಿಟ್, ಯುಕೆ ಇಂಡಿಪೆಂಡೆಂಟ್ ಇತ್ಯಾದಿ) ಬಹಳ ಕಾಲದಿಂದ ಯುಕೆ ಯಲ್ಲಿ ಇದ್ದ, ಈ ಬಾರಿ 'ರಿಫಾರ್ಮ್' ಪಕ್ಷವಾಗಿ ಸ್ಪರ್ಧಿಸಿದ್ದ ಉಗ್ರ ಬಲಪಂಥೀಯ ಪಕ್ಷ ಕೇವಲ 5 ಸೀಟು ಗಳಿಸಿದರೂ ಶೇ.14 ಮತ ಗಳಿಸಿದ್ದು ರಾಜಕೀಯವಾಗಿ ಗಮನಾರ್ಹ.

ಚುನಾವಣಾ ಫಲಿತಾಂಶಗಳ ವಿವರಗಳಿಗೆ ಹೋದರೆ ಇತರ ಕೆಲವು ಮುಖ್ಯ ಅಂಶಗಳು ಕಾಣಿಸುತ್ತಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಟೋರಿ ಗಳಿಗೆ ಅವಮಾನಕಾರಿ ಸಮಗ್ರ ಸೋಲು

ಟೋರಿ ಗಳ ಮೇಲೆ ಜನರ ಆಕ್ರೋಶವಿದ್ದು, ಅವರನ್ನು ಸೋಲಿಸಲು ಪಣ ತೊಟ್ಟಿದ್ದಾರೆ ಎಂಬುದು ಸ್ಪಷ್ಟವಿದೆ. ಟೋರಿ ಗಳ ಪರಾಭವ ಸಮಗ್ರವಾಗಿದೆ. ಬಹುಮತ ಮತ್ತು ಭಾರೀ ಸಂಖ್ಯೆಯಲ್ಲಿ ಸೀಟುಗಳನ್ನು ಕಳೆದುಕೊಂಡದ್ದು ಮಾತ್ರವಲ್ಲ, ಮತಗಳಿಕೆಯಲ್ಲೂ ಶೇ.20ರಷ್ಟು ನಷ್ಟವಾಗಿದೆ. ಮಾಜಿ ಪ್ರಧಾನಿ ಲಿಝ್ ಟ್ರಸ್ ಸೇರಿದಂತೆ 11 ಪ್ರಮುಖ ಸಚಿವರು ಸೋತಿದ್ದಾರೆ. ಯಾವುದೇ ಮಾಜಿ ಪ್ರಧಾನಿ ಸೋತಿರುವುದು ಇದೇ ಮೊದಲು ಎನ್ನಲಾಗಿದೆ. ಟೋರಿ ಪಕ್ಷ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳಲ್ಲಿ ನಷ್ಟ ಅನುಭವಿಸಿದೆ. ದಕ್ಷಿಣ ಇಂಗ್ಲೆಂಡಿನಲ್ಲಿ 100ಕ್ಕೂ ಹೆಚ್ಚು ಸೀಟು ಗಳಿಸಿದೆ. ವೇಲ್ಸ್ ನಲ್ಲಿ ಶೂನ್ಯ ಸಂಪಾದನೆ ಮಾಡಿದೆ.

ಮಿತವ್ಯಯದ ಹೆಸರಲ್ಲಿ ಸಾಮಾಜಿಕ ಸೇವೆಗಳಲ್ಲಿ ಭಾರೀ ಕಡಿತ; ರಾಷ್ಟ್ರೀಯ ಆರೋಗ್ಯ ಸೇವೆ ಸಂಪನ್ಮೂಲಗಳಿಲ್ಲದೆ ಭಾರೀ ವಿಳಂಬ ಮತ್ತು ಕಳಪೆಯಾಗಿರುವುದು; ಖಾಸಗೀಕರಿಸಿದ ಸಾರ್ವಜನಿಕ ಸೇವೆಗಳಲ್ಲಿ (ನೀರು ಪೂರೈಕೆ, ರೈಲು ಇತ್ಯಾದಿ) ಭ್ರಷ್ಟಾಚಾರ, ದುಬಾರಿ ಕೆಟ್ಟ ಸೇವೆ; ಕೊವಿಡ್ ಮಹಾಸಾಂಕ್ರಾಮಿಕದ ನಿರ್ವಹಣೆಯಲ್ಲಿ ಕೊರತೆಯಿಂದ ಭಾರೀ ಸಾವು-ನೋವು; ಬ್ರೆಕ್ಸಿಟ್ ನಿಂದ ಮತ್ತು ಉಕ್ರೇನ್ ಯುದ್ಧದಿಂದ ಉಲ್ಬಣಗೊಂಡ ಬೆಲೆ ಏರಿಕೆ ಮತ್ತು ಜೀವನ ವೆಚ್ಚದ ಏರಿಕೆಯ ಬಗ್ಗೆ ನಿರ್ಲಕ್ಷ; ಇತ್ತೀಚಿನ ಪ್ರಧಾನಿಗಳಾದ ಜಾನ್ಸನ್, ಲಿಝ್, ರಿಶಿ ಮತ್ತು ಹಲವು ಸಚಿವರ ಬೇಜವಾಬ್ದಾರಿ ವರ್ತನೆಗಳು, ವಿಚಿತ್ರ ನೀತಿಗಳು, ಕಳಪೆ ಸಾಧನೆ ಮತ್ತು ಭ್ರಷ್ಟಾಚಾರ ಇವೆಲ್ಲ ಟೋರಿ ಪರಾಭವಕ್ಕೆ ಕಾರಣವೆನ್ನಲಾಗಿದೆ.

ಯುರೋ ಕೂಟ ಬಿಡಬೇಕೇ ಎಂಬ 2016ರ 'ಬ್ರೆಕ್ಸಿಟ್' ಎಂದು ಕರೆಯಲಾದ ಜನಮತ ಸಂಗ್ರಹದಲ್ಲಿ 'ಬಿಡಬೇಕು' ಎಂದು ಭಾರೀ ಬಹುಮತದಲ್ಲಿ ಹೇಳಿದ ಕ್ಷೇತ್ರಗಳಲ್ಲಿ ಟೋರಿ ಪಕ್ಷ ಭಾರೀ ಮತ ಕಳೆದುಕೊಂಡು ಸೋತಿದೆ. ಬ್ರೆಕ್ಸಿಟ್ ಅನ್ನು ಟೋರಿ ಸರಕಾರ ಬೆಂಬಲಿಸಿತ್ತು, ಲೇಬರ್ ವಿರೋಧಿಸಿತ್ತು. 'ಬ್ರೆಕ್ಸಿಟ್' ಗೆ ಪರ-ವಿರೋಧ ಮತಗಳಲ್ಲಿ ಸ್ವಲ್ಪವೇ ಅಂತರವಿದ್ದು, ಅದರ ಪರ ಮತ ಗಳಿಸಲು ಟೋರಿ ತನ್ನ ಪ್ರಚಾರದಲ್ಲಿ ಹಲವು ಸುಳ್ಳುಗಳನ್ನು, ಅತಿಶಯೋಕ್ತಿಗಳನ್ನು, ಭರವಸೆಗಳನ್ನು ನೀಡಿತ್ತು. 'ಬ್ರೆಕ್ಸಿಟ್ ನಂತರ ಯುಕೆ ಜಾಗತಿಕ ವ್ಯಾಪಾರ ಹೆಚ್ಚುತ್ತದೆ', 'ಅದು ಯುಕೆ ಆರ್ಥಿಕಕ್ಕೆ ಒಳ್ಳೆಯದು', 'ಜನರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ'. ಆದರೆ ಇದು ವಾಸ್ತವದಲ್ಲಿ ತಿರುವು ಮುರುವಾದಾಗ ಜನರ ಆಕ್ರೋಶ ಹೆಚ್ಚಿತ್ತು. ಮನೆಸಾಲ ದರ ವಿಪರೀತವಾಗಿ ಏರಿದ್ದರಿಂದ ಮನೆಸಾಲ ಹೆಚ್ಚಿನ ಪ್ರಮಾಣದಲ್ಲಿದ್ದ ಕ್ಷೇತ್ರಗಳಲ್ಲೂ ಟೋರಿ ಪಕ್ಷ ಭಾರೀ ಮತ ಕಳೆದುಕೊಂಡು ಸೋತಿದೆ.



ವಿದೇಶಿ ವಲಸೆಗಾರರನ್ನು ತಡೆಯಲು ರಿಶಿ ಸುನಕ್ ಅವರ ಇತ್ತೀಚಿನ ವಿಚಿತ್ರ ಪರಿಹಾರ (ರವಾಂಡಾ ಕ್ಕೆ ಅವರನ್ನು ಕಳಿಸಿ ಅಲ್ಲಿ ಕ್ಯಾಂಪುಗಳಲ್ಲಿರಿಸುವ) ವಿವಾದಾಸ್ಪದವಾಗಿತ್ತು. ವಿದೇಶಿ ವಲಸೆಗಾರರ ಸಂಖ್ಯೆ ಹೆಚ್ಚುತ್ತಿರುವುದರಿಂದ ಯುಕೆ ಜನರ ಒಂದು ವಿಭಾಗ ನಿಜವಾಗಿಯೂ ಆತಂಕಿತವಾಗಿದ್ದರೆ, ಇನ್ನೊಂದು ವಿಭಾಗ (ಸ್ವತಃ ಮಾಜಿ ವಲಸೆಗಾರರರು) ಮತ್ತು ವಲಸೆಗಾರರು ಯುಕೆ ಆರ್ಥಿಕ ಸಮಸ್ಯೆಗಳಿಗೆ ಕಾರಣರಲ್ಲವೆಂದು ಅರ್ಥ ಮಾಡಿಕೊಂಡಿರುವವರು ಈ ಸಮಸ್ಯೆಯನ್ನು ಉದ್ದೇಶಪೂರ್ವಕವಾಗಿ ಅತಿಯಾಗಿ ಹಿಗ್ಗಿಸಲಾಗುತ್ತಿದೆಯೆಂದು ನಂಬಿದ್ದರು. ಈ ವಿಭಾಗದ ಆಕ್ರೋಶ ಇದರಿಂದ ಹೆಚ್ಚಾಗಿರಬಹುದು.

ಅದೇ ರೀತಿ ಉಕ್ರೇನ್ ಯುದ್ಧದಲ್ಲಿ ಉಕ್ರೇನ್‌ಗೆ, ಗಾಜಾ ನರಮೇಧದಲ್ಲಿ ಇಸ್ರೇಲಿಗೆ ಯುಕೆ ಸರಕಾರದ ಬೆಂಬಲದ ನೀತಿಗೆ ವ್ಯಾಪಕ ವಿರೋಧವಿತ್ತು. ಈ ನೀತಿಗಳ ವಿರುದ್ಧ ಸತತ ಭಾರೀ ಪ್ರದರ್ಶನಗಳು ನಡೆಯುತ್ತಿದ್ದು, ಅದನ್ನು ಸರಕಾರ ದಮನಗೊಳಿಸುತ್ತಿತ್ತು. ಇದೂ ಚುನಾವಣಾ ವಿಷಯವಾಗಿದ್ದು, ಇದೂ ಟೋರಿಗಳಿಗೆ ಸಾಕಷ್ಟು ನಷ್ಟವುಂಟು ಮಾಡಿರಬಹುದು. ಪ್ರಮುಖವಾಗಿ ಗಾಜಾ ನರಮೇಧಕ್ಕೆ ಯುಕೆ ಬೆಂಬಲವನ್ನು ವಿರೋಧಿಸಿ ನಿಂತ 5 ಪಕ್ಷೇತರರು, ಟೋರಿ ಮತ್ತು ಈ ಕುರಿತು ಸ್ಪಷ್ಟ ದೃಢ ನಿಲುವು ತಳೆಯದ ಲೇಬರ್ ಅಭ್ಯರ್ಥಿ, ಇಬ್ಬರನ್ನೂ ಸೋಲಿಸಿ ಆಯ್ಕೆಯಾಗಿದ್ದಾರೆ. ಉಗ್ರ ಬಲಪಂಥೀಯ ರಿಫಾರ್ಮ್ ಪಕ್ಷ ಉಕ್ರೇನ್ ಯುದ್ಧ ವಿರೋಧಿಸಿದ್ದು, ಅದರ ಭಾರೀ ಮತ-ಏರಿಕೆಗೆ ಇದೂ ಒಂದು ಕಾರಣವಾಗಿರಬಹುದು.

ಲೇಬರ್ ಗೆ ಭಾರೀ ಬಹುಮತ, ಆದರೆ ಭಾರೀ ಬೆಂಬಲವಿಲ್ಲ

ಲೇಬರ್ ದೊಡ್ಡ ಸಂಖ್ಯೆಯಲ್ಲಿ (211) ಸೀಟು ಹೆಚ್ಚಿಸಿಕೊಂಡು ಭಾರೀ ಬಹುಮತ (ಶೇ. 63 ಪ್ರಮಾಣದ ಸೀಟುಗಳು) ಪಡೆದಿದ್ದರೂ, ಅದರ ಮತಗಳಿಕೆ ಪ್ರಮಾಣ ಶೇ.33.8 ಮಾತ್ರವಿದ್ದು, 2019ಕ್ಕೆ ಹೋಲಿಸಿದರೆ ಶೇ.1.7 ಗಳಷ್ಟು ಮಾತ್ರ ಏರಿತ್ತು. ಲೇಬರ್ ಪಕ್ಷ ಯುಕೆ ಯ ಚರಿತ್ರೆಯಲ್ಲೇ ಅತ್ಯಂತ ಕಡಿಮೆ ಮತಗಳಲ್ಲಿ ಅತಿ ಹೆಚ್ಚು ಸೀಟು ಗಳಿಸಿದ ರೆಕಾರ್ಡ್ ಮಾಡಿದೆಯಂತೆ! ಅದು ಹೇಗೆ ಸಾಧ್ಯ? ಇದು ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಅತ್ಯಂತ ಹೆಚ್ಚು ಮತ ಪಡೆದ ಅಭ್ಯರ್ಥಿ ಗೆಲ್ಲುವ ಯುಕೆ ಚುನಾವಣಾ ವ್ಯವಸ್ಥೆಯ (ಭಾರತದಲ್ಲೂ ಇದೇ ವ್ಯವಸ್ಥೆಯಿದೆ) ವಿಪರೀತಗಳಲ್ಲಿ ಒಂದು. ಹೀಗಾಗಿ ಶೇ.33.8 ಮತ ಗಳಿಸಿದ ಲೇಬರ್ ಶೇ.63 (411) ಸೀಟುಗಳನ್ನು ಗಳಿಸಿದೆ. ಶೇ.14 ಮತ ಗಳಿಸಿದ ರಿಫಾರ್ಮ್ ಕೇವಲ ಶೇ.0.8 (5) ಸೀಟು ಗಳಿಸಿದೆ. ಟೋರಿ ಪಕ್ಷದ ಮತ ಪ್ರಮುಖವಾಗಿ ದೊಡ್ಡ ಪ್ರಮಾಣದಲ್ಲಿ ರಿಫಾರ್ಮ್ ಪಕ್ಷಕ್ಕೆ ಹೋಗಿದೆ. ಹೀಗಾಗಿ ಲೇಬರ್

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**